RBI Licence No. : RBI-UBD-KAN-1439 P Dt. 10-07-1997

Estd. 1968
Regd. No. : B/ARBL/1386/68-69

# ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ. 6, ಆಸ್ಪತ್ರೆ ರಸ್ತೆ, ಬೆಂಗಳೂರು-560 053. **ಟೆಲಿಫೋನ್:** 2225 3389, 2226 8535
ಶಾಖೆ : ನಂ. 730, 14ನೇ ಮುಖ್ಯ ರಸ್ತೆ, ಕುಮಾರಸ್ವಾಮಿ ಲೇಔಟ್, ಬೆಂಗಳೂರು - 560 111 ದೂ.: 2666 1253
e-mail : info@mscmbank.in **Website: www.mscmbank.in**

## 57ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,
ಬ್ಯಾಂಕಿನ 57ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು **ದಿನಾಂಕ 01-09-2024 ರಂದು ಭಾನುವಾರ ಬೆಳಿಗ್ಗೆ 11-00 ಘಂಟೆಗೆ** ಬ್ಯಾಂಕಿನ ಅಧ್ಯಕ್ಷರಾದ **ಶ್ರೀ ಎನ್ ಎಸ್ ಶ್ರೀನಿವಾಸಮೂರ್ತಿ ಇವರ ಅಧ್ಯಕ್ಷತೆಯಲ್ಲಿ ಸರ್ ಎಂ.ವಿ. ಆಡಿಟೋರಿಯಂ** 2ನೇ ಮಹಡಿ, ಎಫ್‌ಕೆಸಿಸಿಐ ಬಿಲ್ಡಿಂಗ್, ಫೆಡರೇಷನ್ ಹಾಲ್, ಕೆ.ಜಿ. ರಸ್ತೆ, ಬೆಂಗಳೂರು – 560 009. ಇಲ್ಲಿ ಈ ಕೆಳಗಿನ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವ ಸಲುವಾಗಿ ಕರೆಯಲಾಗಿದೆ ತಾವುಗಳು ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ
**ಬಿ.ಎ.ಕೃಷ್ಣ ಭಗವಾನ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: 05/08/2024

## ಮಹಾ ಸಭೆಯ ಕಾರ್ಯಕಲಾಪಗಳು

1. ಪ್ರಾರ್ಥನೆ.
2. ಸ್ವಾಗತ.
3. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದು.
4. 57ನೇ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರವನ್ನು (ನೋಟೀಸು) ಓದಿ ದಾಖಲಿಸುವುದು.
5. 56ನೇ ವಾರ್ಷಿಕ ಸರ್ವ ಸದಸ್ಯರ ಸಭಾ ನಡವಳಿಕೆ (2022-23) ಮಂಡಿಸಿ ಅಂಗೀಕರಿಸುವುದು.
6. ಬ್ಯಾಂಕಿನ ಹಿರಿಯ ಸದಸ್ಯರಿಗೆ ಸನ್ಮಾನಿಸುವುದು.
7. ಉತ್ತಮ ಗ್ರಾಹಕರಿಗೆ ಸನ್ಮಾನ.
8. 2023-2024ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸಿ ಅಂಗೀಕರಿಸುವುದು.
9. 2023-2024ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳನ್ನು ಪರಿಶೀಲನೆ ಮತ್ತು ಆಡಳಿತ ಮಂಡಳಿಯ ಅನುಪಾಲನಾ ವರದಿ ಅಂಗೀಕರಿಸುವುದು.
10. 2024-2025ನೇ ಸಾಲಿನ ಅಂದಾಜು ಆಯವ್ಯಯ ಮಂಡನೆಯನ್ನು ಅಂಗೀಕರಿಸುವುದು.
11. 2023-2024ನೇ ಸಾಲಿನ ಹೆಚ್ಚುವರಿ ವೆಚ್ಚದ ಮಂಡನೆಯನ್ನು ಅನುಮೋದಿಸುವುದು.
12. 2023-2024ನೇ ಸಾಲಿನ ನಿವ್ವಳ ಲಾಭ ವಿಲೇವಾರಿಯನ್ನು ಅಂಗೀಕರಿಸುವುದು.
13. ಬೆಂಗಳೂರು ಮತ್ತು ಸುತ್ತಮುತ್ತಲಿನ ನಗರಗಳಲ್ಲಿ ಹೊಸದಾಗಿ ಶಾಖೆಗಳನ್ನು ತೆರೆಯುವುದು.
14. ಮಹಾಮಂಡಳದ 8ನೇ ವೇತನ ಆಯೋಗದಂತೆ ಸಿಬ್ಬಂದಿಗೆ ಬಿ ವರ್ಗದ ವೇತನ ಶ್ರೇಣಿ / ಹೊಸ ಹುದ್ದೆಗಳ ಮಂಜೂರಾತಿ / ಬಡ್ತಿಯನ್ನು ಅಂಗೀಕರಿಸುವುದು.
15. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳನ್ನು ಚರ್ಚಿಸುವುದು.
16. ಸದಸ್ಯರುಗಳಿಂದ ಬಂದ ವಿಷಯಗಳ ಪರಿಶೀಲನೆ.
17. ವಂದನಾರ್ಪಣೆ.

**ಊಟ ಮಧ್ಯಾಹ್ನ 1.00 ಘಂಟೆಗೆ**

ವಿಶೇಷ ಸೂಚನೆ : ಸರ್ವಸದಸ್ಯರ ಸಭೆಗೆ **ಸದಸ್ಯರುಗಳಿಗೆ ಮಾತ್ರ ಪ್ರವೇಶ,** ತಪ್ಪದೇ ಗುರುತಿನ ಚೀಟಿಯನ್ನು (I.D.Card) ತರಬೇಕಾಗಿ ವಿನಂತಿ.

## ವಿಶೇಷ ಸೂಚನೆಗಳು

1. ದಿನಾಂಕ 19–08–2024ರ ನಂತರ ಸದಸ್ಯರು ತಮ್ಮ ಗುರುತಿನ ಚೀಟಿಯನ್ನು ತೋರಿಸಿ 2023–2024ನೇ ಸಾಲಿನ ಲೆಕ್ಕ ಪತ್ರಗಳನ್ನು ಹಾಗೂ ಆಡಳಿತ ಮಂಡಳಿಯ ವರದಿಯನ್ನು ಬ್ಯಾಂಕಿನ ವ್ಯವಹಾರದ ಸಮಯದಲ್ಲಿ ಪಡೆದುಕೊಳ್ಳಲು ಅವಕಾಶವಿರುತ್ತದೆ.
2. ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ಪತ್ರ ಮುಖೇನ/ ಸಭೆ ನಡೆಯುವ 5 ದಿವಸ ಮುಂಚಿತವಾಗಿ ತಾ॥ 26–08–2024 ರೊಳಗೆ) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಲುಪಿಸಬೇಕಾಗಿ ವಿನಂತಿ.
3. ಯಾವುದೇ ಸದಸ್ಯರು ಸತತ 3 ವರ್ಷಗಳು ಬ್ಯಾಂಕ್ ನೀಡಿರುವ ಲಾಭಾಂಶದ ಮೊತ್ತವನ್ನು ಪಡೆಯದೆ ಇದ್ದಲ್ಲಿ ಕೂಡಲೇ ಪಡೆದು ಕೊಳ್ಳುವುದು, ತಪ್ಪಿದಲ್ಲಿ 2020–21 ರಿಂದ 3 ವರ್ಷ ಮೀರಿದ ಲಾಭಾಂಶದ ಮೊತ್ತವನ್ನು ಸಹಕಾರ ಕಾಯ್ದೆ ರೀತ್ಯಾ ಕಾಯ್ದಿಟ್ಟ ನಿಧಿಗೆ (RESERVE FUND) ವರ್ಗಾಯಿಸಲಾಗುತ್ತದೆ.
4. ತಮ್ಮ ಷೇರು ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ ಪಡೆಯದೇ ಇರತಕ್ಕ ಸದಸ್ಯರುಗಳು ಕೂಡಲೇ ಬ್ಯಾಂಕಿಗೆ ತಮ್ಮ ಇತ್ತೀಚಿನ ಭಾವಚಿತ್ರ ನೀಡಿ ಷೇರು ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ ಪಡೆಯಲು ಕೋರಿದೆ.
5. ರಿಸರ್ವ್ ಬ್ಯಾಂಕು ನೀಡಿರುವ 'ನಿಮ್ಮ ಗ್ರಾಹಕರನ್ನು ತಿಳಿಯಿರಿ (KYC) ನಿರ್ದೇಶನವು ಬ್ಯಾಂಕಿನ ಪ್ರತಿ ಸದಸ್ಯನಿಗೆ ಹಾಗೂ ಗ್ರಾಹಕರಿಗೆ ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್ ಅನ್ವಯವಾಗುತ್ತದೆ. ಎಲ್ಲರೂ (KYC) ನಿಯಮಗಳಂತೆ ತಮ್ಮ ಮಾಹಿತಿಯನ್ನು ಕಡ್ಡಾಯವಾಗಿ ನೀಡಿ ಸಹಕರಿಸಿ.
6. ಮಾನ್ಯ ಸದಸ್ಯರು ಬ್ಯಾಂಕಿನ ವ್ಯವಹಾರಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಬ್ಯಾಂಕಿನಿಂದ ನೀಡುವ ಸೇವೆಗಳನ್ನು ಪಡೆದು, ತನ್ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ. ಹಾಗೂ ತಮ್ಮ ಇ–ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಬ್ಯಾಂಕಿಗೆ ನೀಡಿ ನೋಂದಾಯಿಸಿಕೊಳ್ಳತಕ್ಕದ್ದು.
7. ಸಹಕಾರ ಕಾಯಿದೆ 1959 ಹಾಗೂ ಕಲಂ 1960ರ ತಿದ್ದುಪಡಿ ರೀತ್ಯಾ ಯಾವುದೇ ಒಬ್ಬ ಸದಸ್ಯ ಕಳೆದ ಐದು (5) ಸಾಮಾನ್ಯ ಮಹಾ ಸಭೆಗಳ ಪೈಕಿ ಮೂರು (3) ಸಾಮಾನ್ಯ ಮಹಾ ಸಭೆಗೆ ಹಾಜರಾಗಲು ತಪ್ಪುವ ಅಥವಾ ಮೂರು (3) ನಿರಂತರ ಸಹಕಾರ ವರ್ಷಗಳಿಗೆ ಬ್ಯಾಂಕಿನ ಉಪನಿಯಮಾವಳಿ ರೀತ್ಯಾ ಪ್ರತಿ ವರ್ಷದಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಟ ಸೇವೆ/ ಸೌಲಭ್ಯಗಳನ್ನು ಬಳಸಿಕೊಳ್ಳಲು ತಪ್ಪಿದಲ್ಲಿ ಅಂತಹ ಸದಸ್ಯರು ಬ್ಯಾಂಕಿನ ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕಿರುವುದಿಲ್ಲ.

## ATM ಸೌಲಭ್ಯ ಮತ್ತು QR Code ಸೌಲಭ್ಯ

ಪ್ರಿಯ ಗ್ರಾಹಕರೇ,

1) ನಮ್ಮ ಪ್ರೀತಿಯ ಗ್ರಾಹಕರಿಗೆ/ ಸದಸ್ಯರಿಗೆ ನಾವು ಎಟಿಎಂ ಸೌಲಭ್ಯವನ್ನು ನೀಡುತ್ತಿದ್ದೇವೆ.
2) ಡೆಬಿಟ್/ ಎಟಿಎಂ ಕಾರ್ಡ್, POS ಮತ್ತು ಇ–ಕಾಮರ್ಸ್‌ಗಳಲ್ಲಿ ಬಳಸಲು (on-line) ಸಕ್ರಿಯಗೊಳಿಸಲಾಗಿದೆ.
3) ನಮ್ಮ ಸದಸ್ಯರಿಗೆ ಮತ್ತು ಖಾತಾದಾರರಿಗೆ QR Code Payment System, E-Stamp ಸೌಲಭ್ಯವನ್ನು ಒದಗಿಸಿದ್ದು, ಇದರ ಉಪಯೋಗವನ್ನು ಪಡೆಯಲು ವಿನಂತಿಸುತ್ತೇವೆ.

ಸದಸ್ಯರು/ ಗ್ರಾಹಕರು ಈ ಸೌಲಭ್ಯಗಳನ್ನು ಪಡೆಯಿರಿ,
ಹೆಚ್ಚಿನ ವಿವರಗಳಿಗಾಗಿ ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.

# ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ. 6, ಆಸ್ಪತ್ರೆ ರಸ್ತೆ, ಬೆಂಗಳೂರು-560 053.

ಟೆಲಿಫೋನ್ : 22253389, 22268535 E-mail : mscmbank@gmail.com / info@mscmbank.in


## 56ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ನಡವಳಿಕೆಗಳು

ದಿನಾಂಕ: 06.08.2023ರ ಭಾನುವಾರ ಬ್ಯಾಂಕಿನ 56ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಅಧ್ಯಕ್ಷರಾದ ಶ್ರೀ ಎನ್. ಎಸ್. ಶ್ರೀನಿವಾಸಮೂರ್ತಿರವರು ಅಧ್ಯಕ್ಷತೆಯಲ್ಲಿ ಬೆಂಗಳೂರು-4, ಬುಲ್ ಟೆಂಪಲ್ ರಸ್ತೆಯಲ್ಲಿರುವ **ಶ್ರೀ ಗುರುನರಸಿಂಹ ಕಲ್ಯಾಣ ಮಂದಿರದಲ್ಲಿ** ಬೆಳಿಗ್ಗೆ 11.00 ಸಮಯಕ್ಕೆ ಪ್ರಾರಂಭವಾಯಿತು.

1. **ಪ್ರಾರ್ಥನೆ:-**

ಶ್ರೀ ಸುನಿಲ್.ಆರ್.ಎಸ್ ರವರು ಪ್ರಾರ್ಥನಾಗೀತೆ ಹಾಡಿ ಸಭೆಗೆ ಶುಭಾರಂಭ ಮಾಡಿದರು.

ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ನಿರ್ದೇಶಕರು ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

2. **ಸ್ವಾಗತ ಭಾಷಣ:-**

ಅಧ್ಯಕ್ಷರಾದ ಶ್ರೀ ಎನ್.ಎಸ್.ಶ್ರೀನಿವಾಸಮೂರ್ತಿರವರು 56ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನುದ್ದೇಶಿಸಿ ಸ್ವಾಗತ ಭಾಷಣ ಮಾಡಿದರು.

ಬ್ಯಾಂಕಿನ ಸರ್ವಸದಸ್ಯ ಬಂಧುಗಳಿಗೆ ಈ ದಿನ ನಡೆಯುತ್ತಿರುವ ನಮ್ಮ ಬ್ಯಾಂಕಿನ 2022-23ನೇ ಸಾಲಿನ 56ನೇ ವಾರ್ಷಿಕ ಮಹಾಸಭೆಗೆ ಆಡಳಿತ ಮಂಡಳಿಯ ಪರವಾಗಿ ಹಾಗೂ ವೈಯುಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇಂದಿನ ಮಹಾಸಭೆಯಲ್ಲಿ ಬ್ಯಾಂಕಿನ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2022-23ನೇ ಸಾಲಿನ ಲೆಕ್ಕಪತ್ರಗಳನ್ನು, ಲೆಕ್ಕ ಪರಿಶೋಧಕರು ನೀಡಿದ ವರದಿಯನ್ನು, 2023-24ನೇ ಸಾಲಿಗಾಗಿ ಮುಂಗಡ ಪತ್ರವನ್ನು, 2022-23ನೇ ಸಾಲಿನಾಂತ್ಯದ ನಿವ್ವಳ ಲಾಭ ವಿಂಗಡನೆ ಮತ್ತು ಸದಸ್ಯರು ಬ್ಯಾಂಕಿನಲ್ಲಿ ಹೂಡಿದ ಷೇರು ಬಂಡವಾಳದ ಮೇಲೆ ನೀಡಬಹುದಾದ ಲಾಭಾಂಶವನ್ನು (ಡಿವಿಡೆಂಡ್) ಘೋಷಿಸಿರುವ ಪ್ರಸ್ತಾವನೆಯನ್ನು ಮತ್ತು ಇತರೆ ಮಹತ್ತರ ವಿಷಯಗಳನ್ನು ಸದಸ್ಯರ ಒಪ್ಪಿಗೆಗಾಗಿ ಮಹಾ ಸಭೆಯಲ್ಲಿ ಮಂಡಿಸಲಾಗುತ್ತಿದೆ. ಪರಿಶೋಧಿತ ಲೆಕ್ಕ ಪತ್ರಗಳ ವಾರ್ಷಿಕ ವರದಿ ಪುಸ್ತಕವು ಈಗಾಗಲೇ ತಮ್ಮ ಕೈಯಲ್ಲಿದ್ದು, ಸನ್ಮಾನ್ಯ ಸದಸ್ಯರೆಲ್ಲರೂ ಅವುಗಳನ್ನು ಪರಿಶೀಲಿಸಿ, ತಮ್ಮ ಸಲಹೆಗಳೊಂದಿಗೆ ಮಂಜೂರಾತಿ ನೀಡಬೇಕಾಗಿ ಸವಿನಯ ಪ್ರಾರ್ಥನೆ.

ನಮ್ಮ ಬ್ಯಾಂಕ್ ಕೇವಲ ವ್ಯಾಪಾರಸ್ಥರಿಗೆ ಮಾತ್ರ ಸೀಮಿತವಾಗದೆ ಸರಿಸುಮಾರು 4669 ಸಾಮಾನ್ಯ

ಸದಸ್ಯರು ಹಾಗೂ 1189 ಸಹ ಸದಸ್ಯರುಗಳೊಂದಿಗೆ ಹಾಗೂ ಸಾವಿರಾರು ಗ್ರಾಹಕರ ಆರ್ಥಿಕಾಭಿವೃದ್ಧಿಗೆ ಕಾರ್ಯನಿರ್ವಹಿಸುತ್ತಾ ಇಂದು 163.72 ಕೋಟಿ ರೂ.ಗಳ ಠೇವಣಿಗಳನ್ನು ಮೀರಿ ವ್ಯವಹಾರಗಳಲ್ಲಿ ತನ್ನ ವೇಗವನ್ನು ವೃದ್ಧಿಸಿಕೊಂಡು 1939.68 ಕೋಟಿ ರೂ.ಗಳಿಗೂ ಮೀರಿದ ವಾರ್ಷಿಕ ವಹಿವಾಟಿನೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

**ಬ್ಯಾಂಕಿನ ಅಭಿವೃದ್ಧಿಯ ಪಕ್ಷಿನೋಟ**

**ಷೇರು ಬಂಡವಾಳ:–**

2022–2023 ನೇ ಸಾಲಿನ ಅಂತ್ಯಕ್ಕೆ ಬ್ಯಾಂಕು 4669 ಖಾಯಂ ಸದಸ್ಯರಿಂದ ರೂ.1.85 ಕೋಟಿ ಮತ್ತು 1189 ಸಹ ಸದಸ್ಯರಿಂದ ರೂ.2.90 ಕೋಟಿ ಷೇರು ಬಂಡವಾಳ ಹೊಂದಿದ್ದು, ವರದಿ ಸಾಲಿನ ಅಂತ್ಯಕ್ಕೆ ಒಟ್ಟು ರೂ.4.75 ಕೋಟಿ ಷೇರು ಬಂಡವಾಳ ಹೊಂದಿರುತ್ತದೆ. ಬ್ಯಾಂಕಿನ ಅಧಿಕೃತ ಷೇರು ಬಂಡವಾಳದ ಮಿತಿ ರೂ.25 ಕೋಟಿಗಳಿಗೆ ನಿಗದಿಪಡಿಸಿಕೊಳ್ಳಲಾಗಿದೆ.

**ಠೇವಣಿಗಳು:–**

ಬ್ಯಾಂಕಿನ ಠೇವಣಿ ಸಂಗ್ರಹಣೆ 2021–2022ಕ್ಕೆ ರೂ.177.97 ಕೋಟಿಗಳಿದ್ದು, 2022–23ನೇ ಸಾಲಿಗೆ ರೂ.163.72 ಕೋಟಿಗಳಿರುತ್ತದೆ. ಸಹಕಾರಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲವು ಬ್ಯಾಂಕುಗಳ ವ್ಯವಹಾರಗಳ ಮೇಲೆ ಆರ್.ಬಿ.ಐ. ನಿರ್ಬಂಧ ಹೇರಿದ ಪರಣಾಮ ಮಾನ್ಯ ಸದಸ್ಯರು ಹಾಗೂ ಗ್ರಾಹಕರು ಸಹಕಾರಿ ಬ್ಯಾಂಕಿಂಗ್ ವಲಯವನ್ನು ಅನುಮಾನಾಸ್ಪದವಾಗಿ ನೋಡುವ ಪರಿಸ್ಥಿತಿ ಉಂಟಾದ ಸಂದರ್ಭದಲ್ಲಿಯೂ ಸಹ ನಮ್ಮ ಬ್ಯಾಂಕು ಅತ್ಯುತ್ತಮ ಆರ್ಥಿಕ ಅಂಕಿ ಅಂಶಗಳು ಬ್ಯಾಂಕಿನ ಸದೃಢತೆಯನ್ನು ಬಿಂಬಿಸುತ್ತದೆಂದು ಪ್ರಚುರಪಡಿಸುವ ಮೂಲಕ ಸದಸ್ಯರ/ ಗ್ರಾಹಕರ ನಂಬಿಕೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿ ಸಮಾಧಾನಕರ ಪ್ರಗತಿ ದಾಖಲಿಸಿದೆ.

ನಮ್ಮ ಬ್ಯಾಂಕ್ ಸಧೃಢವಾಗಿದ್ದು, ಸದಸ್ಯರು ಯಾವುದೇ ಆತಂಕ ಪಡುವ ಅಗತ್ಯವಿಲ್ಲ, ಬ್ಯಾಂಕು ಠೇವಣಿಗಳ ಮೇಲೆ ಇತರೆ ಬ್ಯಾಂಕಿಗಿಂತ ಹೆಚ್ಚಿನ ಬಡ್ಡಿ ದರವನ್ನು ನೀಡುತ್ತಿದ್ದು, ಸಾಮಾನ್ಯ ಹೂಡಿಕೆದಾರರಿಗೆ ವರ್ಷಕ್ಕೆ ಶೇ.8.00 ಮತ್ತು ಹಿರಿಯ ನಾಗರಿಕರಿಗೆ ಶೇ.8.50 ರಷ್ಟು ಹೆಚ್ಚು ಬಡ್ಡಿಯನ್ನು ನೀಡಲಾಗುತ್ತಿದೆ. ಈಗಾಗಲೇ ತಮಗೆ ತಲುಪಿಸಿರುವ ಸೂಚನಾ ಪತ್ರದಲ್ಲಿ ಇದನ್ನು ಗಮನಿಸಿರುತ್ತೀರೆಂದು ಭಾವಿಸುತ್ತೇನೆ. ಹಾಗೂ ಬ್ಯಾಂಕು ತನ್ನಲ್ಲಿರುವ ಎಲ್ಲಾ ಠೇವಣಿಗಳ ಮೇಲೆ ಆರ್.ಬಿ.ಐ ನಿಯಮ ರೀತ್ಯಾ ಠೇವಣಿ ವಿಮಾ ನಿಗಮದಡಿಯಲ್ಲಿ ವಿಮೆ ಮಾಡಿಸಿದ್ದು, ಪ್ರತಿ ಠೇವಣಿದಾರನ 5 ಲಕ್ಷ ರೂಪಾಯಿಗಳ ಹೂಡಿಕೆಯ ಮೊತ್ತದವರೆಗೆ ವಿಮಾ ರಕ್ಷಣೆಯ ಸೌಲಭ್ಯವಿರುತ್ತದೆ. ಸದಸ್ಯರು, ಗ್ರಾಹಕರು ಇದನ್ನೂ ಸಹ ಗಮನಿಸಬೇಕೆಂದು ವಿನಂತಿಸುತ್ತಿದ್ದೇನೆ.

**ಬ್ಯಾಂಕಿನ ಸಾಲ ಮತ್ತು ಮುಂಗಡಗಳು:–**

2021–2022 ರಲ್ಲಿ ಬ್ಯಾಂಕ್ ನೀಡಿರುವ ಸಾಲ ರೂ.105.43 ಕೋಟಿಗಳಿದ್ದು, 2022–2023ಕ್ಕೆ ರೂ.100.05 ಕೋಟಿಗಳಿರುತ್ತದೆ. ಹೊಸ ಸಾಲಗಳನ್ನು ನೀಡಲು ಗುಣಾತ್ಮಕ ಸಾಲಗಳ ಸಮಸ್ಯೆ ಮತ್ತು ಸುಸ್ತಿ ಸಾಲಗಳ ವಸೂಲಾತಿ ಮಾಡಿದ್ದರಿಂದ ಸಾಲಗಳನ್ನು ಹಿಡಿತಗೊಳಿಸಿದ್ದೇವೆ.

ಸದಸ್ಯರ ಕೋರಿಕೆ ಮೇರೆಗೆ ನಾವು ಸಾಲಗಳ ಮೇಲೆ ಬಡ್ಡಿದರವನ್ನು ದಿನಾಂಕ: 01.09.2022ರಿಂದ ಅನ್ವಯವಾಗುವಂತೆ ಇಳಿಸಿದ್ದೇವೆ. ಗೃಹಜೋತಿ ಸಾಲಕ್ಕೆ ಬಡ್ಡಿ (40 ಲಕ್ಷದ ವರೆಗೆ) ಶೇ.8.50, (40 ರಿಂದ 70 ಲಕ್ಷದ ವರೆಗೆ) ಶೇ.9.00, ಸ್ಥಿರಾಸ್ತಿ ಸಾಲಕ್ಕೆ ಬಡ್ಡಿ (ಮನೆ ನಿರ್ಮಾಣ/ಕೊಳ್ಳಲು), ಶೇ.11.00, ಅಡಮಾನ (Mortgage) ಸಾಲಕ್ಕೆ ಶೇ.12.00 ಹಾಗೂ ಚಿನ್ನಾಭರಣ ಸಾಲಕ್ಕೆ ಶೇ. 9.00, ವಾಹನ ಸಾಲ ಶೇ.8.50 ರಿಂದ ಶೇ.9.50 ಇದ್ದು, ಈ ಬಡ್ಡಿ ದರಗಳು ಸ್ಪರ್ಧಾತ್ಮಕವಾಗಿದೆ. ಸ್ಥಿರಾಸ್ತಿ ಸಾಲ(ಮನೆ ಕಟ್ಟಲು) ಹಾಗೂ ಅಡಮಾನ ಸಾಲಕ್ಕೆ (Mortgage) ಮಾಸಿಕ ಕಂತುಗಳನ್ನು ನಿಗದಿತ ದಿನಾಂಕದೊಳಗೆ ಪಾವತಿಸಿದಲ್ಲಿ ಶೇ.1.00 ಬಡ್ಡಿ ವಿನಾಯಿತಿಯನ್ನು ನೀಡಲಾಗುತ್ತಿದೆ.

2022–2023ನೇ ಸಾಲಿನಲ್ಲಿ ರೂ. 8.38 ಲಕ್ಷಗಳ ಬಡ್ಡಿ ರಿಯಾಯಿತಿ ನೀಡಲಾಗಿರುತ್ತದೆ. ಮಾನ್ಯ ಸದಸ್ಯರು ಸಾಲ ಪಡೆದು ಸದುಪಯೋಗಪಡಿಸಿಕೊಳ್ಳುವ ಜೊತೆಗೆ ಬ್ಯಾಂಕಿನ ಅಭಿವೃದ್ಧಿಗೂ ಸಹ ಸಹಕಾರ ನೀಡಬೇಕೆಂದು ವಿನಂತಿಸುತ್ತೇವೆ.

ಬ್ಯಾಂಕಿನ ಮ್ಯಾನೇಜರ್ ಹಾಗೂ ಸಿಬ್ಬಂದಿ ವರ್ಗದವರು ಹೆಚ್ಚಿನ ಶ್ರಮವಹಿಸಿ ಸಾಲ ವಸೂಲಾತಿಯಲ್ಲಿ ಕಟ್ಟುನಿಟ್ಟಿನ ಕ್ರಮಜರುಗಿಸಿ, ಸಾಲ ವಸೂಲಿಯಲ್ಲಿ ಪ್ರಗತಿ ಸಾಧಿಸಲಾಗಿದೆ. ಬ್ಯಾಂಕಿನ ವಸೂಲಿ ಪಡೆ, ಅಧ್ಯಕ್ಷರು, ಉಪಾಧ್ಯಕ್ಷರು, ಸಾಲ ಸಮಿತಿ ಸದಸ್ಯರು, ಮತ್ತಿತರ ನಿರ್ದೇಶಕರುಗಳು ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ನೀಡಿ, ಕಾನೂನು ಕ್ರಮಗಳನ್ನು ಕೈಗೊಂಡು ಸಾಲ ವಸೂಲಾತಿ ಮಾಡಿ ಬ್ಯಾಂಕಿನ ಒಟ್ಟು NPA ಶೇ. 13.36 ರಷ್ಟು, ಹಾಗೂ ನಿವ್ವಳ NPA ಶೇ.5.37 ರಷ್ಟನ್ನು ಕಾಯ್ದುಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ.

ಬ್ಯಾಂಕಿನ ಬಂಡವಾಳಕ್ಕೆ – ಗಂಡಾಂತರ ಆಸ್ತಿಗಳ ಅನುಪಾತ (CRAR – CAPITAL TO RISK ADEQUACY RATIO) ಪ್ರಮಾಣ ಶೇಕಡ 14.15 ರಷ್ಟು ಇದ್ದು, ಇದು ಬ್ಯಾಂಕಿನ ದ್ರವ್ಯಾಸ್ತಿಯ ಮಟ್ಟವು ಸಧೃಡವಾಗಿದೆ ಎಂದು ಘಂಟಾಘೋಷವಾಗಿ ಹೇಳಬಹುದಾಗಿದೆ.

RBI ಪ್ರಕಾರ CRAR ಶೇ.9ಕ್ಕೆ ನಿಗದಿಪಡಿಸಿರುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕಾಗಿದೆ, ಹಾಗೂ CD ರೇಷಿಯೋ (CREDIT DEPOSIT RATIO) ಶೇ. 61.11 ಇರುತ್ತದೆ ಎಂದು ಹೇಳಲು ಇಚ್ಛಿಸುತ್ತೇನೆ.

**ಲಾಭ ಗಳಿಕೆ:–**

ಬ್ಯಾಂಕು ತನ್ನಲ್ಲಿರುವ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ಸದರಿ ಸಾಲಿನಲ್ಲಿ ಒಟ್ಟು ರೂ.4.51 ಕೋಟಿ ಲಾಭ ಗಳಿಸಿದ್ದು, ರೂ.95.00 ಲಕ್ಷ ವರಮಾನ ತೆರಿಗೆ ಪಾವತಿಸಿದ್ದು, ಎನ್.ಪಿ.ಎ.ಪ್ರಾವಿಷನ್ ರೂ.147.18 ಲಕ್ಷ, ಸರ್ಕಾರಿ ಭದ್ರತೆಗಳ ಹೂಡಿಕೆಗಳಿಗೆ ರೂ.25.00ಲಕ್ಷ, ಸಿಬ್ಬಂದಿ ಗ್ರಾಚ್ಯೂಟಿಗೆ ರೂ.40.00ಲಕ್ಷ ಹಾಗೂ ಸವಕಳಿ ಮತ್ತು ಇತರೆಗಳಿಗೆ ರೂ.36.59 ಲಕ್ಷ ಅವಕಾಶಗಳನ್ನು ಕಲ್ಪಿಸಿದ ನಂತರ ರೂ.1.07 ಕೋಟಿ ನಿವ್ವಳ ಲಾಭಗಳಿಸಿರುತ್ತದೆ ಎಂದು ತಿಳಿಸಲು ಹರ್ಷಿಸುತ್ತೇನೆ.

**ಲಾಭಾಂಶ:**

ಮಾನ್ಯ ಸದಸ್ಯರೇ, ಈ ವರ್ಷ ಶೇ.10 ರಷ್ಟು ಲಾಭಾಂಶವನ್ನು ನೀಡಲಾಗುವುದು ಹಾಗೂ ಲಾಭಾಂಶ ವಿತರಿಸಲು ಈಗಾಗಲೇ ಆರ್.ಬಿ.ಐ. ನಿಂದ ಅನುಮತಿ ಸಹ ಸಿಕ್ಕಿರುತ್ತದೆ ಎಂದು ತಿಳಿಸಲು ಅತ್ಯಂತ ಹರ್ಷ ಪಡುತ್ತೇನೆ.

**ಹೂಡಿಕೆಗಳು:–**

ಸರ್ಕಾರಿ ಭದ್ರತೆಗಳಲ್ಲಿ ದಿ: 31.03.2022ಕ್ಕೆ ರೂ.47.46 ಕೋಟಿ ಇದ್ದು, ಈ ವರ್ಷ ರೂ.7.00 ಕೋಟಿ ಗಳ ಸರ್ಕಾರಿ ಭದ್ರತೆಗಳನ್ನು ಖರೀದಿಸಲಾಗಿದ್ದು, ಸದರಿ ವರ್ಷದಲ್ಲಿ ರೂ.6.00 ಕೋಟಿಗಳ ಭದ್ರತೆಗಳನ್ನು ಮಾರಾಟ ಮಾಡಿದ್ದು, ರೂ.3.11 ಲಕ್ಷ ಲಾಭ ಬಂದಿದ್ದು, ಇದರಲ್ಲಿ ಹೂಡಿಕೆಗಳ ಏರಿಳಿತ ನಿಧಿಗೆ ಶೇ.10 ರೂ.0.31 ಲಕ್ಷ ವರ್ಗಾಯಿಸಿದ ನಂತರ ರೂ.2.80 ಲಕ್ಷ ನಿವ್ವಳ ಲಾಭ ಇರುತ್ತದೆ. 31.03.2023ಕ್ಕೆ ರೂ. 48.46 ಕೋಟಿಗಳ ಸರ್ಕಾರಿ ಭದ್ರತೆಗಳಿರುತ್ತದೆ.

**ಲಾಕರ್ ಸೌಲಭ್ಯ :–**

ಬ್ಯಾಂಕ್‌ನ ಪ್ರಧಾನ ಕಛೇರಿ ಶಾಖೆ, ನಂ.6, ಹಾಸ್ಪಿಟಲ್ ರಸ್ತೆ, ಬೆಂಗಳೂರು–53 ಪ್ರಧಾನ ಕಛೇರಿ ಶಾಖೆ ಹಾಗೂ ಕುಮಾರಸ್ವಾಮಿ ಲೇಔಟ್ ಶಾಖೆಗಳಲ್ಲಿ ಸಣ್ಣ, ಮಧ್ಯಮ ಹಾಗೂ ದೊಡ್ಡಗಾತ್ರದ ಲಾಕರ್‌ಗಳು ಉಪಯೋಗಕ್ಕೆ ಲಭ್ಯವಿದ್ದು, ಸದಸ್ಯರು/ಗ್ರಾಹಕರು ರಿಯಾಯಿತಿ ದರದಲ್ಲಿ ಪಡೆದುಕೊಳ್ಳಲು ಈ ಸಂದರ್ಭದಲ್ಲಿ ವಿನಂತಿಸುತ್ತೇನೆ.

**QR Code ಪಾವತಿ / ATM ಸೇವೆ.**

ಮಾನ್ಯ ಸದಸ್ಯರುಗಳಿಗೆ ಮತ್ತೊಂದು ಸಂತೋಷಕರ ವಿಷಯವೆಂದರೆ, ಇತ್ತೀಚಿನ ಬ್ಯಾಂಕಿಂಗ್ ಸ್ಪರ್ಧಾತ್ಮಕ ಯುಗದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸರಿಸಮಾನವಾಗಿ ಸೇವೆ ನೀಡಬೇಕಿದ್ದು, ಬ್ಯಾಂಕಿನ ಗ್ರಾಹಕರಿಗೆ QR Code ಪಾವತಿ (UPI-Payment System) ಸೌಲಭ್ಯವನ್ನು ಒದಗಿಸಿದ್ದು ಇದರ ಉಪಯೋಗವನ್ನು ಪಡೆಯಲು ವಿನಂತಿಸುತ್ತೇನೆ. ಅಲ್ಲದೆ ಈಗಾಗಲೇ ಎ.ಟಿ.ಎಂ.ಸೇವೆಯನ್ನು ಒದಗಿಸಿದ್ದು, ಡೆಬಿಟ್/ಎಟಿಎಂ ಕಾರ್ಡ್ ಅನ್ನು ಎಲ್ಲಾ **POS ಮತ್ತು ಇ–ಕಾಮರ್ಸ್‌ಗಳಲ್ಲಿ ಬಳಸಲು (on-line)ಸಕ್ರಿಯಗೊಳಿಸಲಾಗಿದೆ.** ಹಾಗೂ ನೇರ ಆರ್.ಟಿ.ಜಿ.ಎಸ್./ ಎನ್.ಇ.ಎಫ್.ಟಿ ಸೇವೆಗಳನ್ನು ಒದಗಿಸುತ್ತಿದ್ದೇವೆ. ಮಾನ್ಯ

ಸದಸ್ಯರು/ಗ್ರಾಹಕರು ಇದರ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದು, ಇನ್ನೂ ಹೆಚ್ಚಿನ ಸದಸ್ಯರು ಇದರ ಸೌಲಭ್ಯವನ್ನು ಪಡೆಯಲು ವಿನಂತಿಸುತ್ತೇನೆ.

**ಪ್ರಧಾನಮಂತ್ರಿ ಜೀವನ್ ಜ್ಯೋತಿ ಬೀಮಾ ಯೋಜನೆ**

ನಮ್ಮ ಬ್ಯಾಂಕಿನಲ್ಲಿ ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ ಹಾಗೂ ಪ್ರಧಾನಮಂತ್ರಿ ಸುರಕ್ಷಾ ಬೀಮಾ ಯೋಜನೆ ಎಂಬ ಸರ್ಕಾರದ ವಿಮಾ ಯೋಜನೆಗಳನ್ನು ಉಳಿತಾಯ ಖಾತೆ ಹೊಂದಿರುವ ಗ್ರಾಹಕರು ನೋಂದಾಯಿಸುವ ವ್ಯವಸ್ಥೆಯು ನಮ್ಮ ಬ್ಯಾಂಕಿನಲ್ಲಿಯೂ ಅಳವಡಿಸಿದ್ದು, ಯೋಜನೆಯ ವಿವರ ಈ ಕೆಳಕಂಡಂತಿದೆ.

**1). ಪ್ರಧಾನಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ:–**

ಈ ವಿಮಾ ಯೋಜನೆಗೆ 55ವರ್ಷದೊಳಗಿನ ವ್ಯಕ್ತಿಗಳು ವರ್ಷಕ್ಕೆ ರೂ.436.00ನ್ನು ಕಟ್ಟಿ ನೋಂದಾಯಿಸಬೇಕಾಗಿರುತ್ತದೆ. ಈ ಯೋಜನೆಗೆ ನಮ್ಮ ಬ್ಯಾಂಕಿನಲ್ಲಿ 22 ಮಂದಿ ನೋಂದಾಯಿಸಿರುತ್ತಾರೆ. ಈ ವಿಮಾಯೋಜನೆಗೆ ಒಳಪಟ್ಟ ವ್ಯಕ್ತಿಗಳು ಮರಣ ಹೊಂದಿದ ಸಂದರ್ಭದಲ್ಲಿ ರೂ. 2 ಲಕ್ಷ ವಿಮಾ ಯೋಜನೆ ಹಣ ಅವರ ಕುಟುಂಬದವರಿಗೆ ಸಿಗುತ್ತದೆ.

**2). ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ–**

ಈ ವಿಮಾ ಯೋಜನೆಗೆ ವರ್ಷಕ್ಕೆ ರೂ.20ನ್ನು ಕಟ್ಟಿ ನೋಂದಾಯಿಸಬೇಕಾಗಿರುತ್ತದೆ. ಈ ಯೋಜನೆಗೆ ನಮ್ಮ ಬ್ಯಾಂಕಿನಲ್ಲಿ 60 ಮಂದಿ ನೋಂದಾಯಿಸಿರುತ್ತಾರೆ. ಈ ವಿಮಾ ಯೋಜನೆಗೆ ಒಳಪಟ್ಟ ವ್ಯಕ್ತಿಗಳು ಅಪಘಾತದಲ್ಲಿ ಮರಣಹೊಂದಿದ ಸಂದರ್ಭದಲ್ಲಿ ರೂ. 2 ಲಕ್ಷ ವಿಮಾಯೋಜನೆ ಹಣ ಅವರ ಕುಟುಂಬದವರಿಗೆ ಸಿಗುತ್ತದೆ. ಮಾನ್ಯ ಸದಸ್ಯರು ಈ ವಿಮಾ ಯೋಜನೆಗಳಿಗೆ ನೋಂದಾಯಿಸಿಕೊಂಡು ಇದರ ಉಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿಸುತ್ತೇನೆ.

**ಸಿಬ್ಬಂದಿ ವಿಮೆ:** ಬ್ಯಾಂಕಿನ ಎಲ್ಲಾ ಸಿಬ್ಬಂದಿಗಳಿಗೂ ರೂ.2 ಲಕ್ಷಗಳ ಆರೋಗ್ಯ ವಿಮಾ ಯೋಜನೆಯನ್ನು ಐ.ಸಿ.ಐ.ಸಿ.ಐ ಲ್ಯಾಂಬ್‌ಬೋರ್ಡ್ ವಿಮಾ ಕಂಪನಿ ಮುಖಾಂತರ ಒದಗಿಸಿದ್ದೇವೆ.

**2023–2024ಕ್ಕೆ ಗುರಿ**

**ಠೇವಣಿಗಳು:–**

ಬ್ಯಾಂಕು 2022–2023ನೇ ಸಾಲಿನಾಂತ್ಯಕ್ಕೆ ರೂ.163.72 ಕೋಟಿ ಠೇವಣಿ ಹೊಂದಿದ್ದು, 2023–24ನೇ ಸಾಲಿನಲ್ಲಿ ರೂ.175 ಕೋಟಿ ಸಂಗ್ರಹಣೆಯ ಗುರಿ ಹೊಂದಲಾಗಿದ್ದು, ಬ್ಯಾಂಕು ರಾಷ್ಟ್ರೀಕೃತ ಹಾಗೂ ಷೆಡ್ಯೂಲ್ ಬ್ಯಾಂಕುಗಳು ನೀಡುತ್ತಿರುವ ಬಡ್ಡಿ ದರಗಳಿಗಿಂತ ಹೆಚ್ಚಿನ ಬಡ್ಡಿ ದರ ನೀಡುತ್ತಿದೆ. ಸಾಮಾನ್ಯ ಹೂಡಿಕೆದಾರರಿಗೆ ಗರಿಷ್ಠ ವರ್ಷಕ್ಕೆ ಶೇ.8.00 ಮತ್ತು ಹಿರಿಯ ನಾಗರಿಕರಿಗೆ ಶೇ.0.50 ರಷ್ಟು ಹೆಚ್ಚು ಬಡ್ಡಿಯನ್ನು ನೀಡಲಾಗುತ್ತಿದೆ, ಬ್ಯಾಂಕು ತನ್ನಲ್ಲಿರುವ ಎಲ್ಲಾ ಠೇವಣಿಗಳ ಮೇಲೆ ಆರ್.ಬಿ.ಐ ನಿಯಮ ರೀತ್ಯಾ ಠೇವಣಿ ವಿಮಾ

ನಿಗಮದಡಿಯಲ್ಲಿ ಪ್ರತಿ ಠೇವಣಿದಾರರಿಗೆ ಐದು ಲಕ್ಷ ರೂಪಾಯಿಗಳ ವರೆಗಿನ ಹೂಡಿಕೆಯ ಮೊತ್ತಕ್ಕೆ ವಿಮೆಯ ಲಭ್ಯವಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಯಪಡಿಸುತ್ತೇನೆ.

**ಸಾಲ ಮತ್ತು ಮುಂಗಡಗಳು:–**

2022–23ನೇ ಸಾಲಿನಾಂತ್ಯಕ್ಕೆ ಬ್ಯಾಂಕು ರೂ.100.05 ಕೋಟಿ ಸಾಲ ನೀಡಿದ್ದು, ನಾವು ಈ ವರ್ಷ ಇನ್ನೂ ಹೆಚ್ಚಿಗೆ ಸಾಲ ನೀಡಲು ಅಪೇಕ್ಷೆ ಪಟ್ಟಿದ್ದೇವೆ. ಬರುವ ವರ್ಷಾಂತ್ಯಕ್ಕೆ, ಅಂದರೆ, 31.03.2024ಕ್ಕೆ ರೂ.125 ಕೋಟಿ ಸಾಲ ನೀಡಲು ಗುರಿ ಹೊಂದಿದ್ದು, ಹೊಸ ಸಾಲಗಳನ್ನು ನೀಡಲು ತಾವೆಲ್ಲರೂ ಸಹಕರಿಸಬೇಕಾಗಿ ವಿನಂತಿಸುತ್ತೇನೆ.

ನಾನು ಮೊದಲೇ ತಿಳಿಸಿದಂತೆ, ಸಾಲಗಳ ಮೇಲೆ ಬಡ್ಡಿದರವನ್ನು ದಿನಾಂಕ: 01.06.2023 ರಿಂದ ಕಡಿಮೆ ಮಾಡಿದ್ದು, ಗೃಹಜ್ಯೋತಿ ಸಾಲಕ್ಕೆ ಬಡ್ಡಿ (40 ಲಕ್ಷದ ವರೆಗೆ) ಶೇ.8.50, (40 ರಿಂದ 70 ಲಕ್ಷದ ವರೆಗೆ) ಶೇ.9.00, ಸ್ಥಿರಾಸ್ತಿ ಸಾಲಕ್ಕೆ ಬಡ್ಡಿ (ಮನೆ ನಿರ್ಮಾಣ/ಕೊಳ್ಳಲು), ಶೇ.11.00, ಅಡಮಾನ (Mortgage) ಸಾಲಕ್ಕೆ ಶೇ.12.00 ಹಾಗೂ ಚಿನ್ನಾಭರಣ ಸಾಲಕ್ಕೆ ಶೇ. 9.00, ವಾಹನ ಸಾಲ ಶೇ.8.50 ರಿಂದ ಶೇ.9.50 ಇದ್ದು, ಈ ಬಡ್ಡಿ ದರಗಳು ಸ್ಪರ್ಧಾತ್ಮಕವಾಗಿದೆ. ಸಾಮಾನ್ಯ ವಾಹನ ಖರೀದಿಗಾಗಿ ರೂ.25 ಲಕ್ಷದ ವರೆಗೆ, ಶಾಲಾ ವಾಹನ ಖರೀದಿಗಾಗಿ ರೂ.50 ಲಕ್ಷದವರೆಗೆ, ದೊಡ್ಡ ವಾಹನ ಖರೀದಿಗಾಗಿ ರೂ.75 ಲಕ್ಷದವರೆಗೆ(ಕ್ವಾಲಾಟರಲ್ ಭದ್ರತೆಯೊಂದಿಗೆ) ಸಾಲ ನೀಡಲಾಗುವುದು. ಸ್ಥಿರಾಸ್ತಿ ಸಾಲ(ಮನೆ ಕಟ್ಟಲು) ಹಾಗೂ ಅಡಮಾನ ಸಾಲಕ್ಕೆ (Mortgage) ಮಾಸಿಕ ಕಂತುಗಳನ್ನು ನಿಗದಿತ ದಿನಾಂಕದೊಳಗೆ ಪಾವತಿಸಿದಲ್ಲಿ ಶೇ.1.00 ಬಡ್ಡಿ ವಿನಾಯಿತಿಯನ್ನು ನೀಡಲಾಗುತ್ತಿದೆ ಇದರ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಲು ವಿನಂತಿಸುತ್ತೇನೆ.

**ವಿದ್ಯಾರ್ಥಿ ಮಿತ್ರ ಶೈಕ್ಷಣಿಕ ಸಾಲ ಯೋಜನೆ:–**

ಉನ್ನತ ಶಿಕ್ಷಣ ಮಾಡುವ ಸದಸ್ಯರ ಮಕ್ಕಳಿಗೆ ಸಹಾಯ ಮಾಡುವ ಸಲುವಾಗಿ ವಿದ್ಯಾರ್ಥಿ ಮಿತ್ರ ಶೈಕ್ಷಣಿಕ ಸಾಲ ಯೋಜನೆ ಬ್ಯಾಂಕು ಜಾರಿಗೊಳಿಸಿದ್ದು, ರೂ.10 ಲಕ್ಷದ ವರೆಗೆ ಶೇ.11ರ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಮಾನ್ಯ ಸದಸ್ಯರು ಶೈಕ್ಷಣಿಕ ದಾಖಲೆ ಹಾಗೂ ಸೂಕ್ತ ಭದ್ರತೆಗಳನ್ನು ನೀಡಿ ಇದರ ಪ್ರಯೋಜನವನ್ನು ಪಡೆದು ಕೊಳ್ಳಬೇಕಾಗಿ ವಿನಂತಿಸುತ್ತೇನೆ.

**ಅನುತ್ಪಾದಕ.ಸಾಲಗಳು(ಎನ್.ಪಿ.ಎ):**

ದಿನಾಂಕ 31–03–2023 ಕ್ಕೆ ಬ್ಯಾಂಕು ಹೊಂದಿರುವ ರೂ. 100.05 ಕೋಟಿ ಸಾಲದ ಪೈಕಿ ರೂ.13.37 ಕೋಟಿ ಅನುತ್ಪಾದಕ ಸಾಲಗಳಾಗಿದ್ದು, ಇದು ಒಟ್ಟು ಸಾಲದ ಶೇ.13.36ರಷ್ಟಿದೆ. ವರ್ಷಾಂತ್ಯಕ್ಕೆ ರೂ.8.40 ಕೋಟಿಗಳನ್ನು ಕರಡು ಮತ್ತು ಅನುಮಾನಾಸ್ಪದ ಸಾಲಗಳ ನಿಧಿಗಾಗಿ ಅವಕಾಶ ಕಲ್ಪಿಸಿದ್ದು, ಇದನ್ನು ಕಳೆದ ನಂತರ ನಿವ್ವಳ ಅನುತ್ಪಾದಕ ಆಸ್ತಿ ರೂ.4.92 ಕೋಟಿಗಳಾಗಿದ್ದು, ಇದು ಒಟ್ಟು ನಿವ್ವಳ ಸಾಲದ ಶೇ. 5.37 ರಷ್ಟಿದೆ.

2023–24ನೇ ಸಾಲಿನಾಂತ್ಯಕ್ಕೆ ವಸೂಲಾತಿ ಬಗ್ಗೆ ಹೆಚ್ಚಿನ ಗಮನಹರಿಸಿ ಕಾನೂನು ಕ್ರಮಗಳನ್ನು ಜರುಗಿಸಿ

ಒಟ್ಟು NPA (Net) ಪ್ರಮಾಣ ಶೇ.3 ಕ್ಕಿಂತ ಕಡಿಮೆಗೊಳಿಸುವ ಗುರಿಯನ್ನು ಹೊಂದಲಾಗಿರುತ್ತದೆ. ಅನುತ್ಪಾದಕ ಆಸ್ತಿಯ ಪ್ರಮಾಣ ಹೆಚ್ಚಾದಲ್ಲಿ ಬ್ಯಾಂಕಿನ ಅಭಿವೃದ್ಧಿಗೆ ಅಂದರೆ, ಕಾರ್ಯವ್ಯಾಪ್ತಿ ವಿಸ್ತರಣೆ, ಶಾಖೆ ತೆರೆಯುವಿಕೆಗೆ ತೊಡಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮ ಸಾಲಗಳ ಮರುಪಾವತಿ ಹಾಗೂ ತಮ್ಮ ಸ್ನೇಹಿತರುಗಳ ಸಾಲಗಳ ಮರುಪಾವತಿಯನ್ನು ಸರಿಯಾದ ರೀತಿ ಮಾಡಿಸುವುದರ ಮುಖಾಂತರ ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸುತ್ತೀರೆಂದು ವಿನಂತಿಸುತ್ತೇನೆ.

## OTS Scheme (One Time settlement)

ಇತ್ತೀಚಿನ ಬೆಳವಣಿಗೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ಅನುತ್ಪಾದಕ ಸಾಲಗಳನ್ನು ಕಡಿಮೆಮಾಡುವ ದೃಷ್ಟಿಯಿಂದ ಹಳೆಯ D-3-ವರ್ಗದ ಅನುತ್ಪಾದಕ ಸಾಲಗಳನ್ನು OTS (One Time settlement) ಮೂಲಕ ತೀರುವಳಿ ಮಾಡಿಕೊಳ್ಳಲು ಎಲ್ಲಾ ಸಹಕಾರಿ ಬ್ಯಾಂಕುಗಳಿಗೆ ಅವಕಾಶ ನೀಡಲಾಗಿದ್ದು, ಇದರ ಪ್ರಕಾರ ನಮ್ಮ ಬ್ಯಾಂಕು ಸಹ ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಕೆಲವು ಹಳೆಯ ಸಾಲಗಳನ್ನು ವಸೂಲಿ ಮಾಡುವ ಉದ್ದೇಶ ಹೊಂದಿದ್ದು, R.B.I ಸುತ್ತೋಲೆ ಅನುಸಾರ ನಿಯಮಾವಳಿಗಳನ್ನು (ಅಂದರೆ Policy) OTS ಗಾಗಿ ರಚಿಸಿದ್ದು, ಅದರ ಪ್ರಕಾರ ಕೆಲವು ಹಳೆಯ ಸಾಲಗಳನ್ನು ಇದರಡಿ ಮುಕ್ತಾಯಗೊಳಿಸುವ ಉದ್ದೇಶ ಹೊಂದಿದೆ.

ಈಗಾಗಲೇ OTS ಯೋಜನೆಗೆ ಕೆಲವು ಸಾಲಗಾರರು ಸ್ಪಂದಿಸಿದ್ದು, ಬ್ಯಾಂಕು ಅದಾಗಲೇ ವಸೂಲಿ ಕ್ರಮಗಳನ್ನು ಜರುಗಿಸಲಾಗಿದ್ದು, ಈ ಸಾಲಗಳನ್ನು ಮುಕ್ತಾಯಗೊಳಿಸುವ ಹಂತದಲ್ಲಿರುತ್ತವೆ.

## ನೆಟ್ ಬ್ಯಾಂಕಿಂಗ್ ಸೇವೆ:

ಇತ್ತೀಚಿನ ಬ್ಯಾಂಕಿಂಗ್ ಸ್ಪರ್ಧಾತ್ಮಕ ಯುಗದಲಿ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಸರಿಸಮಾನವಾಗಿ ಸೇವೆ ನೀಡಬೇಕಿದ್ದು, ಬ್ಯಾಂಕಿನ ಗ್ರಾಹಕರಿಗೆ QR Code (UPI-Payment System) ಪಾವತಿ ಸೌಲಭ್ಯವನ್ನು ಒದಗಿಸಿದ್ದು ಇದರ ಉಪಯೋಗವನ್ನು ಪಡೆಯಲು ವಿನಂತಿಸುತ್ತೇನೆ. ಸದ್ಯದಲ್ಲಿಯೇ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್, ಐ.ಎಂ.ಪಿ.ಎಸ್. ನೇರ ಸೇವೆಯನ್ನು ಒದಗಿಸಲು ಮತ್ತು ಬಿಲ್ ಪಾವತಿಯ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಸಂಬಂಧಪಟ್ಟ ಬ್ಯಾಂಕಿನೊಂದಿಗೆ ವ್ಯವಹಾರಿಕ ಮಾತುಕತೆ ಪ್ರಗತಿಯಲ್ಲಿದ್ದು, ಆದಷ್ಟು ಬೇಗ ನೆಟ್ ಬ್ಯಾಂಕಿಂಗ್ ಸೇವೆಗಳು ಗ್ರಾಹಕರಿಗೆ ಸಿಗಲಿವೆ ಎಂದು ತಿಳಿಸಲು ಹರ್ಷಿಸುತ್ತೇನೆ.

ಬ್ಯಾಂಕು, ಅಧಿಕಾರಿ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರ ಪರಿಶ್ರಮದಿಂದಾಗಿ ಸದರಿ ಸಾಲಿನಲ್ಲಿ ಉತ್ತಮ ಲಾಭಗಳಿಸಲು ಸಾಧ್ಯವಾಗಿದ್ದು, ಹಾಗೂ ಲೆಕ್ಕಪರಿಶೋಧನಾ ದರ್ಜೆಯು ಈ ವರ್ಷವೂ " ಎ " ದರ್ಜೆಯಲ್ಲಿಯೇ ಮುಂದುವರೆಯಲು ಸಾಧ್ಯವಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತಾ, ಬ್ಯಾಂಕಿನ ಅಧಿಕಾರಿ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಆಡಳಿತ ಮಂಡಳಿಯ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಾ, ಕೈಗೊಳ್ಳಬೇಕಾದ ನೀತಿ–ನಿರ್ಧಾರಗಳಿಗೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನಗಳನ್ನು ಕಾಲಕಾಲಕ್ಕೆ ನೀಡಿ, ನನ್ನೊಟ್ಟಿಗೆ ಸಹಕರಿಸುತ್ತಿರುವ ನಿರ್ದೇಶಕ ಮಂಡಳಿಯ ಎಲ್ಲಾ ಸದಸ್ಯರುಗಳಿಗೆ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ.

ಕೊನೆಯದಾಗಿ ಬ್ಯಾಂಕಿನ ಮೇಲೆ ಪ್ರೀತಿ, ವಿಶ್ವಾಸ ಮತ್ತು ಅಭಿಮಾನವಿಟ್ಟು ವ್ಯವಹರಿಸುತ್ತಿರುವ ಬ್ಯಾಂಕಿನ ಪ್ರಗತಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾ ಅಮೂಲ್ಯ ಸದಸ್ಯರಿಗೂ, ಠೇವಣಿದಾರರಿಗೂ, ಆಡಳಿತ ಮಂಡಳಿಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ ಬ್ಯಾಂಕಿಗೆ ಹೆಚ್ಚಿನ ಸದಸ್ಯರನ್ನು ನೇಮಿಸಬೇಕಾಗಿ ಕೋರುತ್ತೇನೆ. ತಮ್ಮೆಲ್ಲರ ಸಹಕಾರ ಮತ್ತು ಆಶೀರ್ವಾದವನ್ನು ಮುಂದೆ ಇನ್ನೂ ಹೆಚ್ಚಿನ ರೀತಿಯಲ್ಲಿ ನೀಡಬೇಕೆಂದು ಕೋರುತ್ತಾ. ಈ ದಿನದ ಸರ್ವ ಸದಸ್ಯರ ಸಭೆಗೆ ನನ್ನ ಹೃದಯಪೂರ್ವಕ ಸ್ವಾಗತವನ್ನು ಬಯಸುತ್ತಾ ಈ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಪ್ರಾರ್ಥಿಸಿದರು. ಹಾಗೂ ಸಭೆಯ ನಂತರ ತಾವುಗಳೆಲ್ಲರೂ ಔತಣದ ಸವಿಯನ್ನು ಆಸ್ವಾದಿಸಿ ತೆರಳಬೇಕೆಂದು ಸದಸ್ಯರಲ್ಲಿ ವಿನಂತಿಸಿದರು.

ವಂದನೆಗಳು

**"ಜೈ ಹಿಂದ್ ಜೈ ಕರ್ನಾಟಕ"** ಘೋಷಣೆಯೊಂದಿಗೆ ಸ್ವಾಗತ ಭಾಷಣವನ್ನು ಮುಗಿಸಿದರು.

**3. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ ಅರ್ಪಣೆ:–**

ದಿನಾಂಕ: 01.04.2022 ರಿಂದ 31.03.2023ರ ಅವಧಿಯಲ್ಲಿ ದೈವಾದೀನರಾದ ಸದಸ್ಯರುಗಳ ಪಟ್ಟಿಯನ್ನು ಬ್ಯಾಂಕಿನ ಸಹಾಯಕ ಲೆಕ್ಕಿಗರಾದ ಶ್ರೀಮತಿ ಜಿ.ಎನ್.ಸೌಮ್ಯ ರವರು ಸಭೆಯಲ್ಲಿ ಓದಿದರು. ಮೃತರ ಆತ್ಮಗಳಿಗೆ ಶಾಂತಿಯನ್ನು ಕರುಣಿಸಲೆಂದು ಕೋರಿ ಒಂದು ನಿಮಿಷ ಮೌನ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ದೈವಾದೀನರಾದ ಸದಸ್ಯರುಗಳ ವಿವರ ಕೆಳಕಂಡತಿದೆ.

| ಕ್ರ.ಸಂ. | ಮೃತ ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 1 | ಶ್ರೀ ಜಿ.ವಿ.ರಾಮಯ್ಯ ಗುಪ್ತಾ | 20 |
| 2 | ಶ್ರೀ ಎಂ.ಆರ್.ಶಂಕರ್ ರಾವ್ | 527 |
| 3 | ಶ್ರೀ ಎಲ್.ಎಸ್.ನಾಗರಾಜ್ | 661 |
| 4 | ಶ್ರೀ ಸುಂದರ್ ರಾಜ್ | 750 |
| 5 | ಶ್ರೀ ದೃವರಾಜ್.ಬಿ | 1152 |
| 6 | ಶ್ರೀ ಚಂದ್ರಶೇಖರ್.ಆರ್ | 1255 |
| 7 | ಶ್ರೀಮತಿ ನಿರ್ಮಲ.ಬಿ.ಆರ್ | 1483 |
| 8 | ಶ್ರೀಮತಿ ಜೀವರತ್ನಮ್ಮ | 2086 |
| 9 | ಶ್ರೀ ಶಾಂತಕುಮಾರ್ | 2332 |
| 10 | ಶ್ರೀ. ಧಾನೇಶ್ವರಿ ಧಮೋಧರನ್ | 2356 |
| 11 | ಶ್ರೀ ನಾಗರಾಜ್ ಎಸ್.ವಿ | 2924 |
| 12 | ಶ್ರೀ ಸತೀಶ್.ಎನ್ | 3027 |
| 13 | ಶ್ರೀ ಕೆ.ಆರ್.ವೆಂಕಟೇಶ್ ಗುಪ್ತಾ | 3320 |
| 14 | ಶ್ರೀ ಎನ್.ಮಲ್ಲಿಕಾರ್ಜುನ ಶೆಟ್ಟಿ | 3471 |
| 15 | ಶ್ರೀ ರಾಘವಚಂದ್ರ | 3636 |
| 16 | ಶ್ರೀ ವಿಶ್ವನಾಥ್ ಡಿ.ಎನ್ | 4299 |
| 17 | ಶ್ರೀ ನವೀನ್ ವಿ.ಎನ್ | 4599 |
| 18 | ಶ್ರೀ ರಮೇಶ್ ಎಂ | 4615 |
| 19 | ಶ್ರೀ ಎಂ.ಆರ್. ವೇಣುಗೋಪಾಲ್ | 4953 |
| 20 | ಶ್ರೀ ಚಂದ್ರಶೇಖರ್.ಜಿ | 4998 |
| 21 | ಶ್ರೀಮತಿ ಗೀತಾ ಪಿ.ಎಸ್ | 5305 |
| 22 | ಶ್ರೀ ಎಂ.ಪ್ರಭಾಕರ್ ಗುಪ್ತಾ | 5440 |
| 23 | ಶ್ರೀಮತಿ ಎಸ್.ಎಲ್.ರಂಗನಾಯಕಿ | 5449 |
| 24 | ಶ್ರೀ ವೆಂಕಟಕೃಷ್ಣಯ್ಯ ಶೆಟ್ಟಿ | 5515 |
| 25 | ಶ್ರೀಮತಿ ಸವಿತಾ ದೇವಿ | 5685 |

**4. ಸರ್ವಸದಸ್ಯರ ಸಭೆಯ ಸೂಚನಾ ಪತ್ರವನ್ನು (ನೋಟೀಸು) ಓದಿ ದಾಖಲಿಸುವುದು:**

ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿದರು.

ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ ಸದಸ್ಯತ್ವ ಸಂಖ್ಯೆ: 5856 ರವರು ಮಾತನಾಡಿ ಸಭೆಯ ಸೂಚನಾ ಪತ್ರದಲ್ಲಿ ಗೌರವ ಅಧ್ಯಕ್ಷರು ಎಂದು ನಮೂದಿಸಿದ್ದೀರ ಇವರು ಪೂರ್ಣಪ್ರಮಾಣದ ಅಧ್ಯಕ್ಷರಾಗಿರುವುದರಿಂದ ಹಾಗೇ ಸಂಭೋದಿಸಬಾರದೆಂದು ತಿಳಿಸಿದರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ತಪ್ಪಾಗಿದ್ದು, ತಿದ್ದುಕೊಳ್ಳಲಾಗುವುದೆಂದು ತಿಳಿಸಿದರು.

ಮುಂದುವರಿದು ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ ರವರು ಮಾತನಾಡುತ್ತಾ, ಪುಟ 2ರಲ್ಲಿ ಸಭೆಯಲ್ಲಿ ಚರ್ಚೆಗಾಗಿ ವಿಷಯಗಳೇನಾದರೂ ಇದ್ದಲ್ಲಿ ಅಂತಹ ವಿಷಯಗಳನ್ನು ಪತ್ರದ ಮುಖೇನ ಸಭೆ ನಡೆಯುವ 5 ದಿವಸ ಮುಂಚಿತವಾಗಿ ದಿನಾಂಕ: 31.07.2023 ರೊಳಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ತಲುಪಿಸಬೇಕಾಗಿ ಎಂದು ಹಾಕಿದ್ದೀರ ಸದಸ್ಯರಿಗೆ ಸಭೆಯಲ್ಲಿ ಮುಖಾಮುಖಿ ಮಾತನಾಡಲು ಅವಕಾಶ ಇದ್ದು, ಯಾವುದೇ ನಿರ್ಬಂದವಿರುವುದಿಲ್ಲ ನೀವು ಸದಸ್ಯರ ಧ್ವನಿಯನ್ನ ಅಡಗಿಸಬೇಡಿ ಎಂದು ತಿಳಿಸಿದರು.

ಉಪಾಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ್ ರವರು ಮಾತನಾಡಿ ನಿಮ್ಮ ಪ್ರಶ್ನೆಗಳಿಗೆ ಉತ್ತರವನ್ನು ರೆಡಿ ಮಾಡಿಕೋಳ್ಳುವ ಸಲುವಾಗಿ ಮುಂಚಿತವಾಗಿ ಚರ್ಚೆಯ ವಿಷಯಗಳಿಗೆ ದಿನಾಂಕವನ್ನು ನಿಗದಿ ಪಡಿಸಲಾಗಿದ್ದು, ಸದಸ್ಯರು ಯಾವಾಗಬೇಕಾದರು ಮಾತನಾಡಬಹುದು ಎಂದು ತಿಳಿಸಿದರು

ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಮಂಡಿಸಿದ ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಸದಸ್ಯರಾದ ಶ್ರೀಮತಿ ಪದ್ಮಾವತಿ ಬಾಯಿ ಸದಸ್ಯತ್ವ ಸಂಖ್ಯೆ: 4067 ಅವರು ಒಪ್ಪಿಗೆಗಾಗಿ ಸೂಚಿಸಿದ್ದನ್ನು, ಸದಸ್ಯರಾದ ಶ್ರೀ ವೆಂಕಟೇಶ್.ಕೆ.ಎನ್. ಸದಸ್ಯತ್ವ ಸಂಖ್ಯೆ: 2277 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯ ಸೂಚನಾ ಪತ್ರಕ್ಕೆ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**5. ಬ್ಯಾಂಕಿನ ಹಿರಿಯ ಸದಸ್ಯರಿಗೆ ಸನ್ಮಾನ:–**

ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಬಿ.ಎಂ. ಸರಸ್ವತಿರವರು ಹಿರಿಯ ಸದಸ್ಯರುಗಳ ಪಟ್ಟಿಯನ್ನು ಮಂಡಿಸಿ ವೇದಿಕೆಗೆ ಆಹ್ವಾನಿಸಿದರು. ಈ ಕೆಳಕಂಡ ಹಿರಿಯ ಸದಸ್ಯರನ್ನು ಬ್ಯಾಂಕಿನ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯವರು ಶಾಲು–ಹಾರ–ಫಲ ಸಮರ್ಪಣೆಯೊಂದಿಗೆ ಸನ್ಮಾನಿಸಲಾಯಿತು.

| ಕ್ರ.ಸಂ. | ಹಿರಿಯ ಸದಸ್ಯರ ಹೆಸರು | ಸದಸ್ಯತ್ವದ ಸಂಖ್ಯೆ |
|---|---|---|
| 1 | ಶ್ರೀ ಸತೀಶ್ ಬಾಬು | 1223 |
| 2 | ಶ್ರೀ ಬಾಲಮುಕುಂದ್.ಬಿ.ಆರ್ | 1228 |
| 3 | ಶ್ರೀ ಶ್ರೀನಿವಾಸ್ ಡಿ.ಎಸ್ | 1240 |
| 4 | ಶ್ರೀಮತಿ ಪ್ರಭಾ .ಡಿ.ಎನ್ | 1241 |
| 5 | ಶ್ರೀಮತಿ ಪ್ರತಿಭಾ ಡಿ.ಎಸ್ | 1242 |
| 6 | ಶ್ರೀ ಶ್ರೀನಿವಾಸ ಮೂರ್ತಿ.ಜಿ | 1245 |
| 7 | ಶ್ರೀ ಅಜಂತಾ ವಿ.ಎಸ್. | 1248 |
| 8 | ಶ್ರೀಮತಿ ಶೈಲಾ ಎಸ್.ಎ. | 1249 |
| 9 | ಶ್ರೀ ಕೃಷ್ಣಮೂರ್ತಿ | 1253 |
| 10 | ಶ್ರೀ ಸೋಮಶೇಖರ್.ಪಿ | 1271 |
| 11 | ಶ್ರೀ ರಾಜು.ಪಿ | 1273 |
| 12 | ಶ್ರೀ ನಂಜುಂಡ ರಾವ್.ಎಸ್ | 1276 |
| 13 | ಶ್ರೀ ಮುರಳೀಧರ್ ಜಿ. | 1283 |

**6. ಬ್ಯಾಂಕಿನ ಉತ್ತಮ ಗ್ರಾಹಕರಿಗೆ ಸನ್ಮಾನ:–**

ಹಾಗೂ ಈ ಕೆಳಕಂಡ ಗ್ರಾಹಕರನ್ನು 2022–2023 ನೇ ಸಾಲಿನ ಉತ್ತಮ ಗ್ರಾಹಕರೆಂದು ಆಯ್ಕೆ ಮಾಡಿ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯವರು ಶಾಲು–ಹಾರ–ಫಲ ಸಮರ್ಪಣೆಯೊಂದಿಗೆ ಸನ್ಮಾನಿಸಿದರು.

| ಕ್ರ.ಸಂ. | ಗ್ರಾಹಕರ ಹೆಸರು | ಖಾತೆ ವಿವರ |
|---|---|---|
| 1 | ಶ್ರೀಮತಿ ಅಶ್ವತ್ಥಮ್ಮ ಎಸ್. | ಠೇವಣಿ ಖಾತೆ |
| 2 | ಶ್ರೀ ಶ್ರವಣ್ ಎನ್.ಎಸ್ | ಠೇವಣಿ ಖಾತೆ |
| 3 | ಶ್ರೀ ಶೇಖರ್.ಡಿ.ವಿ | ಚಾಲ್ತಿ ಖಾತೆ |
| 4 | ಶ್ರೀ ಭೂಪೇಂದ್ರ ಕುಮಾರ್ | ಚಾಲ್ತಿ ಖಾತೆ |
| 5 | ಶ್ರೀ ದೇವರಾಜು.ಎಂ | ಚಾಲ್ತಿ ಖಾತೆ |
| 6 | ಶ್ರೀ ಜಗಧೀಶ್ ಎಂ.ಎಸ್ | ಚಾಲ್ತಿ ಖಾತೆ |
| 7 | ಶ್ರೀ ವೇಣುಗೋಪಾಲನ್.ವಿ | ಉಳಿತಾಯ ಖಾತೆ |
| 8 | ಶ್ರೀ ಭಾಸ್ಕರ್.ಇ | ಸಾಲ ಖಾತೆ |
| 9 | ಶ್ರೀಮತಿ ಚಾಮುಂಡೇಶ್ವರಿ.ಸಿ | ಸಾಲ ಖಾತೆ |
| 10 | ಶ್ರೀ ಪರಮಶಿವಮ್.ಸಿ | ಸಾಲ ಖಾತೆ |

ಇದೇ ಸಂದರ್ಭದಲ್ಲಿ ಬ್ಯಾಂಕಿನಲ್ಲಿ 25 ವರ್ಷಗಳ ಸೇವೆ ಸಲ್ಲಿಸಿದಂತಹ ಬ್ಯಾಂಕಿನ ಕುಮಾರಸ್ವಾಮಿ ಲೇಔಟ್ ಶಾಖೆಯ ಸಹಾಯಕ ಲೆಕ್ಕಿಗರಾದ ಶ್ರೀ ಎಸ್.ಡಿ.ಬಾಲಸುಬ್ರಮಣ್ಯಮ್ ರಾಜು ರವರನ್ನು ಆಡಳಿತ ಮಂಡಳಿಯವರು ಉಡುಗೊರೆ ನೀಡಿ ಗೌರವ ಪೂರ್ವಕವಾಗಿ ಸನ್ಮಾನಿಸಿದರು

## 7. 55ನೇ ವಾರ್ಷಿಕ ಸರ್ವ ಸದಸ್ಯರ ಸಭಾ ನಡವಳಿಕೆಗಳ (2021–2022)ಮಂಡನೆ ಅಂಗೀಕಾರ:–

ನಿರ್ದೇಶಕರಾದ ಶ್ರೀ ವೈ.ಎಲ್. ಪ್ರಸಾದ್ ರವರು 55ನೇ ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಕೆಗಳನ್ನು ಸಭೆಯಲ್ಲಿ ಮಂಡಿಸಿ ಸದಸ್ಯರ ಅನುಮತಿಯನ್ನು ಕೋರಿದರು.

ಸದಸ್ಯರಾದ ಶ್ರೀ ಸದಾನಂದಶಾಸ್ತ್ರಿ ಸದಸ್ಯತ್ವ ಸಂಖ್ಯೆ: 5856 ರವರು ಮಾತನಾಡಿ, ಸದಸ್ಯರು ಪತ್ರಬರೆದಾಗ ತಕ್ಷಣ ಪತ್ರಕ್ಕೆ ಉತ್ತರ ಕೊಡಬೇಕು ನೋಟೀಸ್ ಮಾತ್ರ ಕಳುಹಿಸುತ್ತೀರ ವರದಿ ಪುಸ್ತಕ ನೀಡಲು ಪತ್ರ ಬರೆದರು ಯಾವುದೇ ಉತ್ತರ ನೀಡಿಲ್ಲವೆಂದು ತಿಳಿಸಿದರು. ಮುಂದುವರಿದು ಮಾತನಾಡುತ್ತಾ, ವೃದ್ದರು ಹಾಗೂ ಹಿರಿಯರು ಮನೆಯವರಿಗೆ ತಿಳಿಯದಂತೆ ಠೇವಣಿಗಳನ್ನು ಇಟ್ಟಿರುತ್ತಾರೆ ನನಗೆ ನಿಮ್ಮ ಬ್ಯಾಂಕಿನಿಂದ ಬೇರೆಯವರಿಗೆ ಹೋಗಬೇಕಾದ ಠೇವಣಿಯ ಪತ್ರ ನನಗೆ ಬಂದಿದೆ ಬ್ಯಾಂಕು ಗ್ರಾಹಕರ ಗೋಪ್ಯತೆಯನ್ನು ಕಾಪಾಡಬೇಕು ಎಂದು ತಿಳಿಸಿದರು. ಮುಂದುವರಿದು ಬ್ಯಾಂಕಿನ ವಿಲೀನದ ಬಗ್ಗೆ ಯಾವಾಗಲು ಮಾತನಾಡುತ್ತೀರ ನಿಮ್ಮ ಐಡೆಂಟಿಗಿಂತ ಸದಸ್ಯರ ಐಡೆಂಟಿಟಿ ಮುಖ್ಯವೆಂದು ತಿಳಿಸದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಬಿ.ಎ.ಕೃಷ್ಣಭಗವಾನ್‌ರವರು ಮುಂದೆ ಹೀಗೆ ಆಗದಂತೆ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಗೋಪಿನಾಥ್, ಸದಸ್ಯತ್ವ ಸಂಖ್ಯೆ:4716 ರವರು ಮಾತನಾಡುತ್ತಾ ಹಿಂದಿನ ವರ್ಷದ ವಾರ್ಷಿಕ ಸಭೆಯಲ್ಲಿ ಬ್ಯಾಂಕಿನ ಹೆಸರು ಬದಲಾವಣೆ ಹಾಗೂ ನಮ್ಮ ಬ್ಯಾಂಕಿನೊಂದಿಗೆ ಇತರೆ

ಬ್ಯಾಂಕುಗಳ ವಿಲೀನ ಬಗ್ಗೆ ಚರ್ಚೆಯಾಗಿತ್ತು, ಏನಾದರೂ ಕ್ರಮವಾಗಿದೆಯೇ ಎಂದು ತಿಳಿಸುತ್ತೀರ, ಬ್ಯಾಂಕಿನ ಜೊತೆ ವಿಲೀನ ವಾಗಲು ನಿಮ್ಮ ಬಳಿ ಯಾವ ಬ್ಯಾಂಕುಗಳು ಬಂದಿವೆ ತಿಳಿಸಿ ಎಂದು ಕೇಳಿದರು.

ಉಪಾಧ್ಯಕ್ಷರಾದ ಶ್ರೀ ಆರ್.ಪಿ. ರವಿಶಂಕರ್‌ರವರು ಮಾತನಾಡಿ ಬ್ಯಾಂಕಿನ ಹೆಸರು ಬದಲಾವಣೆ ಆದನಂತರ ಕ್ರಮವಾಗುತ್ತದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಗಜೇಂಧ್ರ ಸದಸ್ಯತ್ವ ಸಂಖ್ಯೆ: 6026 ಅವರು ಒಪ್ಪಿಗೆಗಾಗಿ ಸೂಚಿಸಿದ್ದನ್ನು ಸದಸ್ಯರಾದ ಶ್ರೀ ಸುಬ್ಬರಾವ್ ಸದಸ್ಯತ್ವ ಸಂಖ್ಯೆ: 4920 ಹಾಗೂ ಶ್ರೀಮತಿ ಪದ್ಮಾವತಿ ಬಾಯಿ ಸದಸ್ಯತ್ವ ಸಂಖ್ಯೆ: 4067 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**8. <u>2022–2023 ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿಯ ಮಂಡನೆ ಅಂಗೀಕಾರ:</u>–**

ನಿರ್ದೇಶಕರಾದ ಶ್ರೀ ಜೆ.ರಾಮಕೃಷ್ಣರವರು 2022–2023ನೇ ಸಾಲಿನ ಆಡಳಿತ ಮಂಡಳಿಯ ವರದಿಯನ್ನು ಸಭೆಯಲ್ಲಿ ಮಂಡಿಸಿದರು.

ನಿರ್ದೇಶಕರಾದ ಶ್ರೀ ಜೆ.ರಾಮಕೃಷ್ಣ ರವರು ಮಂಡಿಸಿದ 2022–2023ನೇ ಸಾಲಿನ ಆಡಳಿತ ಮಂಡಳಿ ವಾರ್ಷಿಕ ವರದಿಯ ಮಂಡನೆ ಅಂಗೀಕಾರವನ್ನು ಸದಸ್ಯರಾದ ಕೆ.ಎಸ್.ಮುರಳಿಧರ್ ಸದಸ್ಯತ್ವ ಸಂಖ್ಯೆ: 1633 ಅವರು ಒಪ್ಪಿಗೆಗಾಗಿ ಸೂಚಿಸಿದ ವರದಿಯನ್ನು ಸದಸ್ಯರಾದ ಶ್ರೀ ಎನ್.ಜಿ.ಮಹೇಶ್ ಸದಸ್ಯತ್ವ ಸಂಖ್ಯೆ: 690 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**9. <u>2022–2023 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಆಡಳಿತ ಮಂಡಳಿಯ ಅನುಪಾಲನಾ ವರದಿ ಅಂಗೀಕಾರ.</u>**

2022–2023 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ನಿರ್ದೇಶಕರಾದ ಶ್ರೀ ಎ.ವೆಂಕಟೇಶಯ್ಯ ಶೆಟ್ಟಿ ರವರು ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.

ಸದಸ್ಯರಾದ ಶ್ರೀ ಗೋಪಿನಾಥ್, ಸದಸ್ಯತ್ವ ಸಂಖ್ಯೆ:4716 ರವರು ಮಾತನಾಡುತ್ತಾ ಕಳೆದ ವರ್ಷಕ್ಕಿಂತ ಈ ವರ್ಷ ಸಾಲ ಕಮ್ಮಿಯಾಗಿದೆ ಆದರೆ ಕಳೆದ ವರ್ಷ ಎನ್.ಪಿ.ಎ. ಪ್ರಾವಿಷನ್ ರೂ.1.44 ಕೋಟಿ ಈ ವರ್ಷ ರೂ.1.47 ಕೋಟಿ ಕಳೆದ ವರ್ಷಕ್ಕಿಂತ ಜಾಸ್ತಿಯಾಗಿದೆ ಏಕೆ ಎಂದು ಕೇಳಿದರು. ಕ್ವಾಲಿಟಿ ಲೋನ್ ಕಮ್ಮಿ ಆಯಿತಾ, ಡಿಪಾಲ್ಟರ್ ಜಾಸ್ತಿಯಾಗಿದೆ ಏನ್ ಮಾಡುತ್ತೀರ, ಲಾಭ ನಷ್ಟ ಖಾತೆಯಲ್ಲಿ ಸರ್ವಸದಸ್ಯರ ಸಭೆ ಖರ್ಚು 7 ಲಕ್ಷ ಜಾಸ್ತಿಯಾಗಿದೆ, 4 ಕೋಟಿ ಕ್ಯಾಪಿಟಲ್ 1.47 ಕೋಟಿ ಪ್ರಾವಿಷನ್ ಇಟ್ಟರೆ ಹೇಗೆ ಎಂದು ಕೇಳಿದರು.

ನಿರ್ದೇಶಕರಾದ ಶ್ರೀ ಎ.ವೆಂಕಟೇಶಯ್ಯ ಶೆಟ್ಟಿ ರವರು ಉತ್ತರಿಸುತ್ತಾ, ಆರ್.ಬಿ.ಐ. ನಿಯಮಾನುಸಾರವಾಗಿ ಎನ್.ಪಿ.ಎ.ಗೆ ಪ್ರಾವಿಷನ್ ಮಾಡಬೇಕು ವರ್ಷದಿಂದ ವರ್ಷಕ್ಕೆ ಪ್ರಾವಿಷನ್ ಹೆಚ್ಚಾಗುತ್ತಾ ಹೋಗುತ್ತದೆ ಈಗಾಗಿ ಕಳೆದ ಸಾಲಿಗಿಂತ ಹೆಚ್ಚಿಗೆ ಪ್ರಾವಿಷನ್ ಮಾಡಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಗೋಪಿನಾಥ್ ರವರು ಮುಂದುವರಿದು ಮಾತನಾಡುತ್ತಾ, ಹೆಚ್.ಡಿ.ಎಫ್.ಸಿ. ಬ್ಯಾಂಕಿನಿಂದ ನಮ್ಮ ಬ್ಯಾಂಕಿಗೆ 85 ಲಕ್ಷ ಲಾಸ್ ಆಗಿದೆ ಆದರೂ ಇನ್ನೂ ಆ ಬ್ಯಾಂಕಿನ ಜೊತೆ ವ್ಯವಹಾರ ಏತಕ್ಕೆ ಇಟ್ಟುಕೊಂಡಿದ್ದೀರ ಎಂದು ಕೇಳಿದರು. ಹಾಗೂ ಐ.ಎನ್.ಜಿ. ವೈಶ್ಯಾ ಬ್ಯಾಂಕಿನಲ್ಲಿನ ಖಾತೆಯನ್ನು

ಮುಂದುವರಿಸಿದ್ದು 1.24 ಲಕ್ಷಕ್ಕೆ ಯಾವುದೇ ಬಡ್ಡಿ ಬರುವುದಿಲ್ಲ ಕೂಡಲೇ ಖಾತೆಯನ್ನು ಮುಕ್ತಾಯಗೊಳಿಸಲು ಸೂಚಿಸಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಉತ್ತರಿಸುತ್ತಾ, ಹೆಚ್.ಡಿ.ಎಫ್.ಸಿ. ಬ್ಯಾಂಕಿನ ಮುಖಾಂತರ ಎ.ಟಿ.ಎಂ. ವ್ಯವಹಾರ ನಡೆಯುತ್ತಿದ್ದು, ಹಾಗೂ ಸಿ.ಎಸ್.ಜಿ.ಎಲ್. ಖಾತೆ ಇರುವುದರಿಂದ ಸರ್ಕಾರಿ ಭದ್ರತೆಗಳನ್ನು ಕೊಳ್ಳಲು ಹಾಗೂ ಮಾರಾಟ ಮಾಡಲು ವ್ಯವಹಾರ ಮುಂದುವರಿಸಲಾಗುತ್ತಿದೆ ಎಂದು ತಿಳಿಸಿದರು ಹಾಗೂ ಐ.ಎನ್.ಜಿ. ವೈಶ್ಯ ಬ್ಯಾಂಕಿನಲ್ಲಿನ ಖಾತೆಯನ್ನು ಮುಕ್ತಾಯಗೊಳಿಸಲು ಪತ್ರವ್ಯವಹಾರವನ್ನು ಮಾಡಿದ್ದು, ಸದ್ಯದಲ್ಲೇ ಮುಕ್ತಾಯ ಮಾಡಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಗೋಪಿನಾಥ್ ರವರು ಮುಂದುವರಿದು ಮಾತನಾಡುತ್ತಾ, ಎ.ಟಿ.ಎಂ. ಬೇರೆ ಬ್ಯಾಂಕಿಗೆ ಬದಲಿಸಿ, 85 ಲಕ್ಷ ಲಾಸ್ ಆಗಿರುವ ಬ್ಯಾಂಕಿನ ಜೊತೆ ಏಕೆ ವ್ಯವಹಾರ ವೆಂದು ಕೇಳಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಉತ್ತರಿಸುತ್ತಾ, ಎ.ಟಿ.ಎಂ. ಬೇರೆ ಬ್ಯಾಂಕಿಗೆ ಬದಲಾಯಿಸಲು ಎನ್.ಪಿ.ಸಿ.ಐ ಪರ್ಮಿಷನ್ ಬೇಕು ಮತ್ತು ಅದಕ್ಕೆಲ್ಲಾ ಚಾರ್ಜ್ ಕಟ್ಟಬೇಕು, ಸಿ.ಎಸ್.ಜಿ.ಎಲ್. ಖಾತೆ ಇರುವುದರಿಂದ ಖಾತೆಯಲ್ಲಿ ಬ್ಯಾಲೆನ್ಸ್ ಕೂಡ ಇಡಬೇಕು ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಗೋಪಿನಾಥ್ ರವರು ಮುಂದುವರಿದು ಮಾತನಾಡುತ್ತಾ, ಪುಟ ಸಂಖ್ಯೆ:58 ರಲ್ಲಿ ಅಪೆಕ್ಸ್ ಬ್ಯಾಂಕ್ ವ್ಯತ್ಯಾಸ ರೂ.1,49,886.00 ಇದ್ದು, ದಿನಾಂಕ: 03.04.2023ರಂದು ವರ್ಗಾವಣೆ ಆಗಿರುತ್ತದೆ ಎಂದು ಇದೆ. ಪುಟ ಸಂಖ್ಯೆ: 79 ರಲ್ಲಿ ಅಪೆಕ್ಸ್ ಬ್ಯಾಂಕ್ ವ್ಯತ್ಯಾಸ ರೂ.1,49,886.00 ಗಳನ್ನು ಸರಿಪಡಿಸಿಕೊಳ್ಳಲು ಕ್ರಮವಿಡುವುದು ಎಂದು ಇದೆ ಇದು ಹೇಗೆ ಎಂದ ಕೇಳಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಉತ್ತರಿಸುತ್ತಾ, ಪುಟ ಸಂಖ್ಯೆ:58 ರಲ್ಲಿ ಅಪೆಕ್ಸ್ ಬ್ಯಾಂಕ್ ವ್ಯತ್ಯಾಸ ಬಗ್ಗೆ ಹಾಗೂ ಕ್ರಮದ ಬಗ್ಗೆ ವಿವರಿಸಿದ್ದು, ಇದು ಠೇವಣಿಗಳ ಮೇಲೆ ಬರಬೇಕಾದ ಬಡ್ಡಿಯಾಗಿದ್ದು, 31.03.2023ಕ್ಕೆ ನಮ್ಮ ಖಾತೆಗೆ ಜಮಾ ಆಗಿರುತ್ತದೆ ದಿನಾಂಕ: 03.04.2023ರಂದು ವರ್ಗಾವಣೆ ಮಾಡಿಕೊಳ್ಳಲಾಗಿದೆ ವ್ಯತ್ಯಾಸವೇನು ಇರುವುದಿಲ್ಲ. ಪುಟ ಸಂಖ್ಯೆ: 79 ರಲ್ಲಿ ಲೆಕ್ಕಪರಿಶೋಧನಾ ಕ್ರಮವಿಡಬೇಕಾದ ಕಂಡಿಕೆಗಳನ್ನು ತಿಳಿಸಿರುತ್ತಾರೆ ಎಂದು ಸಭೆಗೆ ಮನವರಿಕೆ ಮಾಡಿದರು.

ಸದಸ್ಯರಾದ ಶ್ರೀ ಗೋಪಿನಾಥ್ ರವರು ಮುಂದುವರಿದು ಮಾತನಾಡುತ್ತಾ, ಪುಟ ಸಂಖ್ಯೆ: 46 ರಲ್ಲಿ ಅಮಾನತ್ತು ಲೆಕ್ಕಗಳು, ಸಂಬಂಧಪಟ್ಟ ಕಂಡಿಕೆಗಳಲ್ಲಿ ವಿವರಿಸಲಾಗಿದೆ ಈ ಬಗ್ಗೆ ಕೇಳಿದರು ಹಾಗೂ ಸಹ ಸದಸ್ಯರ ಸಂಖ್ಯೇ ಶೇ.15 ಒಳಗೆ ಇರಬೇಕು ಇದರ ಬಗ್ಗೆ ಕ್ರಮತಗೆದುಕೊಳ್ಳಿ ಪುಟ ಸಂಖ್ಯೆ:54 ರಲ್ಲಿ ಸದಸ್ಯರಲ್ಲದವರ ಠೇವಣೆ ಎಂದು ಇದೆ, ಠೇವಣಿ ವಿಮೆ ಚಾಲ್ತಿಯಲ್ಲಿದೆಯೇ?, ಸುಸ್ತಿ ಸಾಲ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಬರುತ್ತಿದೆ, ಪುಟ ಸಂಖ್ಯೆ: 77 ಹೆಚ್.ಡಿ.ಎಫ್.ಸಿ. ಬ್ಯಾಂಕಿನಿಂದ ವಸೂಲಾಗಬೇಕಾದ ಹಣ ರೂ.68 ಲಕ್ಷಕ್ಕೆ ಬಂದಿದೆ. ಒಂದೇ ಮಾರ್ಗದಲ್ಲಿ ಹೋದರೆ ಆಗುವುದಿಲ್ಲ. ಕಾನೂನು ಸಲಹೆಗಾರರ ಸಲಹೆ ತಗೋಬೇಕು, ಎನ್.ಸಿ.ಆರ್.ಬಿ/ಸುಪ್ರೀಮ್ ಕೋರ್ಟ್‌ಗೆ ಅಪೀಲು ಹೋಗಿ ಇದು ಎಲ್ಲಾ ಸದಸ್ಯರ ಹಣ ಮಂಡಳಿಯ ಉಪಸಮಿತಿ ಮಾಡಿ ಕ್ರಮಕೈಗೊಳ್ಳಿ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ ಸದಸ್ಯತ್ವ ಸಂಖ್ಯೆ: 5856 ರವರು ಮಾತನಾಡಿ, ಮಹೋತ್ಸವ ನಿಧಿ ಎಂದು ಇದೆ ಯಾವ ನಿಧಿ ಎಂದು ಹಾಕಿ ಎಂದು ತಿಳಿಸಿದರು ಮುಂದುವರೆದು ಅವದಿ ಮೀರಿದ ಠೇವಣಿಗಳನ್ನು ಠೇವಣಿದಾರರಿಗೆ ತಲುಪಿಸುವ ವ್ಯವಸ್ಥೆ ಮಾಡಿ ಹಾಗೂ ಪುಟ ಸಂಖ್ಯೆ: 87 ರಲ್ಲಿ ಮಾಜಿ ನಿರ್ದೇಶಕರಾದ ಡಿ.ವಿ. ನರಸಿಂಹನ್ ಹಾಗೂ ಕುಟುಂಬದವರಿಗೆ ನೀಡಿರುವ ಸಾಲಗಳೆಂದು ಹೇಳಿದ್ದೀರ ಎಷ್ಟು ಸಾಲ ನೀಡಿದ್ದೀರ, ಯಾವಾಗ ನೀಡಿಲಾಗಿದೆ ಎಂದು ನಮೂದಿಸಿಲ್ಲವೆಂದು ಯಾವಾಗ ವಸೂಲಿ ಮಾಡುತ್ತೀರ ಎಂದು ಕೇಳಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಬಿ.ಎ.ಕೃಷ್ಣಭಗವಾನ್ ರವರು ಸದಸ್ಯರಾದ ಶ್ರೀ ಗೋಪಿನಾಥ್ ರವರ ಪ್ರಶ್ನೆಗೆ ಉತ್ತರಿಸುತ್ತಾ, ಅಮಾನತ್ತು ಲೆಕ್ಕಗಳು ಸರಿಪಡಿಸಿಕೊಂಡಿದ್ದು, ವರದಿಯಲ್ಲಿ ಸಂಬಂಧಪಟ್ಟ ಕಂಡಿಕೆಗಳಲ್ಲಿ ವಿವರಿಸಲಾಗಿದೆ ಎಂದು ತಿಳಿಸಲಾಗಿದೆ ಸಂಖ್ಯೆ : 54 ರಲ್ಲಿ ಸದಸ್ಯರಲ್ಲದವರ ಠೇವಣೆ ಎಷ್ಟು, ಸದಸ್ಯರುಗಳ ಠೇವಣಿ ಎಷ್ಟು ಎಂಬುದು ಅಷ್ಟೇ, ವಿಮೇ ಸಂಪೂರ್ಣವಾಗಿ ಅನ್ವಯವಾಗುತ್ತದೆ ಹೆಚ್.ಡಿ.ಎಫ್.ಸಿ. ಬ್ಯಾಂಕಿನಿಂದ ವಸೂಲಾಗಬೇಕಾದ ಬಾಕಿಯ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸಿ ವಸೂಲಾತಿ ಮಾಡಲಾಗುವುದು ಎಂದು ತಿಳಿಸಿದರು.

ಮುಂದುವರೆದು ಸದಸ್ಯರಾದ ಶ್ರೀ ಸದಾನಂದ ಶಾಸ್ತ್ರಿ ರವರ ಪ್ರಶ್ನೆಗೆ ಉತ್ತರಿಸುತ್ತಾ, ಮಹೋತ್ಸವ ನಿಧಿಯನ್ನು ಬ್ಯಾಂಕಿನ ಎಲ್ಲಾ ಮಹೋತ್ಸವಗಳಿಗೂ ಬಳಸಲಾಗುತ್ತದೆ, ಅವದಿ ಮೀರಿದ ಠೇವಣಿಗಳನ್ನು ಠೇವಣಿದಾರರಿಗೆ ತಲುಪಿಸುವ ವ್ಯವಸ್ಥೆ ಮಾಡಲಾಗುವುದು, ಮಾಜಿ ನಿರ್ದೇಶಕರಾದ ಡಿ.ವಿ. ನರಸಿಂಹನ್ ಹಾಗೂ ಕುಟುಂಬದವರಿಗೆ ನೀಡಿರುವ ಸಾಲಗಳನ್ನು ಓ.ಟಿ.ಎಸ್ ಮುಖಾಂತರ ಎಷ್ಟು ಸಾಧ್ಯವೋ ಅಷ್ಟು ಬಡ್ಡಿಯನ್ನು ಕಡಿಮೆ ಮಾಡಿ ಆರ್.ಬಿ.ಐ. ಪರ್ಮಿಷನ್ ತಗೆದುಕೊಂಡು ಮುಕ್ತಾಯ ಮಾಡಲಾಗುವುದು ಎಂದು ತಿಳಿಸಿದರು.

ಸಹ ಸದಸ್ಯರ ಸಂಖ್ಯೇ ಶೇ.15 ಒಳಗೆ ಇರಬೇಕು ಇದರ ಬಗ್ಗೆ ಕ್ರಮತಗೆದುಕೊಳ್ಳಿ ಎಂಬುದಕ್ಕೆ ಉಪಾಧ್ಯಕ್ಷರಾದ ಶ್ರೀ ಆರ್.ಪಿ.ರವಿಶಂಕರ್ ಮಾತನಾಡಿ ಬ್ಯಾಂಕಿನಲ್ಲಿ 4669 ಖಾಯಂ ಸದಸ್ಯರಿದ್ದು, ಅದರಲ್ಲಿ ಕೇವಲ 15 ಸದಸ್ಯರು ಮಾತ್ರ ವ್ಯವಹಾರ ಮಾಡಿದ್ದು, ಹೆಚ್ಚಿನ ವ್ಯವಹಾರ ಸಹಸದಸ್ಯರಿಂದಲೇ ನಡೆಯುತ್ತಿದೆ ಎಂದು ತಿಳಿಸಿ ಹಂತ ಹಂತವಾಗಿ ಶೇ.15 ಒಳಗೆ ತರಲಾಗುವುದು ಎಂದು ತಿಳಿಸಿದರು.

ನಿರ್ದೇಶಕರಾದ ಶ್ರೀ ಎ.ವೆಂಕಟೇಶಯ್ಯ ಶೆಟ್ಟಿ ರವರು ಮಂಡಿಸಿದ 2022–2023 ನೇ ಸಾಲಿನ ಪರಿಶೋಧಿತ ಲೆಕ್ಕಪತ್ರಗಳ ಪರಿಶೀಲನೆ ಮತ್ತು ಆಡಳಿತ ಮಂಡಳಿಯ ಅನುಪಾಲನಾ ವರದಿ ಅಂಗೀಕಾರವನ್ನು ಸದಸ್ಯರಾದ ಶ್ರೀ .ಪಿ.ಎಸ್.ಆದಿನಾರಾಯಣ ಪ್ರಸಾದ್ ಸದಸ್ಯತ್ವ ಸಂಖ್ಯೆ: 5199 ರವರು ಒಪ್ಪಿಗೆಗಾಗಿ ಸೂಚಿಸಿದ ವರದಿಯನ್ನು ಸದಸ್ಯರಾದ ಶ್ರೀ ಬಿ.ಆರ್.ಸತ್ಯಕುಮಾರ್ ಸದಸ್ಯತ್ವ ಸಂಖ್ಯೆ: 3675 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯು ಸರ್ವಾನುಮತ ದಿಂದ ಅಂಗೀಕಾರ ನೀಡಿತು.

**10. 2023–2024 ನೇ ಸಾಲಿನ ಅಂದಾಜು ಆಯವ್ಯಯ ಮಂಡನೆ ಹಾಗೂ 2022–2023 ನೇ ಸಾಲಿನ ಹೆಚ್ಚುವರಿ ವೆಚ್ಚದ ಮಂಡನೆ ಅನುಮೋದನೆ :**

ನಿರ್ದೇಶಕರಾದ ಶ್ರೀ ಎನ್.ಜಿ.ಶ್ರೀನಿವಾಸ್ ರವರು ಸಭೆಯ ಮುಂದೆ 2023–2024ನೇ ಸಾಲಿನ ಅಂದಾಜು ಆಯವ್ಯಯ ಮಂಡನೆ ಮಂಜೂರಾತಿ ಮತ್ತು 2022–2023ನೇ ಸಾಲಿನಲ್ಲಿ ಸಂಭವಿಸಿದ ಹೆಚ್ಚುವರಿ ವೆಚ್ಚದ ವಿವರವನ್ನು ಮಂಡಿಸಿ, ಸಭೆಯ ಅಂಗೀಕಾರ ಕೋರಿದರು.

| ಕ್ರ. ಸಂ. | ವೆಚ್ಚ ಬಾಬ್ತು ವಿವರ | 2022-2023ಕ್ಕೆ ಅಂದಾಜು | 2022-2023ಕ್ಕೆ ಆದ ವೆಚ್ಚ | 2023-2024ಕ್ಕೆ ಅಂದಾಜು |
|---|---|---|---|---|
| 1 | ಠೇವಣಿಗಳ ಮೇಲೆ ಬಡ್ಡಿ | 14,00,00,000.00 | 10,11,76,762.00 | 14,00,00,000.00 |
| 2 | ಸಿಬ್ಬಂದಿವೇತನ, ಭವಿಷ್ಯ ನಿಧಿ ಮತ್ತು ಇತರೆ ಭತ್ಯೆಗಳು | 1,85,00,000.00 | 1,75,75,525.00 | 1,85,00,000.00 |
| 3 | ಬಾಡಿಗೆ, ಜಲ, ವಿದ್ಯುತ್ ವಿಮೆ, ತೆರಿಗೆ ಬಾಬ್ತು | 35,00,000.00 | 34,44,307.95 | 35,00,000.00 |
| 4 | ಮುದ್ರಣ ಲೇಖನಸಾಮಗ್ರಿ | 4,00,000.00 | 3,38,065.85 | 4,00,000.00 |
| 5 | ಅಂಚೆ ತಂತಿ, ದೂರವಾಣಿ | 2,00,000.00 | 1.46,785.58 | 2,00,000.00 |
| 6 | ಸವಕಳಿ ಮತ್ತು ಆಸ್ತಿ ದುರಸ್ತಿ ವೆಚ್ಚ | 20,00,000.00 | 19,69,000.77 | 20,00,000.00 |
| 7 | ಕಲ್ಪವೃಕ್ಷ ಠೇವಣಿ ಸಂಗ್ರಹಕಾರರ ದಳ್ಳಾಳಿ | 40,00,000.00 | 41,65,148.00 | 42,00,000.00 |
| 8 | ವಾರ್ಷಿಕ ಮಹಾಸಭೆಯ ವೆಚ್ಚ | 10,00,000.00 | 7,71,074.00 | 10,00,000.00 |
| 9 | ಸಿಬ್ಬಂದಿ ತರಭೇತಿ ಖರ್ಚು | 1,00,000.00 | 5,400.00 | 1,00,000.00 |
| 10 | ಆಡಿಟ್/ ನಿರಂತರ ಲೆಕ್ಕ ತಪಾಸಣ ಶುಲ್ಕ | 6,00,000.00 | 8,59,905.00 | 10,00,000.00 |
| 11 | ಕೋರ್ಟ್ ಕಛೇರಿ ವೆಚ್ಚ | 1,00,000.00 | 68,087.50 | 1,00,000.00 |
| 12 | ಹೂಡಿಕೆಗಳ ಮಾರಾಟದ ದಲ್ಲಾಳಿ ವೆಚ್ಚ | 5,000.00 | 0 | 5,000.00 |
| 13 | ಜಿ.ಸೆಕ್ ಅಮರ್ಟೈಸೇಸನ್ | 10,000.00 | 9,170.00 | 10,000.00 |
| 14 | ಸಿಬ್ಬಂದಿ ಗ್ರ್ಯಾಚ್ಯುಟಿ | 5,50,000.00 | 44,86,790.50 | 5,00,000.00 |
| 15 | ವರಮಾನ ತೆರಿಗೆ | 75,00,000.00 | 95,00,000.00 | 1,00,00,000.00 |
| 16 | ಆದಾಯ ತೆರಿಗೆ ಪರಿಶೀಲಿಸಿದ್ದು | 50,000.00 | 0 | 50,000.00 |
| 17 | ಸ್ವಯಂ ಮೌಲ್ಯಮಾಪನ ತೆರಿಗೆ 2022-23 | 0 | 10,00,000.00 | 0.00 |
| 18 | ಜಿ.ಎಸ್.ಟಿ ವೆಚ್ಚ | 0 | 14,40,302.91 | 0.00 |
| 19 | ಸಾದಿಲ್ವಾರು ಖರ್ಚುಗಳು | | | |
| | 1.ಭದ್ರತಾ ಕಾವಲುಗಾರರ ವೆಚ್ಚ | 6,00,000.00 | 5,91,000.00 | 6,00,000.00 |
| | 2.ಸಾರಿಗೆ ವೆಚ್ಚ (ಕನ್‌ವೆಯನ್ಸ್) | 3,00,000.00 | 3,03,355.00 | 3,50,000.00 |
| | 3.ಸಾಮಾನ್ಯಖರ್ಚು (ಪೂಜೆ, ಹೂ, ಕ್ಲೀನಿಂಗ್ ಇತರೆ) | 4,00,000.00 | 1,96,824.50 | 3,00,000.00 |
| | 4.ಸಿಬ್ಬಂದಿ ಕಲ್ಯಾಣ ವೆಚ್ಚ | 6,00,000.00 | 5,80,382.00 | 6,00,000.00 |
| | 5.ದಿನಪತ್ರಿಕೆ /ಮ್ಯಾಗ್ಜಿನ್ ಖರ್ಚು | 15,000.00 | 9,619.00 | 15,000.00 |
| | 6.ಮಾಸಿಕ ಸಭೆಗಳ ಖರ್ಚು | 60,000.00 | 40,523.00 | 60,000.00 |
| | 7.ಗಣಕಯಂತ್ರ ನಿರ್ವಹಣಾ ವೆಚ್ಚ | 5,00,000.00 | 4,11,441.72 | 5,00,000.00 |
| | 8.ಸಾಫ್ಟ್‌ವೇರ್ ನಿರ್ವಹಣಾ ವೆಚ್ಚ | 25,000.00 | 0.00 | 25,000.00 |

| | | | | |
|---|---|---|---|---|
| | 9.ಮಹಾಮಂಡಳದ ವಂತಿಗೆ | 50,000.00 | 43,600.00 | 50,000.00 |
| | 10.ಜಾಹಿರಾತು/ಪ್ರಚಾರ ವೆಚ್ಚ | 1,00,000.00 | 30,000.00 | 1,00,000.00 |
| | 11.ಪೆಟ್ರೋಲ್ ಅಂಡ್ ಆಯಿಲ್ ವೆಚ್ಚ | 25,000.00 | 10,000.00 | 25,000.00 |
| | 12.ಕ್ಲಿಯರಿಂಗ್ ನಿರ್ವಹಣಾವೆಚ್ಚ/ಡಿಲೇ ಫೀ | 25,000.00 | 0.00 | 25,000.00 |
| | 13.ರಿಪೇರಿ ಮತ್ತು ದುರಸ್ತಿ | 4,00,000.00 | 90,981.20 | 2,00,000.00 |
| | 14. UPS. & ಕೌಂಟಿಂಗ್ ಮಿಷನ್ ಎ.ಎಂ.ಸಿ | 50,000.00 | 16,855.00 | 50,000.00 |
| 20 | ಕಂಪ್ಯೂಟರ್ ಸ್ಟೇಷನರಿ | 50,000.00 | 21,444.00 | 50,000.00 |
| 21 | ಕರಡು & ಅನುಮಾನಾಸ್ಪದ ಸಾಲ ಮನ್ನಾ | 30,00,000.00 | 0 | 30,00,000.00 |
| 22 | ಉತ್ಪಾದಕ ಸಾಲದ ಮೇಲೆ ಅವಕಾಶ | 10,00,000.00 | 0 | 10,00,000.00 |
| 23 | ಸಿಬಿಲ್ ರಿಪೋರ್ಟ್ | 25,000.00 | 16,350.00 | 25,000.00 |
| 24 | ಬೋನಸ್/ಎಕ್ಸ್ ಗ್ರೇಶಿಯಾ | 3,50,000.00 | 2,65,000.00 | 3,50,000.00 |
| 25 | ಎ.ಟಿ.ಎಂ. ಸ್ವಿಚ್ ಇಂಟಿಗ್ರೇಷನ್ ವೆಚ್ಚ | 2,50,000.00 | 2,48,520.00 | 2,50,000.00 |
| 26 | ಎನ್.ಪಿ.ಸಿ.ಐ. ವೆಚ್ಚ | 5000.00 | 4,185.66 | 5000.00 |
| 27 | ಎ.ಟಿ.ಎಂ. ಇಸ್ಯುರ್ ಟ್ರಾನ್ಜಾಕ್ಷನ್ ವೆಚ್ಚ | 1,00,000.00 | 68,315.96 | 1,00,000.00 |
| 28 | ವೃತ್ತಿಪರರ ಶುಲ್ಕ | 1,00,000.00 | 63,850.00 | 1,00,000.00 |
| 29 | ಸರ್‌ಸಾಯಿ ನೊಂದಣಿ ವೆಚ್ಚ | 10,000.00 | 0.00 | 10,000.00 |
| 30 | ಲೀಗಲ್ ಎನ್‌ಟಿಟಿ ಐಡೆಂಟ್‌ಟಿ ವೆಚ್ಚ (LEI) | 10,000.00 | 3,540.00 | 10,000.00 |
| 31 | ಸಮವಸ್ತ್ರ ವೆಚ್ಚ | 50,000.00 | 56,830.00 | 75,000.00 |
| 32 | ಹೂಡಿಕೆಗಳ ಸವಕಳಿಗೆ ಕಾಯ್ದಿರಿಸಿದ್ದು | 10,00,000.00 | 25,00,000.00 | 25,00,000.00 |
| 33 | ಎನ್.ಪಿ.ಎ. ಪ್ರಾವಿಷನ್ | 0.00 | 1,47,18,383.00 | 0.00 |
| 34 | ಸಿ.ಕೆ.ವೈ.ಸಿ ವೆಚ್ಚ | 0 | 10,900.00 | 15,000.00 |
| 35 | ಕಛೇರಿ ಸ್ವಚ್ಛ/ಪರಿಕರಗಳ ವೆಚ್ಚ | 0 | 87,932.00 | 1,00,000.00 |
| 36 | ಇತರೆ ವೆಚ್ಚ (ಕಟ್ಟಡ) | 0 | 2,35,000.00 | 0 |
| 37 | ಇತರೆ ಬ್ಯಾಂಕುಗಳ ವೆಚ್ಚ | 0.00 | 3,99,325.59 | 5,00,000.00 |
| | ಮೊತ್ತ: | 18,76,15,000.00 | 16,79,80,482.69 | 19,25,55,000.00 |
| | **ಆದಾಯ ವಿವರ** | | | |
| 1 | ಸಾಲ ಹಾಗೂ ಮುಂಗಡಗಳ ಮೇಲಿನ ಬಡ್ಡಿ | 14,00,00,000.00 | 12,36,29,589.39 | 14,00,00,000.00 |
| 2 | ಹೂಡಿಕೆಗಳಿಂದ ಬಡ್ಡಿ | 5,00,00,000.00 | 3,82,98,114.40 | 5,00,00,000.00 |
| 3 | ಸೇವಾ ಶುಲ್ಕ | 75,00,000.00 | 42,42,624.34 | 75,00,000.00 |
| 4 | ಕಮಿಷನ್ ಮತ್ತು ಇತರೆ ಆದಾಯ | 50,00,000.00 | 1,22,42,570.21 | 1,00,00,000.00 |
| 5 | ಹೂಡಿಕೆಗಳ ಮಾರಾಟದಿಂದ ಲಾಭ (ಡಿವಿಡೆಂಡ್) | 50,00,000.00 | 2,79,900.00 | 20,00,000.00 |
| | ಮೊತ್ತ: | 20,75,00,000.00 | 17,86,92,798.34 | 20,95,00,000.00 |

2022–2023ನೇ ಸಾಲಿನಲ್ಲಿನ ಅಧಿಕ ವೆಚ್ಚ, ಕಲ್ಪವೃಕ್ಷ ಠೇವಣಿ ಸಂಗ್ರಹಕಾರರ ದಳ್ಳಾಳಿ ರೂ.1,65,148.00, ಆಡಿಟ್/ ನಿರಂತರ ಲೆಕ್ಕ ತಪಾಸಣ ಶುಲ್ಕ ರೂ.2,59,905.00, ಸಿಬ್ಬಂದಿ ಗ್ರ್ಯಾಚುಯಿಟಿ ರೂ.39,36,790.50, ವರಮಾನ ತೆರಿಗೆ ರೂ.15,00,000.00, ಸಾರಿಗೆ ವೆಚ್ಚ (ಕನ್‌ವೆಯನ್ಸ್) ರೂ.3,355.00, ಸಮವಸ್ತ್ರ ವೆಚ್ಚ ರೂ.6,830.00 ಹಾಗೂ ಹೂಡಿಕೆಗಳ ಸವಕಳಿಗೆ ಕಾಯ್ದಿರಿಸಿದ್ದು ರೂ. 15,00,000.00 ಈ ಲೆಕ್ಕ ಶೀರ್ಷಿಕೆಗಳಲ್ಲಿ ಅಂದಾಜಿಗಿಂತ ಹೆಚ್ಚುವರಿಯಾಗಿ ಖರ್ಚಾಗಿರುವುದಕ್ಕೆ ಕಾರಣ ನೀಡಿದರು ಹಾಗೂ ಸದರಿ ಸಾಲಿನಲ್ಲಿ ಸಿಬ್ಬಂದಿಗಳ ಹಿತದೃಷ್ಟಿಯಿಂದ ಸಿಬ್ಬಂದಿ ಗ್ರ್ಯಾಚುಯಿಟಿಯ ನಿಧಿಗೆ 40 ಲಕ್ಷ ರೂ. ಹೆಚ್ಚುವರಿಯಾಗಿ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಸ್ವಯಂ ಮೌಲ್ಯಮಾಪನ ತೆರಿಗೆ 2022–23 ರೂ.10,00,000.00, ಜಿ.ಎಸ್.ಟಿ ವೆಚ್ಚ ರೂ. 14,40,302.91, ಎನ್.ಪಿ.ಎ. ಪ್ರಾವಿಷನ್ ರೂ. 1,47,18,383.00, ಸಿ.ಕೆ.ವೈ.ಸಿ ವೆಚ್ಚ ರೂ.10,900.00, ಕಛೇರಿ ಸ್ವಚ್ಛ/ಪರಿಕರಗಳ ವೆಚ್ಚ ರೂ.87,932.00 ಇತರೆ ವೆಚ್ಚ (ಕಟ್ಟಡ) ರೂ.2,35,000.00 ಹಾಗೂ ಇತರೆ ಬ್ಯಾಂಕುಗಳ ವೆಚ್ಚ 3,99,325.59 ಈ ಲೆಕ್ಕ ಶೀರ್ಷಿಕೆಗಳಿಗೆ 2022–23ನೇ ಸಾಲಿನ ಆಯವ್ಯಯ ಮಂಡನೆಯಲ್ಲಿ ಅವಕಾಶ ಕಲ್ಪಿಸಿರಲಿಲ್ಲ ಆದರೂ ಒಟ್ಟಾರೆ ಅಂದಾಜಿಗಿಂತ ರೂ.1,96,34,517.31 ಕಡಿಮೆ ವೆಚ್ಚವಾಗಿರುತ್ತದೆ. ಹೆಚ್ಚುವರಿ ವೆಚ್ಚಕ್ಕೆ ಘಟನೋತ್ತರ ಅಂಗೀಕಾರಕ್ಕಾಗಿ ಸಭೆಯ ಮುಂದೆ ಮಂಡಿಸಿ ಸಭೆಯ ಅಂಗೀಕಾರ ಕೋರಿದರು.

ನಿರ್ದೇಶಕರಾದ ಶ್ರೀ ಎನ್.ಜಿ.ಶ್ರೀನಿವಾಸ್ ರವರು ಮಂಡಿಸಿದ ಅಂದಾಜು ವೆಚ್ಚ ಪಟ್ಟಿಯನ್ನು ಮತ್ತು ಹಿಂದಿನ ಅವಧಿಯಲ್ಲಿ ಖರ್ಚಾಗಿರುವ ಹೆಚ್ಚುವರಿ ವೆಚ್ಚದ ಬಗ್ಗೆ ಪೂರ್ಣ ಮಾಹಿತಿಯನ್ನು ಪಡೆದುಕೊಂಡ ನಂತರ ಸದಸ್ಯರಾದ ಶ್ರೀ ಆರ್. ಉಮಾಶಂಕರ್, ಸದಸ್ಯತ್ವ ಸಂಖ್ಯೆ: 3419 ರವರು ಒಪ್ಪಿಗೆಗಾಗಿ ಸೂಚಿಸಿದ ವರದಿಯನ್ನು ಸದಸ್ಯರಾದ ಗೋಪಿನಾಥ್ ಸದಸ್ಯತ್ವ ಸಂಖ್ಯೆ: 4716 ಹಾಗೂ ಶ್ರೀ ಆರ್.ಬಾಬು, ಸದಸ್ಯತ್ವ ಸಂಖ್ಯೆ: 2766 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

## 11. 2022–2023ನೇ ಸಾಲಿನ ನಿವ್ವಳ ಲಾಭ ವಿಂಗಡಣೆ ಹಾಗೂ ವಿತರಣೆ

2022–2023ನೇ ಸಾಲಿನ ನಿವ್ವಳ ಲಾಭ ವಿಂಗಡಣೆ ಹಾಗೂ ವಿತರಣೆಯನ್ನು ಉಪಾಧ್ಯಕ್ಷರಾದ ಶ್ರೀ ಆರ್.ಪಿ.ರವಿಶಂಕರ್ ರವರು ಸಭೆಯ ಮುಂದೆ ಈ ಕೆಳಕಂಡಂತೆ ಮಂಡಿಸಿದರು.

| ಕ್ರ.ಸ. | ನಿಧಿಗಳ ವಿವರ | 31–03–2023ಕ್ಕೆ |
|---|---|---|
| 1 | ಶಾಸನಬದ್ದ  ಆಪದ್ಧನ ನಿಧಿ ಶೇ.25 ರಂತೆ | 26,93,200.00 |
| 2 | ಸಹಕಾರ ಶಿಕ್ಷಣ ನಿಧಿ ಶೇ.2 ರಂತೆ | 1,60,382.31 |
| 3 | ಸಹಕಾರ ಅಭಿವೃದ್ಧಿ ನಿಧಿ ಶೇ.1 ರಂತೆ | 80,191.16 |
| 4 | ಸದಸ್ಯರ ಮರಣೋತ್ತರ ಪರಿಹಾರ ನಿಧಿ (ಶೇ.5ಕ್ಕೆ ಮೀರದಂತೆ) | 1,59,500.00 |
| 5 | ಸದಸ್ಯರ ವಿದ್ಯಾ ನಿಧಿ (ಶೇ.10ಕ್ಕೆ ಮೀರದಂತೆ) | 3,11,693.48 |
| 6 | ಸಿಬ್ಬಂದಿ ವಿದ್ಯಾ ನಿಧಿ | 1,75,000.00 |
| 7 | ಲಾಭಾಂಶ ಸಮತೋಲನ ನಿಧಿ | 57,511.24 |
| 8 | ಜಾಹಿರಾತು ನಿಧಿ | 76,704.56 |
| 9 | ಮಹೋತ್ಸವ ನಿಧಿ | 13,227.35 |
| 10 | ಸಿಬ್ಬಂದಿ ಕ್ಷೇಮ ನಿಧಿ | 39,822.00 |
| 11 | ಧಾನ ಧರ್ಮ ವಂತಿಗೆ ನಿಧಿ (ಶೇ.10 ಕ್ಕೆ ಮೀರದಂತೆ) | 24,201.00 |
| 12 | ಹೂಡಿಕೆಗಳ, ಸವಕಳಿ ಕಾಯ್ದಿರಿಸಿದ ನಿಧಿ | 13,99,439.00 |
| 13 | ಹೂಡಿಕೆಗಳ ಏರಿಳಿತಕ್ಕೆ ಕಾಯ್ದಿರಿಸಿದ ನಿಧಿ | 4,85,652.43 |
| 14 | ವ್ಯಾಪಾರ ಅಭಿವೃದ್ಧಿ ನಿಧಿ | 3,00,000.00 |
| 15 | ಸಿಬ್ಬಂದಿ ಗ್ರಾಚ್ಯುಯಿಟಿ ನಿಧಿ | 48,379.12 |
| 16 | ಕಟ್ಟಡ ನಿಧಿ | 1,37,412.00 |
| 17 | ಲಾಭಾಂಶ(ಡಿವಿಡೆಂಡ್) ಶೇ.10% | 45,50,000.00 |
| | **ಒಟ್ಟು** | **1,07,12,315.65** |

ಉಪಾಧ್ಯಕ್ಷರಾದ ಶ್ರೀ ಆರ್.ಪಿ.ರವಿಶಂಕರ್ ರವರು 2022–23ನೇ ಸಾಲಿನ ನಿವ್ವಳ ಲಾಭ ವಿಂಗಡಣೆ ಹಾಗೂ ವಿತರಣೆಯನ್ನು ಮಂಡಿಸಿ ಮಾತನಾಡಿ ಸದಸ್ಯರಿಗೆ ಆರ್.ಬಿ.ಐ. ನಿರ್ದೇಶನದಂತೆ ಶೇ.10 ರಷ್ಟು ಲಾಭಾಂಶವನ್ನು ವಿತರಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಮುಂದುವರಿದು ಮಾತನಾಡಿ 100 ಕೋಟಿ ಸಾಲದಲ್ಲಿ 1.63 ಕೋಟಿ ಮಾತ್ರ ಸದಸ್ಯರು ಸಾಲ ಪಡೆದಿದ್ದು, ಇದರಿಂದಾಗಿ ಸಹಸದಸ್ಯರ ಶೇಕಡವಾರು ಪ್ರಮಾಣ ಹೆಚ್ಚಾಗಿದೆ, ಸದಸ್ಯರು ಜಿ.ಬಿ.ಎಮ್.ಗೆ ಬರೋದು ಮಾತ್ರವಲ್ಲ ಬ್ಯಾಂಕಿನ ಅಭಿವೃದ್ದಿಗೆ ಭಾಗಿಯಾಗಬೇಕು ಎಂದು ಸದಸ್ಯರಲ್ಲಿ ವಿನಂತಿಸಿದರು.

ಉಪಾಧ್ಯಕ್ಷರಾದ ಶ್ರೀ ಆರ್.ಪಿ.ರವಿಶಂಕರ್ ರವರು ಮಂಡಿಸಿದ ನಿವ್ವಳ ಲಾಭ ವಿಂಗಡಣೆಯನ್ನು ಸದಸ್ಯರಾದ ಶ್ರೀ ಟಿ.ಎಲ್.ಕೃಷಮೂರ್ತಿ ಸದಸ್ಯತ್ವ ಸಂಖ್ಯೆ: 3398 ಅವರು ಒಪ್ಪಿಗೆಗಾಗಿ ಸೂಚಿಸಿದ್ದನ್ನು ಸದಸ್ಯರಾದ ಶ್ರೀ ಹೆಚ್.ವಿಜಯಕುಮಾರ್ ಸದಸ್ಯತ್ವ ಸಂಖ್ಯೆ: 3746 ಹಾಗೂ ಶ್ರೀ ಎಂ.ಎನ್. ಸೇತುಮಾದವ ಮೂರ್ತಿ, ಸದಸ್ಯತ್ವ ಸಂಖ್ಯೆ: 5099 ರವರು ಅನುಮೋದನೆ ಮಾಡುವುದರ ಮೂಲಕ ಸಭೆಯು ಸರ್ವಾನುಮತದಿಂದ ಅಂಗೀಕಾರ ನೀಡಿತು.

**12. ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು:**

**13. ವಂದನಾರ್ಪಣೆ:–**

ಬ್ಯಾಂಕಿನ ನಿರ್ದೇಶಕರಾದ ಶ್ರೀಮತಿ ಸಿ.ಪಿ.ವಿಜಯ ರವರು ವಂದನಾರ್ಪಣೆ ಮಾಡುತ್ತಾ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಹಾಗೂ ಪ್ರಗತಿಗೆ ಸರ್ವ ರೀತಿಯಲ್ಲಿ ಸದಾ ಸಹಕಾರ ಮತ್ತು ಬೆಂಬಲವನ್ನು ನೀಡುತ್ತಾ ಬಂದಿರುವ ಎಲ್ಲಾ ಸದಸ್ಯ ಬಾಂಧವರಿಗೆ ಠೇವಣಿದಾರರಿಗೆ ಮತ್ತು ಎಲ್ಲಾ ಗ್ರಾಹಕರಿಗೆ ಆಡಳಿತ ಮಂಡಳಿಯು ಅತ್ಯಂತ ಸಂತೋಷದಿಂದ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತದೆ.

ಬ್ಯಾಂಕಿನ ಪ್ರಗತಿಗೆ ಸದಾ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಹಕಾರ ಇಲಾಖೆ, ಹಾಗೂ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಇವುಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು. ನಮ್ಮೊಂದಿಗೆ ದಿನನಿತ್ಯದ ವ್ಯವಹಾರದಲ್ಲಿ ಸಹಕರಿಸಿದ ಅಪೆಕ್ಸ್ ಬ್ಯಾಂಕ್, ಬಿ.ಡಿ.ಸಿ.ಸಿ.ಬ್ಯಾಂಕ್, ಹೆಚ್.ಡಿ.ಎಫ್.ಸಿ.ಬ್ಯಾಂಕ್, ಐ.ಸಿ.ಐ.ಸಿ.ಐ.ಬ್ಯಾಂಕ್, ಕೊಟಕ್ ಮಹೇಂದ್ರ ಬ್ಯಾಂಕ್, ಇಂಡ್ ಸಿಂದ್ ಬ್ಯಾಂಕ್, ಐ.ಡಿ.ಬಿ.ಐ.ಬ್ಯಾಂಕ್, ಯಸ್ ಬ್ಯಾಂಕ್, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಇಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್. ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವುಗಳ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಆಡಳಿತ ಮಂಡಳಿಯು ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಬ್ಯಾಂಕಿನ ವ್ಯವಹಾರಗಳಲ್ಲಿ, ಅಂದರೆ, ಸಾಲವಸೂಲಿ, ಠೇವಣಿಸಂಗ್ರಹ, ಲಾಭಗಳಿಕೆ ಮುಂತಾಗಿ ಬ್ಯಾಂಕಿನ ಸರ್ವಾಂಗೀಣ ಚಟುವಟಿಕೆಗಳಿಗೆ ಸಹಕಾರ ನೀಡಿದ ಗ್ರಾಹಕರು, ಸದಸ್ಯರು, ಠೇವಣಿದಾರರು ಹಾಗೂ

ದಿನನಿತ್ಯದ ವ್ಯಾಪಾರ ವಹಿವಾಟು, ಗ್ರಾಹಕರ ಸೇವೆ, ಕಂಪ್ಯೂಟರೀಕರಣದಲ್ಲಿ ಪರಿಶ್ರಮ ಆಸಕ್ತಿಗಳಿಂದ ಸಹಕರಿಸುತ್ತಾ ಬಂದಿರುವ ಬ್ಯಾಂಕಿನ ಎಲ್ಲಾ ಸಿಬ್ಬಂದಿಯವರಿಗೆ ಧನ್ಯವಾದಗಳನ್ನು ಸಲ್ಲಿಸಿದರು.

ಹಾಗೂ ಕಾನೂನು ಸಲಹೆಗಾರರಾದ ಶ್ರೀ ಎನ್.ಎಸ್. ಸತ್ಯನಾರಾಯಣ ಗುಪ್ತ, ಶ್ರೀ ಹೆಚ್.ವಿ.ಶಿವಕುಮಾರ್, ಶ್ರೀ ಎಸ್.ಎನ್.ರಾಮಪ್ರಸಾದ್, ಶ್ರೀ ಅನಂತಕುಮಾರ್ ಹಾಗೂ ಶ್ರೀ ಶಶಿಕಾಂತ್ ಎಲ್.ಆರ್. ಮತ್ತು ಆಸ್ತಿ ಮೌಲ್ಯಮಾಪಕರಾದ ಶ್ರೀ ಕೆ.ಆರ್. ರಮೇಶ್ ಹಾಗೂ ಶ್ರೀ ಎಲ್. ಗುರುಪ್ರಸಾದ್ ಹಾಗೂ ಆಂತರಿಕ ಲೆಕ್ಕಪರಿಶೋದಕರಾದ ಐ.ವಿ.ಎಸ್.ವಿ.ಬಿ ಪಾಂಚಜನ್ಯಮ್ ಇವರೆಲ್ಲರಿಗೂ ನಮ್ಮ ವಂದನೆಗಳು. ಬ್ಯಾಂಕಿನ ಕಂಪ್ಯೂಟರೀಕರಣ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪಕ್ಕೆ ತರುವಲ್ಲಿ ಸಹಕರಿಸಿದ ವೀರಮತಿ ಸಾಫ್ಟ್‌ವೇರ್ ಹಾಗೂ ಲೀನಾಸ್ ಇನ್ಫೋಟೆಕ್ ಹಾರ್ಡವೇರ್ ಸಂಸ್ಥೆಗಳ ಸಿಬ್ಬಂದಿವರ್ಗದವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ, ಹಾಗೂ ನ್ಯೂಕ್ಲಿಯಸ್ ಸಿಸ್ಟಮ್ ಸೆಕ್ಯುರಿಟಿ ಕನ್ಸಲ್ಟೆಂಟ್ಸ್ ಪ್ರೈವೇಟ್ ಲಿಮಿಟೆಡ್, ಹುಬ್ಬಳ್ಳಿ, ಇವರು ಆಂತರಿಕ ಸಿಸ್ಟಮ್ ಆಡಿಟ್ ನಡೆಸಿದ್ದು ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ಹಾಗೂ ಶ್ರೀ ಟಿ.ಎಲ್. ಗಿರೀಶ, ಚಾರ್ಟರ್ಡ್ ಅಕೌಂಟೆಂಟ್, ಇವರು ನಮ್ಮ ಬ್ಯಾಂಕಿನ 2022–2023ನೇ ಸಾಲಿನ ಲೆಕ್ಕಪರಿಶೋಧನೆಯನ್ನು ನಡೆಸಿದ್ದು, ಸಮಯೋಚಿತ ಸಲಹೆಗಳನ್ನಿತ್ತಿದ್ದಾರೆ ಇವರಿಗೆ ಆಡಳಿತ ಮಂಡಳಿಯು ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸಿದರು.

ಕೊನೆಯದಾಗಿ ಬ್ಯಾಂಕಿನ ಮೇಲೆ ಪ್ರೀತಿ, ವಿಶ್ವಾಸ ಮತ್ತು ಅಭಿಮಾನವಿಟ್ಟು ವ್ಯವಹರಿಸುತ್ತಿರುವ ಬ್ಯಾಂಕಿನ ಪ್ರಗತಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸುತ್ತಿರುವ ಎಲ್ಲಾ ಸದಸ್ಯರಿಗೂ, ಠೇವಣಿದಾರರಿಗೂ, ಹಾಗೂ ಈ ದಿನದ ಸರ್ವ ಸದಸ್ಯರ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ ಎಲ್ಲಾ ಸದಸ್ಯ ಬಂಧುಗಳಿಗೆ ಆಡಳಿತ ಮಂಡಳಿಯ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಿದರು.

ಹಾಗೂ ಸದಸ್ಯರಿಗೆ ಬೋಜನದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲರೂ ಬೋಜನ ಸ್ವೀಕರಿಸಲು ಕೋರಿದರು. **"ಜೈ ಹಿಂದ್ ಜೈ ಕರ್ನಾಟಕ"** ಘೋಷಣೆಯೊಂದಿಗೆ ಈ ದಿನದ ಸಭಾ ಕಾರ್ಯಕ್ರಮ ಮುಕ್ತಾಯವಾಯಿತು.

ಸ್ಥಳ: ಬೆಂಗಳೂರು

ದಿ: 18.09.2023

**ಸಹಿ/–**

**ಆಡಳಿತ ಮಂಡಳಿಯ ಪರವಾಗಿ**

**ಎನ್. ಎಸ್. ಶ್ರೀನಿವಾಸಮೂರ್ತಿ**

**ಅಧ್ಯಕ್ಷರು**

# ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿ.,

ನಂ. 6, ಆಸ್ಪತ್ರೆ ರಸ್ತೆ, ಬೆಂಗಳೂರು-560 053. ಟೆಲಿಫೋನ್ : 22253389, 22268535
E-mail : info@mscmbank.in Website : www.mscmbank.in

## 2023-2024ನೇ ಸಾಲಿನ ನಿರ್ದೇಶಕ ಮಂಡಳಿಯ ಆಡಳಿತ ವರದಿ

**ಸನ್ಮಾನ್ಯ ಸದಸ್ಯ ಬಂದುಗಳೇ,**

ಪ್ರಪ್ರಥಮವಾಗಿ ದೇವಿ ವಾಸವಿ ಕನ್ಯಕಾಪರಮೇಶ್ವರಿ ಅಮ್ಮನವರಿಗೆ ನಮಸ್ಕರಿಸುತ್ತಾ, ಬ್ಯಾಂಕಿನ ಸಂಸ್ಥಾಪಕರುಗಳನ್ನು ಸ್ಮರಿಸುತ್ತಾ, ವಾಸವಿ ಎಂಎಸ್‌ಸಿಎಂ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಎಂಬ ಹೆಸರಿನೊಂದಿಗೆ ಇಂದು ಪ್ರಥಮವಾಗಿ ಆಚರಿಸಿಕೊಳ್ಳುತ್ತಿರುವ 2023-2024ನೇ ಸಾಲಿನ 57ನೇ ವಾರ್ಷಿಕ ಮಹಾಸಭೆಗೆ ಬ್ಯಾಂಕಿನ ಸರ್ವ ಸದಸ್ಯರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇಂದಿನ ಮಹಾಸಭೆಯಲ್ಲಿ ಬ್ಯಾಂಕಿನ 2023-24ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯೊಂದಿಗೆ 2024-25ನೇ ಸಾಲಿಗೆ ಕಾರ್ಯಯೋಜನೆ ಲೆಕ್ಕ ಪರಿಶೋಧಕರಿಂದ ಪರಿಶೋಧಿಸಲ್ಪಟ್ಟ 2023-24ನೇ ಸಾಲಿನ ಆರ್ಥಿಕ ಲೆಕ್ಕಪತ್ರಗಳನ್ನು, ಲೆಕ್ಕ ಪರಿಶೋಧಕರು ನೀಡಿದ ವರದಿಯನ್ನು, 2024-25ನೇ ಸಾಲಿಗಾಗಿ ಮುಂಗಡ ಪತ್ರ ಮಂಡನೆ, 2023-24ನೇ ಸಾಲಿನಾಂತ್ಯದ ನಿವ್ವಳ ಲಾಭ ವಿಂಗಡನೆ, ವಿಲೇವಾರಿ ಮತ್ತು ಸದಸ್ಯರು ಬ್ಯಾಂಕಿನಲ್ಲಿ ಹೂಡಿದ ಷೇರು ಬಂಡವಾಳದ ಮೇಲೆ ನೀಡಬಹುದಾದ ಲಾಭಾಂಶವನ್ನು (ಡಿವಿಡೆಂಡ್) ಘೋಷಿಸುವ ಪ್ರಸ್ತಾವನೆಯನ್ನು ಮತ್ತು ಇತರೆ ಮಹತ್ತರ ವಿಷಯಗಳನ್ನು ಸದಸ್ಯರ ಒಪ್ಪಿಗೆಗಾಗಿ ಮಹಾ ಸಭೆಯಲ್ಲಿ ಮಂಡಿಸಲಾಗುತ್ತಿದೆ. ಸನ್ಮಾನ್ಯ ಸದಸ್ಯರೆಲ್ಲರೂ ಅವುಗಳನ್ನು ಪರಿಶೀಲಿಸಿ, ತಮ್ಮ ಅಮೂಲ್ಯ ಸಲಹೆಗಳೊಂದಿಗೆ ಮಂಜೂರಾತಿ ನೀಡಬೇಕಾಗಿ ಸವಿನಯ ಪ್ರಾರ್ಥನೆ.

**ರಾಷ್ಟ್ರ ಆರ್ಥಿಕ ಪ್ರಗತಿಯ ಕಿರುನೋಟ**

ಇಂದು ರಾಷ್ಟ್ರದ ಆರ್ಥಿಕ ಪ್ರಗತಿಯು ಸರ್ವತೋಮುಖವಾಗಿ ಬೆಳೆಯುತ್ತಿದೆ ಪ್ರಕಾಶಮಾನವಾಗಿ ಕಂಗೊಳಿಸುತ್ತಿದೆ. ಮೇಕ್ ಇನ್ ಇಂಡಿಯಾ ಅಭಿಯಾನವು ಉತ್ಪಾದನೆಯನ್ನು ಹೆಚ್ಚಿಸುತ್ತಿದೆ. ಇಂದು ಭಾರತ ತಯಾರಿಸುತ್ತಿರುವ ಸೈಕಲ್‌ಗಳಿಗೆ ಇಂಗ್ಲೆಂಡ್, ಜರ್ಮನಿ, ನೆಧರ್‌ಲ್ಯಾಂಡ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬೇಡಿಕೆ ಹೆಚ್ಚಿದೆ. ಬಿಹಾರ್ ರಾಜ್ಯದಲ್ಲಿ ತಯಾರಾಗುವ ಬೂಟುಗಳನ್ನು ಈಗ ರಷ್ಯಾದೇಶದ ಸೈನಿಕರು ಧರಿಸುತ್ತಿದ್ದಾರೆ. ಟಿ 20 ವಿಶ್ವಕಪ್‌ನಲ್ಲಿ ಕಾಶ್ಮೀರದ ವಿಲ್ಲೋ ಬ್ಯಾಟುಗಳು ಉಪಯೋಗವಾಗುತ್ತಿವೆ. ಅಮೂಲ್ ಹಾಲಿನ ಉತ್ಪನ್ನಗಳು ಜಗತ್ತಿಗೆ ಪರಿಚಯವಾಗುತ್ತಿವೆ. ಮಾಹಿತಿ ತಂತ್ರಜ್ಞಾನದಲ್ಲಿ, ಆರೋಗ್ಯಕ್ಷೇತ್ರದಲ್ಲಿ, ಸಾರಿಗೆ ವ್ಯವಸ್ಥೆಯಲ್ಲಿ, ಕೃಷಿ, ಕೈಗಾರಿಕಾರಂಗ, ರಿನ್ಯೂಬಲ್ ಎನರ್ಜಿಗಳಲ್ಲಿ ಕ್ರಾಂತಿಯನ್ನು ಮಾಡಿವೆ. ಷೇರುಮಾರುಕಟ್ಟೆ ಸೆನ್‌ಸೆಕ್ಸ್ ದಾಖಲೆಯಮಟ್ಟ 81,000/-ರಷ್ಟು ದಾಟಿದೆ. ರಫ್ತು ಹೆಚ್ಚಳವಾಗಿದೆ. ಆಮದು ಕಡೆಮೆಯಾಗಿದೆ. ಲಕ್ಷಾಂತರ ಉದ್ಯೋಗಾವಕಾಶಗಳು ವೃದ್ಧಿಯಾಗಿದೆ. ವಿದೇಶಿ ವಿನಿಯಮ ಮೀಸಲು ಸಹ ರೂ 51 ಲಕ್ಷ ಕೋಟಿ ಮೀರಿದೆ. ಈ ಎಲ್ಲಾ ಕಾರಣಗಳಿಂದ 2023-24ನೇ ಸಾಲಿನ ಆರ್ಥಿಕ ಪ್ರಗತಿ ಶೇಕಡ 8.2 ರನ್ನು ದಾಖಲಿಸಿದೆ. ಇದು ಬೇರೆ ಬೇರೆ ಪ್ರಗತಿಪರ ರಾಷ್ಟ್ರಗಳಿಗೆ ಹೋಲಿಕೆ ಮಾಡಿದಾಗ ಉತ್ತಮವಾಗಿದೆ. ಇಂದು ರಾಷ್ಟ್ರ ಜಾಗತೀಕವಾಗಿ 5ನೇ ದೊಡ್ಡ ಸ್ಥಾನವನ್ನು ತಲುಪಿದೆ. 3ನೇ ಸ್ಥಾನಕ್ಕೆ ಬೆಳೆಯುವ ಎಲ್ಲಾ ಸೂಚನೆಗಳನ್ನು ಕಾಣಬಹುದಾಗಿದೆ.

ಬ್ಯಾಂಕಿಂಗ್ ರಂಗವೂ ಸಹ ಪ್ರಗತಿಪಥದಲ್ಲಿ ಸಾಗಿದ್ದು, ತಮ್ಮ ಆಡಾವೆ ಪತ್ರಗಳನ್ನು ಗಟ್ಟಿಗೊಳಿಸಿಕೊಳ್ಳುತ್ತಿವೆ. 2023-24ನೇ ಸಾಲಿನಲ್ಲಿ ಠೇವಣಿಗಳ ಪ್ರಗತಿ ಶೇಕಡ 9.6ರಷ್ಟು, ಕ್ರೆಡಿಟ್ ಬೆಳವಣಿಗೆ ಶೇಕಡ 15.6 ರಷ್ಟು ಲಾಭಗಳಿಕೆಗಳಲ್ಲಿ ಉತ್ತಮ ಸಾಧನೆಗಳನ್ನು ದಾಖಲಿಸಿದೆ. ಈ ವಿಷಯದಲ್ಲಿ ನಮ್ಮ ಸಹಕಾರಿ ಬ್ಯಾಂಕುಗಳು

ಸಹ ಉತ್ತಮ ಸಾಧನೆಗಳನ್ನು ದಾಖಲಿಸಿವೆ. ತಮ್ಮಲ್ಲಿನ ಅನುತ್ಪಾದಕ ಆಸ್ತಿಗಳನ್ನು ಕಡಿಮೆಗೊಳಿಸಿಕೊಂಡು ಪ್ರಗತಿಯ ಜೊತೆಗೆ ಉತ್ತಮ ಲಾಭಗಳನ್ನು ಘೋಷಿಸಿದೆ. ಇವು ಶುಭ ಸೂಚನೆಗಳಾಗಿವೆ.

ನಮ್ಮ ಬ್ಯಾಂಕು ತನ್ನ ನೂತನ ಹೆಸರು "ವಾಸವಿ ಎಂಎಸ್‌ಸಿಎಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಹೆಸರಿನೊಂದಿಗೆ ಹೊಸ ಹುರಿಪಿನಲ್ಲಿ ಪ್ರಗತಿಯ ಪಥದಲ್ಲಿ ನಡೆಯುತ್ತಿದೆ. ಆಡಳಿತ ಮಂಡಳಿಯಲ್ಲಿ ಉತ್ತಮ ಸಹಕಾರಿಗಳು, ಅನುಭವಿಗಳು, ಸಮಾಜದ ಬಗ್ಗೆ ಕಳಕಳಿಯಿರುವ ಸದಸ್ಯರಿರುತ್ತಾರೆ. ಸನ್ಮಾನ್ಯ ಸದಸ್ಯರೆಲ್ಲರು ಆಡಳಿತ ಮಂಡಳಿಯ ಜೊತೆ ಕೈಜೋಡಿಸಿ ಬ್ಯಾಂಕಿನಲ್ಲಿನ ಸೇವೆಗಳನ್ನು ಪಡೆಯಲು ಉತ್ತೇಜಿಸಿ, ಕನಿಷ್ಟ 5 ಹೊಸ ಸದಸ್ಯರನ್ನು ಪರಿಚಯಿಸಿ ಬ್ಯಾಂಕಿನ ಪ್ರಗತಿಯಲ್ಲಿ ಪಾಲ್ಗೊಳ್ಳಲು ಸವಿನಯ ಪ್ರಾರ್ಥನೆ.

ಆಡಳಿತ ಮಂಡಳಿಯ ಉತ್ತಮ ಸಹಕಾರ ಹಾಗೂ ಕಾರ್ಯನಿರ್ವಹಣೆಯಿಂದಾಗಿ ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಉತ್ತಮ ಲಾಭಗಳಿಸುವಲ್ಲಿ ಯಶಸ್ವಿಯಾಗಿದ್ದು, ಸಾಲಿನಾಂತ್ಯಕ್ಕೆ ಬ್ಯಾಂಕಿನ ಆರ್ಥಿಕ ಸ್ಥಿತಿ ಉತ್ತಮವಾಗಿಯೂ, ಸದೃಢವಾಗಿಯೂ ಇದೆಯೆಂದು ತಿಳಿಸಲು ಹೆಮ್ಮೆ ಪಡುತ್ತೇವೆ. ಆರ್ಥಿಕ ಅಂಕಿಅಂಶಗಳು ಈ ಕೆಳಗೆ ವಿವರಿಸಿರುವಂತೆ ಇರುತ್ತವೆ.

**ಬ್ಯಾಂಕಿನ ಹೆಸರು ಬದಲಾವಣೆ:**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮ ಸಂಖ್ಯೆಯೊಂದಿಗೆ ವಿಮರ್ಶಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | " ಎ " |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ **ವರ್ಗೀಕರಣ** | " ಎ " |

**೯) ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ :**

| | |
|---|---|
| ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಕ್ರಮವಿಡಲಾಗಿದೆ. |
| ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ? | ನಿಯಮಿತವಾಗಿ ನಡೆಯುತ್ತಿದೆ. |

**ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು**

| | |
|---|---|
| ಬ್ಯಾಂಕಿನ ವ್ಯವಹಾರಕ್ಕನುಗುಣವಾಗಿ ಆಂತರಿಕ ಅಥವಾ ಸಮವರ್ತಿ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೆ? | ಕ್ರಮವಿಡಲಾಗಿದೆ. |
| ಅಂತಹ ಪರಿಶೋಧನೆ ನಿಯಮಿತವಾಗಿ ನಡೆಯುತ್ತಿದೆಯೆ? | ನಿಯಮಿತವಾಗಿ ನಡೆಯುತ್ತಿದೆ. |

**ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು**

(1) ಬ್ಯಾಂಕಿನ ಎಲ್ಲಾ ಸದಸ್ಯರಿಗೂ ಷೇರು ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿಗಳನ್ನು ನೀಡಿರುವುದಿಲ್ಲ. (ತುಂಬಾ ಹಳೆಯ ಸದಸ್ಯರು ಪಡೆದಿರುವುದಿಲ್ಲ) ಕೆಲವು ಉಳಿತಾಯ ಮತ್ತು ಚಾಲ್ತಿ ಖಾತೆ ಗಳಲ್ಲಿ ಇರಬೇಕಾದ ಕನಿಷ್ಠ ಮೊತ್ತದ ನಿಯಮವನ್ನು ಪಾಲಿಸಿಲ್ಲ. ಆದರೆ ಉಳಿದ ನ್ಯೂನ್ಯತೆಗಳಾದ ಮತ್ತು ಕೆ.ವೈ.ಸಿ. ಮಾರ್ಗಸೂಚಿಗಳ ಬಗೆಗಿನ ಆಕ್ಷೇಪಣೆಗಳನ್ನು ಸರಿಪಡಿಸಿಕೊಳ್ಳಲಾಗಿದೆ.

(2) ಸಾಲದ ಮಂಜೂರಾತಿಯಲ್ಲಿ ನ್ಯೂನ್ಯತೆಗಳು.

(3) ಅಡಕದಲ್ಲಿ ವಿವರಿಸಲಾಗಿದೆ

<u>**ಸಮಜಾಯಿಷಿ:**</u>

ಷೇರು ಪ್ರಮಾನಪತ್ರ ಮತ್ತು ಗುರುತಿನ ಚೀಟಿಗಳನ್ನು ಪಡೆಯಲು ಎಲ್ಲಾ ಸದಸ್ಯರಲ್ಲಿ ಮನವಿ ಮಾಡಲಾಗಿದೆ, ಬ್ಯಾಂಕಿಗೆ ಬೇಟಿನೀಡಿ, ಮನವಿ ಸಲ್ಲಿಸದ ಸದಸ್ಯರುಗಳಿಗೆ ನೀಡಲಾಗುತ್ತಿದೆ.

ಉಳಿತಾಯ ಮತ್ತು ಚಾಲ್ತಿ ಖಾತೆಗಳಲ್ಲಿ ಕನಿಷ್ಠ ಮೊತ್ತ ನಿರ್ವಹಣೆ ಮಾಡದ ಖಾತೆದಾರರುಗಳಲ್ಲಿ ಕನಿಷ್ಠ ಮೊತ್ತವನ್ನು ನಿರ್ವಹಿಸಲು ಮತ್ತು ವ್ಯವಹರಿಸಲು ಮನವಿ ಪತ್ರಗಳನ್ನು ಕಳುಹಿಸಲಾಗಿದೆ.

| | |
|---|---|
| ಅವುಗಳಿಗೆ ಸಂಘವು ನೀಡಿದ ಅನುಪಾಲನಾ ವರದಿಯ ವಿವರ | ಅನುಪಾಲನಾ ವರದಿ ನೀಡಿದೆ. |
| ಅಂತಹ ನ್ಯೂನತೆಗಳು ಮುಂದುವರೆದಿದೆಯೆ? ಅವುಗಳ ನಿವಾರಣೆಗೆ ಕೈಗೊಂಡ ಕ್ರಮಗಳೇನು? | ಅಂತಹ ಸಾಮಾನ್ಯ ನ್ಯೂನ್ಯತೆಗಳು ಮುಂದುವರೆದಿದ್ದು ಸರಿಪಡಿಸಿಕೊಳ್ಳಲು ಸೂಚಿಸಿದೆ. |
| <u>**ಆಂತರಿಕ ಹತೋಟಿ**</u> | |
| ಲೆಕ್ಕಪತ್ರಗಳ ನಿರ್ವಹಣೆ ಬಗ್ಗೆ ನೀಡಿರುವ ಮಾರ್ಗ ಸೂಚಿಗಳು/ ಆದೇಶ/ ಕೈಪಿಡಿಗಳ ಬಗ್ಗೆ | ಬ್ಯಾಂಕಿನಲ್ಲಿ ಮಾರ್ಗಸೂಚಿ ಕೈಪಿಡಿಗಳನ್ನು ಇಡಲಾಗಿದೆ. |

| | |
|---|---|
| ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ (Balancing) / ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ | ಸಮನ್ವಯ ಉಪಪುಸ್ತಕಗಳ ಮೇಲೆ ಹತೋಟಿ ಇಡಲಾಗಿದೆ. |
| ಲೆಕ್ಕಪುಸ್ತಕಗಳ ಸರಿದೂಗಿಸುವಿಕೆ. ಮೇಲ್ವಿಚಾರಣೆಗೆ ಅಳವಡಿಸಲಾದ ಪದ್ಧತಿ/ ಹತೋಟಿಗಳು, ಸಮನ್ವಯ ಮತ್ತು ಉಪಪುಸ್ತಕಗಳ ನಿರ್ವಹಣೆಯಲ್ಲಿ ಅನುಸರಿಸಿದ ಪದ್ಧತಿಯ ಬಗ್ಗೆ. | ಲೆಕ್ಕಪುಸ್ತಕಗಳ ಸರಿದೂಗಿಸುವಿಕೆಗೆ ಹತೋಟಿಗಳು ಸಮನ್ವಯ ಮತ್ತು ಉಪ ಪುಸ್ತಕಗಳ ನಿರ್ವಹಣೆಗಳ ಬಗ್ಗೆ ಕ್ರಮವಿಡಲಾಗುತ್ತಿದೆ. |
| ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಹಿಂಬಾಲಿಕೆ ಕ್ರಮ. | ಇವುಗಳ ಅನುಷ್ಠಾನದ ಕ್ರಮದ ಬಗ್ಗೆ ಬ್ಯಾಂಕಿನ ಲೆಕ್ಕಪತ್ರಗಳನ್ನು ಅನುಸರಣಾ ಕ್ರಮದೊಂದಿಗೆ ಕನ್‌ಕರೆಂಟ್ ಆಡಿಟರ್ ರಿಂದ ಪರಿಶೀಲಿಸಿ ಕ್ರಮವಿಡಲಾಗುತ್ತಿದೆ. |
| **<u>ಜಾಗರೂಕತೆ:</u>** | |
| ವರದಿ ಸಾಲಿನಲ್ಲಿ ಲೆಕ್ಕಪರಿಶೋಧನೆಯಲ್ಲಿ ಪತ್ತೆ ಹಚ್ಚಲಾದ ಗುರುತರ ವಂಚನೆ ಪ್ರಕರಣಗಳ ಬಗ್ಗೆ. | ಲೆಕ್ಕಪರಿಶೋಧನೆಯಲ್ಲಿ ವಂಚನೆ ಪ್ರಕರಣ ಗಳು ಕಂಡು ಬಂದಿರುವುದಿಲ್ಲ. |
| ಜಾಗ್ರತಾ ವರದಿಗಳ ಮೇಲೆ ಕೈಗೊಂಡ ಅನುಸರಣಾ ಕ್ರಮ | ಅನುಸರಣಾ ಕ್ರಮಗಳನ್ನು ಕೈಗೊಳ್ಳ ಲಾಗುತ್ತಿದೆ. |
| ಅಮಾನತ್ ಲೆಕ್ಕಗಳು, ಸಂಡ್ರಿ ಡಿಪಾಜಿಟ್‌ಗಳು, ಇತ್ಯಾದಿಗಳ ಬಗ್ಗೆ | ವರದಿಯಲ್ಲಿ ಆಯಾ ಕಂಡಿಕೆಗಳಲ್ಲಿ ವಿತರಿಸಲಾಗಿದೆ. |
| ಈ ಖಾತೆಗಳಲ್ಲಿನ ಜಮಾ ಹಾಗೂ ಖರ್ಚುಗಳನ್ನು ತೀರಿಸುವ (Clearance) ಪದ್ಧತಿ ಬಗ್ಗೆ. ಈ ಶೀರ್ಷಿಕೆಯಡಿಯಲ್ಲಿ ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಪರಿಶೀಲನೆ ಕೈಗೊಳ್ಳುವುದು. | ಅಸಮಾನ್ಯ ನಮೂದುಗಳ ಪರೀಕ್ಷಾರ್ಥ ಗಳನ್ನು ಕೈಗೊಳ್ಳಲಾಗಿದೆ. |
| ತನಿಖೆ / ಹಿಂದಿನ ತನಿಖೆಯ ದಿನಾಂಕ | ಅನ್ವಯಿಸುವುದಿಲ್ಲ. |

**10)ದಾಖಲೆಗಳು, ಲೆಕ್ಕಪತ್ರಗಳ ನಿರ್ವಹಣೆ ಕರ್ನಾಟಕ ಸಹಕಾರ ಸಂಘಗಳ ನಿಯಮ 29 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 8 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | | |
|---|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು | |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಲಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು | |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು | |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು | |
| ಇ | ಆಡಳಿತ ಮಂಡಲಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು | |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು | |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು | |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ(ಬಾಕಿ) ತಃಖ್ತೆ; | ಹೌದು | |
| ಐ | ಸುಸ್ತಿದಾರರ ಸದಸ್ಯರ ಪಟ್ಟಿ; | ಹೌದು | |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು | |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು | |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು | |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು | |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು | |
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು | |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಹೌದು | |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | | ಇಲ್ಲ |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | | ಇಲ್ಲ |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು | |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು | |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು | |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು | |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು | |
| ಎಕ್ಸ್ | ಅಖೈರು ದಾಸ್ತಾನಿನ ಷೆಡ್ಯೂಲು; | ಹೌದು | |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | ಹೌದು | |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು | |

**11) ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣ**

**ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ**

1) ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ? ಸಲ್ಲಿಸಿದ್ದಾರೆ

2) ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ. 506/2023–24 ದಿನಾಂಕ: 05–09–2023.

**12) ಸಹಕಾರ ಸಂಘಕ್ಕೆ/ಸಹಕಾರಿಗೆ ಅನ್ವಯಿಸುವ ಕಾನೂನುಗಳ ಪಾಲನೆ ಅಥವಾ ಉಲ್ಲಂಘನೆ ಕುರಿತು**

**(ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗು ಬೈಲಾದ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ.)**

| | | |
|---|---|---|
| 1 | ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಬಗ್ಗೆ ಟಿಪ್ಪಣಿ | ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ, ಸಹಕಾರಿ ಸಂಘಗಳ ಕಾಯ್ದೆ, ನಿಯಮಗಳ ಪಾಲನೆ ಯನ್ನು ಅನುಸರಿಸಲಾಗುತ್ತಿದೆ. |
| 2 | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೆ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಿ ಅಳವಡಿಸಿಕೊಂಡು ಅನುಸರಿಸ ಲಾಗುತ್ತಿದೆ. |
| 3 | ನಬಾರ್ಡ್ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ | ಅನುಸರಿಸಲಾಗಿದೆ. |
| 4 | ಉಪವಿಧಿಗಳ ಉಲ್ಲಂಘನೆ, ಕಾಯ್ದೆ ಉಲ್ಲಂಘನೆ, ನಿಯಮಗಳ ಉಲ್ಲಂಘನೆ ಬಗ್ಗೆ ವರದಿ | ಉಲ್ಲಂಘನೆ ಆಗಿರುವುದು ಲೆಕ್ಕಪರಿಶೋಧನೆ ವೇಳೆ ಕಂಡುಬಂದಿರುವುದಿಲ್ಲ. |
| 5 | ಸಹಕಾರ ಇಲಾಖೆ ಅಥವಾ ಆರ್.ಬಿ.ಐನಿಂದ ವಿಚಾರಣೆ/ ತಪಾಸಣೆ ಬಗ್ಗೆ ವರದಿ | ಆರ್.ಬಿ.ಐ.ನಿಂದ 2022–23ನೇ ಸಾಲಿಗೆ ತಪಾಸಣೆ ನಡೆದಿದೆ. |

## ಭಾಗ – 2

## ಸಂಘದ ವ್ಯವಹಾರಿಕ ವಿವರಗಳು

13) ದಿನಾಂಕ 31-03-2024ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.

| ಸದಸ್ಯತ್ವ | ಸಾಮಾನ್ಯ ಸದಸ್ಯತ್ವ | | ನಾಮಮಾತ್ರ ಸದಸ್ಯತ್ವ | | ಸಹ ಸದಸ್ಯತ್ವ | |
|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿ ಇದ್ದ ಸದಸ್ಯರು | 4669 | 4656 | 161 | 128 | 1189 | 1132 |
| ಹೊಸದಾಗಿ ಸದಸ್ಯತ್ವ ಪಡೆದವರು | 236 | 85 | 13 | 46 | 191 | 183 |
| ಸದಸ್ಯತ್ವದಿಂದ ಕಡಿಮೆ ಆದವರು | 61 | 72 | 0 | 13 | 145 | 126 |
| ಸಾಲಾಖೈರಿಗೆ ಇರುವ ಸದಸ್ಯರು | 4844 | 4669 | 174 | 161 | 1235 | 1189 |
| ಸದಸ್ಯತ್ವದ ಬಗ್ಗೆ ವಿಮರ್ಶೆ | ಬ್ಯಾಂಕಿನಲ್ಲಿ ಸಾಮಾನ್ಯ ಸದಸ್ಯರಲ್ಲಿ 175 ಹೆಚ್ಚಾಗಿರುತ್ತಾರೆ, ನಾಮಮಾತ್ರ ಸದಸ್ಯರಲ್ಲಿ 13 ಸದಸ್ಯರು ಹೆಚ್ಚಾಗಿರುತ್ತಾರೆ, ಹಾಗೂ ಸಹಸದಸ್ಯತ್ವದಲ್ಲಿ 46 ಸದಸ್ಯರು ಹೆಚ್ಚಾಗಿರುತ್ತಾರೆ ಒಟ್ಟಾರೆಯಾಗಿ ಸದಸ್ಯತ್ವದಲ್ಲಿ ಹೆಚ್ಚಾಗಿರುತ್ತದೆ. | | | | | |

| | |
|---|---|
| ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಅಧಿನಿಯಮ 2014 ರ ಕಲಂ 18(1) ರನ್ವಯ ಸಂಘದಲ್ಲಿರುವ ಸಹಸದಸ್ಯರುಗಳ ಸಂಖ್ಯೆಯು ಒಟ್ಟು ಕ್ರಮಬದ್ಧ ಸದಸ್ಯತ್ವದ ಪ್ರತಿಶತ ಹದಿನೈದು ರಷ್ಟರನ್ನು ಮೀರತಕ್ಕಲ್ಲ, ಒಂದು ವೇಳೆ ಈಗಾಗಲೇ ಸದರಿ ಪ್ರಮಾಣ 15 ಪ್ರತಿಶತಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವದ ಹೊಂದಲು ಅರ್ಹ ವಿದ್ದಲ್ಲಿ ಈ ತಿದ್ದುಪಡಿ ದಿನಾಂಕನಿಂದ 6 ತಿಂಗಳೊಳಗೆ ಅಂತಹ ಸಹಸದಸ್ಯರನ್ನು ಕ್ರಮಬದ್ದ ಸದಸ್ಯ ರೆಂದು ಮಾಡಿಕೊಳ್ಳುವುದು, ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದುಹಾಕುವುದು ಎಂದು ಇದ್ದು, ಈ ಮೇಲಿನ ಅಂಶಗಳನ್ನು ಗಮನಿಸಿ ಸಂಘದಲ್ಲಿರುವ ಸಹಸದಸ್ಯರ ಬಗ್ಗೆ ವಿಮರ್ಷಿಸುವುದು. | ಬ್ಯಾಂಕಿನಲ್ಲಿ ಸದಸ್ಯತ್ವದ ರಿಜಿಸ್ಟರ್‌ನ್ನು ತಹಲ್‌ವರೆಗೆ ಸಿದ್ಧಪಡಿಸಿ ನಿರ್ವಹಿಸಲಾಗಿದೆ. ಮೃತರಾಗಿರುವ ಹಾಗೂ ಸದಸ್ಯತ್ವ ರದ್ದು ಮಾಡಲು ಕೋರಿದ 61 ಜನ ಸದಸ್ಯರ ಬಾಬ್ತು ರೂ. 10,85,500.00 ಷೇರನ್ನು ಉಪನಿಯಮ 18(1)ರ ಅವಕಾಶದಂತೆ ಸ್ಥಗಿತಗೊಳಿಸ ಲಾಗಿದೆ. ಅಂತೆಯೇ ಸಹಕಾರ ಸಂಘಗಳ ಕಾಯ್ದೆ ಕಲಂ 17(2ಎ) ಮತ್ತು ಉಪನಿಯಮ 18(2) ರಲ್ಲಿನ ಅವಕಾಶದಂತೆ ಪೂರ್ಣ ಸಾಲವನ್ನು ಮರುಪಾವತಿಸಲು ವಿಫಲರಾದ ಕೆಲವು ಸಹ ಸದಸ್ಯರು ಹೊಂದಿರುವ ಷೇರನ್ನು (ಸಮನಾದ ಸಾಲ ಮತ್ತು ಬಡ್ಡಿ ಬಾಕಿ ಇರುವ ಪ್ರಕರಣಗಳಲ್ಲಿ) ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುವುದರ ಮೂಲಕ ಅವರ ಸದಸ್ಯತ್ವವನ್ನು ಸ್ಥಗಿತಗೊಳಿಸಲಾಗಿದೆ.<br><br>ಬ್ಯಾಂಕಿನಲ್ಲಿ ಸಹ ಸದಸ್ಯತ್ವ ಮತ್ತು ನಾಮಮಾತ್ರ ಸದಸ್ಯತ್ವವನ್ನು ನೀಡಲಾಗಿರುತ್ತದೆ. ಜಾಮೀನು ನೀಡುವವರ, ಸಾಲ ಪಡೆಯುವವರನ್ನು ಸಹ ಸದಸ್ಯರನ್ನಾಗಿ ನೋಂದಾಯಿಸಿಕೊಳ್ಳಲಾಗುತ್ತಿದೆ. ಸದರಿ ಸಾಲಿಗೆ 145 ಸಹಸದಸ್ಯರಿಗೆ ರೂ.60,88,800.00 ಗಳ ಷೇರು ಮೊಬಲಗು ವಾಪಸ್ಸಾಗಿರುತ್ತದೆ. ಒಟ್ಟು ಸಾಮಾನ್ಯ ಸದಸ್ಯರಿಗೆ ಹೋಲಿಸಿದಲ್ಲಿ ಸಹಸದಸ್ಯತ್ವ ಶೇ.25.49 ರಷ್ಟಿದ್ದು ಇದು ಸಹಕಾರ ಸಂಘಗಳ ತಿದ್ದುಪಡಿ ಅಧಿನಿಯಮ 2014ರ ಕಲಂ 18(1)ರ ಉಲ್ಲಂಘನೆಯಾಗಿರುತ್ತದೆ. ಸಹ ಸದಸ್ಯರ ಸಂಖ್ಯೆಯನ್ನು ಮೇಲಿನ ಅಧಿನಿಯಮದಂತೆ ಮಿತಿಯಲ್ಲಿಡುವುದಕ್ಕೆ ಕ್ರಮವಿಡುವುದು. |
| ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ವಿಮರ್ಷೆ | ಕೆ.ವೈ.ಸಿ. ಮಾರ್ಗಸೂಚಿಗಳನ್ನು ಪಾಲಿಸಲು ಕ್ರಮವಿಡಲಾಗುತ್ತಿದೆ. |

**ಸಮಜಾಯಿಷಿ:** ಸಹ ಸದಸ್ಯರ ಸಂಖ್ಯೆಯನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ಕಡಿಮೆಗೊಳಿಸಿ, ಸಾಮಾನ್ಯ ಸದಸ್ಯರನ್ನು ಹೆಚ್ಚಿಸಿಕೊಂಡು, ಸಹ ಸದಸ್ಯರನ್ನು ನಿಯಂತ್ರಣದಲ್ಲಿರಿಸಿಕೊಂಡು ಶೇಕಡವಾರು ಪ್ರಮಾಣದ ಮಿತಿಯನ್ನು ಕಾಯ್ದುಕೊಳ್ಳಲಾಗುವುದು.

**ಸಂಘದ ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನ್ಯತೆಗಳ ಬಗ್ಗೆ ವಿಮರ್ಷೆ :**

| | | |
|---|---|---|
| 1 | ವಿವಿಧ ವರ್ಗಗಳ ಸದಸ್ಯರ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಎಲ್ಲಾ ವರ್ಗಗಳ ಸದಸ್ಯರುಗಳ ವ್ಯವಹಾರ ನಡೆಸುತ್ತಿದ್ದಾರೆ. |
| 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಸದಸ್ಯೇತರರು ವಿವಿಧ ಠೇವಣಿಗಳನ್ನು ಇಟ್ಟು ಬ್ಯಾಂಕಿನಲ್ಲಿ ವ್ಯವಹರಿಸುತ್ತಿದ್ದಾರೆ. |
| 3 | ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು | ವ್ಯಾಪ್ತಿಮೀರಿ ನಡೆಸಿದ ವ್ಯವಹಾರಗಳು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿರುವುದಿಲ್ಲ. |
| 4 | ಷೇರು ಬಂಡವಾಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಬ್ಯಾಂಕಿನಲ್ಲಿ ಷೇರು ಖಾತೆಗಳನ್ನು ನಿರ್ವಹಿಸಲಾಗಿದೆ. |

## 14) ಷೇರು ಬಂಡವಾಳ ಬಗ್ಗೆ ವಿಮರ್ಷೆ:

| | | |
|---|---|---|
| 1) | **ಅಧಿಕೃತ ಷೇರು ಬಂಡವಾಳ :** ಸಂಘದ ಉಪನಿಯಮದನ್ವಯ ಅಧಿಕೃತ ಷೇರು ಭಂಡವಾಳದ ಮಿತಿ ಸಂಘದ ವಾರ್ಷಿಕ ಮಹಾಸಭೆಯಲ್ಲಿ ನಿರ್ಧರಿಸಿದ ಕುರಿತು ಹಾಗೂ ಸಂಘದ ಉಪ ನಿಯಮದನ್ವಯ ಷೇರಿನ ಮುಖಬೆಲೆ ಕುರಿತು ವಿಮರ್ಷಿಸುವುದು. | ಬ್ಯಾಂಕಿನ ಉಪನಿಯಮ ಸಂಖ್ಯೆ 10ಕ್ಕೆ ಬ್ಯಾಂಕಿನ ಪ್ರತಿ ಷೇರಿನ ಮುಖಬೆಲೆಯು ರೂ.100–00 ಗಳಾಗಿರುತ್ತದೆ ಪಾಲು ಬಂಡವಾಳದ ಗರಿಷ್ಠ ಮಿತಿ ದಿನಾಂಕ: 13–12–2020ರ ಮಹಾಸಭೆಯಲ್ಲಿ ರೂ. 25–00 ಕೋಟಿಗೆ ನಿಗಧಿಪಡಿಸಿಕೊಳ್ಳಲಾಗಿದೆ. |

**ದಿನಾಂಕ 31-03-2024ಕ್ಕೆ ಇರುವಂತೆ ಸಂಘದ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ**

| ಷೇರು ಬಂಡವಾಳ | ಸರಕಾರದ ಶೇರು | | ಸಾಮಾನ್ಯ ಶೇರು | | ನಾಮಮಾತ್ರ ಸದಸ್ಯರ ಶೇರು | | ಸಹ ಸದಸ್ಯರ ಶೇರು | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | – | – | 184.63 | 181.53 | 0.41 | 0.33 | 289.96 | 286.62 |
| ಪ್ರಸಕ್ತ ಸಾಲಿನಲ್ಲಿನ ಜಮಾ | – | – | 13.92 | 8.85 | 0.03 | 0.11 | 84.46 | 48.89 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | – | – | 10.86 | 5.75 | 0.00 | 0.03 | 60.89 | 45.55 |
| ಸಾಲಾಖೈರಿಗೆ ಇದ್ದಂತೆ | – | – | 187.69 | 184.63 | 0.44 | 0.41 | 313.52 | 289.96 |

ಬ್ಯಾಂಕಿನ ಸಾಮಾನ್ಯ ಷೇರು ಬಂಡವಾಳದಲ್ಲಿ ರೂ. 3,06,100.00 ಗಳು, ಸಹಸದಸ್ಯರ ಷೇರು ಧನದಲ್ಲಿ ರೂ. 23,56,800.00ಗಳು, ನಾಮಮಾತ್ರ ಸದಸ್ಯರ/ಷೇರು ಧನದಲ್ಲಿ ರೂ.3,250.00 ಗಳು ಹೆಚ್ಚಿಗೆಯಾಗಿದ್ದು, ಇದು ಕ್ರಮವಾಗಿ ಶೇ.1.65, ಶೇ.7.31, ಶೇ.8.12 ರಷ್ಟು ಹೆಚ್ಚಾಗಿದ್ದು, ಒಟ್ಟಾರೆಯಾಗಿ ಷೇರು ಧನದಲ್ಲಿ ಶೇ.5.61 ರಷ್ಟು ಹೆಚ್ಚಾಗಿರುವುದು.

| | |
|---|---|
| <u>**ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಷೆ :**</u><br>ಸರ್ಕಾರದ ಷೇರು ಧನ ಕುರಿತಂತೆ ಮಂಜೂರಾತಿ ಆದೇಶ ಮತ್ತು ಮರು ಪಾವತಿಯ ಕಂತುಗಳ ಷರತ್ತು ಇತ್ಯಾದಿ ಕುರಿತು ವಿಮರ್ಷಿಸುವುದು. | ಸರ್ಕಾರದ ಷೇರುಧನ ಇರುವುದಿಲ್ಲ. |
| <u>**ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಷೆ**</u><br>(ಇದರಲ್ಲಿ ಸಂದಾಯವಾದ ಷೇರು ಬಂಡವಾಳ ಅಧಿಕೃತ ಷೇರು ಬಂಡವಾಳದ ಮಿತಿಯಲ್ಲಿ ಇರುವಂತೆ, ಷೇರಿನ ಮುಖಬೆಲೆಯಂತೆ ಪೂರ್ಣ ಇರುವ ಬಗ್ಗೆ, ಎಲ್ಲ ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಿರುವ ಬಗ್ಗೆ, ಸಂಘದಲ್ಲಿ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 122 ರಂತೆ ಸದಸ್ಯರ ರಜಿಸ್ಟರಿನಲ್ಲಿ ಪೂರ್ಣ ವಿವರಗಳೊಂದಿಗೆ ಬರೆದು ಇಟ್ಟಿರುವ ಬಗ್ಗೆ ವಿಮಷಿಸುವುದು.) | ಬ್ಯಾಂಕಿನ ಉಪನಿಯಮದ ಸಂಖ್ಯೆ 10ಕ್ಕೆ ಬ್ಯಾಂಕಿನ ಪ್ರತಿ ಷೇರಿನ ಮುಖಬೆಲೆಯು ರೂ.100–00 ಗಳಾಗಿರುತ್ತದೆ. ಪಾಲು ಬಂಡವಾಳದ ಗರಿಷ್ಠ ಮಿತಿ ದಿ.13–12–2020ರ ಮಹಾಸಭೆಯಲ್ಲಿ ರೂ.25–00 ಕೋಟಿಗೆ ನಿಗಧಿಪಡಿಸಿ ಕೊಳ್ಳಲಾಗಿದೆ. |
| ಕುಳುವಾರು ಪಟ್ಟಿ ತಯಾರಿಸಿದ್ದಾರೆಯೇ? ತಾಳೆಯಾಗಿದೆಯೇ? (ವ್ಯತ್ಯಾಸವಿದ್ದಲ್ಲಿ ವ್ಯತ್ಯಾಸ ಯಾವ ಸಾಲಿನದು ಎಂಬುದರ ಬಗ್ಗೆ ವಿಮರ್ಷಿಸುವುದು) | ಷೇರು ಕುಳುವಾರು ಪಟ್ಟಿ ತಯಾರಿಸಿದ್ದು ತಾಳೆ ಇದ್ದು ವರದಿಗೆ ಲಗತ್ತಿಸಿದೆ. |

## 15) ಮೀಸಲು ನಿಧಿ ಮತ್ತು ಇತರೆ ನಿಧಿಗಳು: 'ಶೆಡ್ಯೂಲ್ ಯು' ನಲ್ಲಿರುವ ಪ್ರಕಾರ

| | | |
|---|---|---|
| 1 | ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂದ ಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ. ಆಗಿದೆಯೇ ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ. | ಬ್ಯಾಂಕಿನ ಉಪನಿಯಮ 108 ರಂತೆ ಬ್ಯಾಂಕ್ ಈ ಕೆಳಕಂಡ ನಿಧಿಗಳನ್ನು ಕ್ರೂಢೀಕರಿಸಲು ಅವಕಾಶ ಹೊಂದಿರುತ್ತದೆ.<br>ಬ್ಯಾಂಕ್ ದಿನಾಂಕ 31–3–2024ರ ಅಂತ್ಯಕ್ಕೆ ರೂ. **5,55,50,000.00** ಗಳ ಮೀಸಲು ನಿಧಿ ಹಾಗೂ **ರೂ.22,60,93,054.32** ಗಳ ಇತರೆ ನಿಧಿಗಳನ್ನು ಹೊಂದಿದ್ದು ಇವುಗಳಲ್ಲಿ ರೂ. **6,06,39,402.77**ಗಳನ್ನು ಕ.ರಾ.ಸ. ಅಪೆಕ್ಸ್ ಬ್ಯಾಂಕಿನಲ್ಲಿ ಹಾಗೂ ರೂ.**9,358.62**ಗಳನ್ನು ಗಳನ್ನು ಬಿಡಿಸಿಸಿ ಬ್ಯಾಂಕಿನಲ್ಲಿ ಮೀಸಲು ನಿಧಿಯಡಿಯಲ್ಲಿ ಹಾಗೂ ರೂ.25,000/– ಗಳನ್ನು ಷೇರುಗಳಲ್ಲಿ ಹೂಡಿಕೆ ಮಾಡಲಾಗಿದೆ. |

| | | |
|---|---|---|
| 2 | ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ? | ಪಾಲನೆಯಾಗಿರುತ್ತದೆ. |
| 3 | ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆಯದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು. | ಅನ್ವಯಿಸುವುದಿಲ್ಲ. |
| 4 | ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಃಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ ( Inner Column) ಕಡ್ಡಾಯವಾಗಿ ನಮೂದಿಸುವುದು. | ಅನ್ವಯಿಸುವುದಿಲ್ಲ. |
| 5 | ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4) (ಬಿ) ಯ ಉಲ್ಲಂಘನೆಯಾಗಿದೆಯೇ? | 2022–23ನೇ ಸಾಲಿನ ನಿವ್ವಳ ಲಾಭ ವಿಲೇವಾರಿಯಲ್ಲಿ ರೂ.1,60,382.31 ಗಳು ಶಿಕ್ಷಣ ನಿಧಿ ಪ್ರಾಪ್ತವಾಗಿದ್ದು ಇದನ್ನು ಮಹಾಮಂಡಳಕ್ಕೆ ಪಾವತಿಸಲಾಗಿದೆ. ಆದ್ದರಿಂದ ಸಹಕಾರ ಸಂಘಗಳ ಕಾಯ್ದೆ ಕಲಂ 57(4)(ಬಿ)ಯ ಉಲ್ಲಂಘನೆ ಯಾಗಿರುವುದಿಲ್ಲ. |

## (16)<u>ಹೊರಗಿನಿಂದ ಪಡೆದ ಸಾಲಗಳು</u>:

| | | |
|---|---|---|
| | ಸಂಘವು ಹೊರಗಿನಿಂದ ಸಾಲ ಪಡೆಯಲು ಉಪನಿಯಮದಲ್ಲಿ ಇರುವ ಅವಕಾಶ ಹಾಗೂ ಮಿತಿಯ ಬಗ್ಗೆ ವಿಮರ್ಷೆ | ಹೊರಗಿನಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. |
| 1 | **ಬ್ಯಾಂಕಿನಿಂದ ಪಡೆದ ಸಾಲಗಳು:** | ಬ್ಯಾಂಕಿನಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. |
| | ಎ] ಬ್ಯಾಂಕಿನ ಹೆಸರು ಮತ್ತು ಶಾಖೆ | ಅನ್ವಯಿಸುವುದಿಲ್ಲ. |
| | ಬಿ] ಹೊರಗಿನಂದ ಪಡೆದ ವಿವಿದ ಸಾಲದ ವಿವರ: | |

| ಕ್ರ.ಸಂ | ಸಾಲದ ವಿವರ | ಆರಂಭದ ಬಾಕಿ | ಸಾಲ ತಂದಿದ್ದು | ಸಾಲ ಮರುಪಾವತಿ | ವರ್ಷಾಂತ್ಯದ ಬಾಕಿ |
|---|---|---|---|---|---|
| 1 | ನಗದು ಪತ್ತಿನ ಸಾಲ | ಅನ್ವಯಿಸುವುದಿಲ್ಲ. | | | |
| 2 | ಇನ್ನಿತರೆ ಸಾಲಗಳು | | | | |

| | | |
|---|---|---|
| | ಸಿ] ಪಡೆದ ಸಾಲಗಳಲ್ಲಿ ಸುಸ್ತಿ ಸಾಲದ ವಿವರ | ಅನ್ವಯಿಸುವುದಿಲ್ಲ. |
| | ಡಿ] ಸಾಲಗಳ ಮೇಲೆ ಪಾವತಿಸಿರುವ ಬಡ್ಡಿ [ನಿಖರತೆ ಬಗ್ಗೆ ಪರಿಶೀಲಿಸಿ ವಿಮರ್ಷಿಸುವುದು] ಸಾಲಾಂತ್ಯ ದಿ: 31.3.2024ಕ್ಕೆ ಪಾವತಿಗೆ ಬಾಕಿ ಇರುವ ಬಡ್ಡಿ, ಈ ಬಡ್ಡಿಗೆ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸುವುದು. | ಹೊರಗಿನಿಂದ ಯಾವುದೇ ಸಾಲಗಳನ್ನು ಪಡೆದಿಲ್ಲದಿರುವುದರಿಂದ ಅನ್ವಯಿಸುವುದಿಲ್ಲ. |
| 2 | ಸಂಘ ಸಂಸ್ಥೆಗಳಿಂದ ಪಡೆದ ಸಾಲಗಳ ವಿವರ: [ಸಾಲಾಂತ್ಯ ದಿ: 31.3.2024 ಕ್ಕೆ ದೃಡೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ಹಾಗೂ ಈ ಸಾಲಗಳ ಸುಸ್ತಿ ಬಗ್ಗೆ ವಿಮರ್ಷೆ ನೀಡುವುದು] | ಅನ್ವಯಿಸುವುದಿಲ್ಲ. |
| 3 | **ಸರ್ಕಾರದ ಸಾಲಗಳು:** {ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2024ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಡೀಕರಣ ಪತ್ರದೊಂದಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಹೊರಗಿನಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. |
| 4 | ಸಂಘವು ಹೊರಗಿನಿಂದ ಪಡೆದ ಸಾಲದ ವರ್ಷಾಂತ್ಯಕ್ಕೆ ಕೊಡತಕ್ಕ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | ಹೊರಗಿನಿಂದ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ. |

## (17)ಠೇವಣಿಗಳು :

| | | |
|---|---|---|
| 1 | ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪನಿಯಮದಲ್ಲಿ ಅವಕಾಶವಿರುವ ಬಗ್ಗೆ ಸಂಘವು ಸಂಗ್ರಹಿಸಿರುವ ಠೇವಣಿ ಉಪನಿಯಮದನುಸಾರ ಇರುವ ಬಗ್ಗೆ ವಿಮರ್ಷಿಸಿ | ಬ್ಯಾಂಕಿನ ಬೈಲಾ ರೀತ್ಯಾ ಸದಸ್ಯರಿಂದ ಹಾಗೂ ಸದಸ್ಯೇತರರಿಂದ ವಿವಿಧ ರೀತಿಯ ಠೇವಣಿಗಳನ್ನು ಪಡೆಯಬಹುದಾಗಿದೆ. |
| 2 | ಸಂಘವು ಸಂಗ್ರಹಣೆ ಮಾಡಿರುವ ವಿವಿದ ಠೇವಣಿಗಳ ವಿವರಗಳು [ಕಳೆದ ಸಾಲು ಹಾಗೂ ಪ್ರಸಕ್ತ ಸಾಲಿಗೆ ಸಂಗ್ರಹಿಸಿರುವ ಮೊಬಲಗು ಹೆಚ್ಚು/ಕಡಿಮೆ ಶೇ. ಮಾಹಿತಿಯೊಂದಿಗೆ ವಿಮರ್ಷಿಸಿ | |

| ಠೇವಣಿ ವಿವರಗಳು | ಆರಂಭ ಬಾಕಿ | ಪ್ರಸಕ್ತ ಸಾಲಿನ ಜಮಾ | ಪ್ರಸಕ್ತ ಸಾಲಿನ ಖರ್ಚು | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|
| ನಗದು ಪತ್ರ | | | | | | |
| ಮುದ್ದತ್ತಿ ಠೇವಣಿ | | | | | | |
| ಪಿಗ್ಮಿ ಠೇವಣಿ | | ಪಟ್ಟಿಯನ್ನು ಲಗತ್ತಿಸಿದೆ. | | | | |
| ಉಳಿತಾಯ ಠೇವಣಿ | | | | | | |
| ರಿಕರಿಂಗ್ ಠೇವಣಿ | | | | | | |
| **ಒಟ್ಟು ಮೊತ್ತ** | | | | | | |

**ಒಟ್ಟು ಠೇವಣಿಗಳ ಕಳೆದ 02 ವರ್ಷಗಳ ಅಂಕಿಗಳೊಂದಿಗೆ ತುಲನಾತ್ಮಕ ವಿವರ:**

| 2021-22ಕ್ಕೆ | 2022-23ಕ್ಕೆ | 2023-24ಕ್ಕೆ |
|---|---|---|
| 1,77,96,86,958.90 | 1,63,71,73,851.55 | 1,94,11,61,142.86 |

ಮೇಲ್ಕಂಡ ಠೇವಣಿಗಳ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ ವರದಿ ಸಾಲಿಗೆ ಸ್ವೀಕೃತವಾಗಿರುವ ವಿವಿಧ ಠೇವಣಿಗಳಲ್ಲಿ ರೂ 30,39,87,291.31ಗಳು ಹೆಚ್ಚಾಗಿದ್ದು, ಇದು ಶೇಕಡ 18.57 ರಷ್ಟು ಹೆಚ್ಚಾಗಿರುತ್ತದೆ.

**ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿತದ ಬಗ್ಗೆ ವಿಮರ್ಶೆ :**

| | | |
|---|---|---|
| 3 | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವಣಿ ಪಡೆಯಲಾಗಿದೆ? | ಹೌದು ಠೇವಣಿಯನ್ನು ಸ್ವೀಕರಿಸಲಾಗುತ್ತಿದೆ. 7,878 ವ್ಯಕ್ತಿಗಳಿಂದ ರೂ.143,00,00,000.00 ಗಳ ಮೊತ್ತದ ಠೇವಣಿಯನ್ನು ಪಡೆಯಲಾಗಿದೆ. |
| 4 | ಠೇವಿನ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ದಿ.01-06-2023ರ ಬ್ಯಾಂಕಿನ ಆಡಳಿತ ಮಂಡಳಿ ಸಭೆಯಲ್ಲಿ ಶೇ.4 ರಿಂದ ಶೇ. 8 ರವರೆಗೆ ಠೇವಣಿಗಳಿಗೆ ಬಡ್ಡಿ ನಿರ್ಧರಿಸಿದ್ದು . ಹಿರಿಯ ನಾಗರಿಕರಿಗೆ ಶೇ.0.5 ಹೆಚ್ಚು ಬಡ್ಡಿ ನೀಡಲಾಗುತ್ತಿದೆ. ಉಳಿತಾಯ ಖಾತೆದಾರರಿಗೆ ಶೇ. 3 ಬಡ್ಡಿ ನೀಡಲಾಗುತ್ತಿದೆ. ವರದಿ ವರ್ಷದಲ್ಲಿ ರೂ. 9,45,24,664.00 ಬಡ್ಡಿ ಪಾವತಿಸಲಾಗಿದೆ. |
| 5 | ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ? | ಠೇವಣಿದಾರರಿಗೆ ಸರ್ಟಿಫಿಕೇಟ್/ಪಾಸ್ ಪುಸ್ತಕ ನೀಡಲಾಗುತ್ತಿದೆ. |
| 6 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಷಿಸಿ | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ನೀಡಲಾಗಿರುತ್ತದೆ. ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ (ಕುಳುವಾರು ತಯಾರಿಸಿ) ಅವಕಾಶ ಕಲ್ಪಿಸಲಾಗಿದೆ. ಕುಳುವಾರು ಪಟ್ಟಿ ತಯಾರಿಸಿದ್ದು, ತಾಳೆ ಇರುತ್ತದೆ. |
| 7 | ಪಿಗ್ಮಿ ಠೇವಣಿ ವ್ಯವಹಾರ ಕೈಗೊಂಡಿರುವರೋ? | ಪಿಗ್ಮಿ ಠೇವಣಿ ವ್ಯವಹಾರ ಇರುತ್ತದೆ. |
| 8 | ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್. | ಸಂಖ್ಯೆ 13, ಕಮಿಷನ್ ಶೇಕಡ 2.5% |
| 9 | ಠೇವಣಾತಿಗಳನ್ನು ಮತ್ತು ಅದರ ಮೇಲಿನ ಬಡ್ಡಿ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳನ್ನು ಪಾಲಿಸಿರುವರೇ? | ಆದಾಯ ತೆರಿಗೆ ನಿಯಮಗಳನ್ನು ಪಾಲಿಸಲಾಗುತ್ತಿದೆ. |

| | | |
|---|---|---|
| 10 | ಆನಿಶ್ಚಿತ ಜವಾಬ್ದಾರಿಗಳು : (Contingent Liabilities) | ದಿ.31-03-2024 ಕ್ಕೆ ಪೇಆರ್ಡರ್ ಲೆಕ್ಕದಲ್ಲಿ ರೂ. 1,29,26,659.00ಗಳು ಬಾಕಿ ಇದ್ದು, ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ. ಈ ಪೈಕಿ ಲ್ಯಾಪ್ಸ್‌ಡ್ ಪೇ ಆರ್ಡರ್ ಲೆಕ್ಕದಲ್ಲಿ ರೂ. 3,28,136.50 ಹಾಗೂ ರೂ.97,167.00 ಲ್ಯಾಪ್ಸ್‌ಡ್ ಡಿ.ಡಿ ಲೆಕ್ಕದಲ್ಲಿ ಇದ್ದು, ಪ್ರತ್ಯೇಕ ಖಾತೆಯಲ್ಲಿ ತೋರಿಸಲಾಗಿದ್ದು ಕುಳುವಾರು ಪಟ್ಟಿಗೆ ತಾಳೆ ಇರುತ್ತದೆ. |
| 11 | ದ್ರವ್ಯಾಸ್ತಿಗಳ (ಪ್ಲುಯಿಡ್ ರಿಸೋರ್ಸಸ್) ಬಗ್ಗೆ ವಿಮರ್ಶೆ SLR/CRR ಗಳ ನಿರ್ವಹಣೆ-ಶಾಖೆಗಳ ವಾರದ ಆಖೈರದ ಸ್ಥಿತಿಯ ಬಗ್ಗೆ (ಡಿಮ್ಯಾಂಡ್ ಆ್ಯಂಡ ಟೈಮ್ ಲಯಾಬಿಲಿಟೀಸ್) ಅನುಪಾಲನಾ ವರದಿ ಗಳನ್ನು ಸಲ್ಲಿಸುವ ಪದ್ಧತಿಯನ್ನು ಹೊಂದಿರುತ್ತದೆಯೇ? ಈ ಸಂಬಂಧದದಾಖಲೆಗಳನ್ನು ನಿರ್ವಹಿಸಲಾಗಿದೆಯೇ? | ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1959 ಕಲಂ 18 ಮತ್ತು 24ರ ಅನ್ವಯ ಬ್ಯಾಂಕ್ ತಾನು ಹೊಂದಿರುವ ಬೇಡಿಕೆ ಮತ್ತು ನಿಶ್ಚಿತ ಅವಧಿಯ ಜವಾಬ್ದಾರಿಗಳ (ಡಿ.ಟಿ.ಎಲ್) ಮೇಲೆ ಶೇ.4.5 ರಿಂದ ಶೇ.6.50 ರಷ್ಟು ನಗದು ಮೀಸಲು ಮತ್ತು ಶೇ.18.00 ರಿಂದ ಶೇ.40.00 ದ್ರವ್ಯಾಸ್ತಿಯನ್ನು ನಿರ್ವಹಿಸಬೇಕಾಗಿದೆ. ಪ್ರಸ್ತುತ ಬ್ಯಾಂಕಿನಲ್ಲಿ ದಿನಾಂಕ:1-4-2023 ರಿಂದ ದಿನಾಂಕ:31-3-2024ರ ಅವಧಿಯಲ್ಲಿ ನಿಗಧಿತ ಮಿತಿಯನ್ನು ಮೀರಿರುವುದಿಲ್ಲ. ಅನುಪಾಲನಾ ವರದಿಗಳನ್ನು ಸಮಯಕ್ಕೆ ಸರಿಯಾಗಿ ಸಲ್ಲಿಸಲಾಗಿದೆ. ತತ್ಸಂಬಂಧವಾದ. ದಾಖಲೆಗಳನ್ನು ನಿರ್ವಹಿಸಲಾಗಿದೆ |
| 12 | ವರದಿ ಸಾಲಿನಲ್ಲಿ ಇವುಗಳ ಪಾಲನೆಯಲ್ಲಿ ಆಗಿರುವ ವಿಫಲತೆಯ ಬಗ್ಗೆ ಹಾಗೂ ಈ ಕುರಿತು ರಿಸರ್ವ್ ಬ್ಯಾಂಕಿಗೆ ದಂಡದ ಮೊತ್ತ ಪಾವತಿಸಿದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿ ನಿಗದಿ ಪಡಿಸಿ ಆರ್ಥಿಕ ತ:ಖ್ತೆಯಲ್ಲಿ ತೋರಿಸಲಾಗಿದೆಯೇ? | ಇವುಗಳ ಪಾಲನೆಯಲ್ಲಿ ಯಾವುದೇ ವಿಫಲತೆ ಕಂಡು ಬಂದಿಲ್ಲ. |
| 13 | **<u>ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು</u>:-** [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನ್ಯತೆಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಷಿಸುವುದು] | ಯಾವುದೇ ನ್ಯೂನ್ಯತೆಗಳು ಕಂಡು ಬಂದಿರುವುದಿಲ್ಲ. |

## 18) ಸಹಾಯಧನಗಳು:

| ಸರ್ಕಾರದಿಂದ ಪಡೆದ ಸಹಾಯಧನ ಕುರಿತಂತೆ ವಿವರಣೆ : | |
|---|---|
| ಮಂಜೂರಾದ ಮೊತ್ತ ಹಾಗೂ ಉದ್ದೇಶ, ಉಪಯೋಗಿಸಿದ ರೀತಿ ಇತ್ಯಾದಿ ವಿವರಣೆ.<br>[ಮಂಜೂರಾಗಿರುವ ಎಲ್ಲಾ ರೀತಿಯ ಸಹಾಯಧನದ ಬಗ್ಗೆ ಪೂರ್ಣವಾಗಿ ವಿವರಣೆ ನೀಡುವುದು] | ಯಾವುದೇ ರೀತಿಯ ಮಂಜೂರಾತಿಗಳು ಇರುವುದಿಲ್ಲ. |
| ಸಂಘವು ವರದಿ ಸಾಲಿನಲ್ಲಿ ಕೇಂದ್ರ / ರಾಜ್ಯ ಸರ್ಕಾರಗಳಿಂದ ಬಡ್ಡಿ ಸಹಾಯ ಧನವನ್ನು ಪಡೆದಿರುತ್ತದೆಯೇ? ಪಡೆದಿದ್ದಲ್ಲಿ ಅದು ಸರ್ಕಾರದ ಆದೇಶಕ್ಕನುಗುಣವಾಗಿದೆಯೇ? ವಿವರಗಳನ್ನು ನಮೂದಿಸುವುದು (ಅನ್ವಯವಾಗುವಲ್ಲಿ ಮಾತ್ರ) | ಸರ್ಕಾರದಿಂದ ಯಾವುದೇ ಸಹಾಯಧನ ಪಡೆದಿರುವುದಿಲ್ಲ. |

## 19) ಇತರೆ ಜವಾಬ್ದಾರಿಗಳು :

[ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಷಿಸುವುದು]

| ಕ್ರ | ವಿವರ | ಮೊತ್ತ |
|---|---|---|
| ಪಟ್ಟಿಯನ್ನು ಲಗತ್ತಿಸಿದೆ. | | |

ಪಟ್ಟಿಯನ್ನು ಲಗತ್ತಿಸಿದೆ.

## 20) ಲಾಭ ವಿಂಗಡಣೆ

| | |
|---|---|
| ಹಿಂದಿನ ಸಾಲಿನ ಕ್ರೋಢೀಕೃತ ಲಾಭ | ರೂ.1,07,12,315.65 |
| ಲಾಭ ವಿಂಗಡನೆಗೆ ಮಹಾ ಸಭೆಯ ಒಪ್ಪಿಗೆ ಪಡೆಯಲಾಗಿದೆಯೆ? ಅದು ಕ.ಸ.ಸಂಘಗಳ ಕಾ ಯ್ದೆ ಕಲಂ 57 ಹಾಗೂ ಸಂಘದ ಉಪನಿಯಮ ** ರನ್ವಯ ಮಾಡಿಕೊಳ್ಳಲಾಗಿದೆಯೇ? | ದಿ.06-08-2023ರ ಮಹಾಸಭೆಯಲ್ಲಿ ಕ.ಸ. ಸಂಘಗಳ ಕಾಯ್ದೆ ಕಲಂ 57 ಹಾಗೂ ಸಂಘದ ಉಪನಿಯಮ 108 ರನ್ವಯ ಒಪ್ಪಿಗೆ ಪಡೆಯಲಾಗಿದೆ. |
| ಘೋಷಣೆಯಾದ ಲಾಭಾಂಶ ಹಂಚಿಕೆಯಾಗಿದೆಯೆ? | ಹಂಚಿಕೆಯಾಗಿದೆ. |
| ವಿತರಣೆಯಾಗದ ಲಾಭಾಂಶದ ಮೊತ್ತ | ಇರುವುದಿಲ್ಲ. |
| ಮೂರು ವರ್ಷ ಮೀರಿದ ಕ್ರೋಢೀಕೃತ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮವಿರಿಸಲು ಸೂಚಿಸುವುದು. | ಮೂರು ವರ್ಷ ಮೀರಿದ ಕ್ರೂಢೀಕೃತ ಲಾಭಾಂಶವನ್ನು ಉಪನಿಯಮದ ಕ್ರಮ ದಂತೆ ಸರ್ವಸದಸ್ಯರ ಸಭೆಯ ಅನುಮೋದನೆಯೊಂದಿಗೆ ಮೀಸಲು ನಿಧಿಗೆ ವರ್ಗಾಯಿಸಲಾಗುತ್ತಿದೆ. |

## 21) ನಗದು ಶಿಲ್ಕು ಪರಿಶೀಲನೆ:

| | | | |
|---|---|---|---|
| ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು | | ರೂ.24,65,634.00 | |
| ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು | | | |
| **ಪರಿಶೀಲನೆಯ ಕಛೇರಿ** | **ದಿನಾಂಕ** | **ನಗದು(ರೂ)** | **ಹಾಜರ ಪಡಿಸಿದ ಸಿಬ್ಬಂದಿ ಹೆಸರು/ಹುದ್ದೆ** |
| ಮುಖ್ಯ ಕಚೇರಿ | 23–05–2024 | 23,21,846.00 | ಶ್ರೀಮತಿ ಲಕ್ಷ್ಮಿ ಆಶೋಕ್ |
| ಶಾಖೆಗಳು | 24–04–2024 | 4,88,290.00 | ಶ್ರೀ ಎ. ವಿ. ಜನ್ನು |
| ಪರಿಶೀಲಿಸಿದ ನಗದು ನಗದು ಪುಸ್ತಕನೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ? | | ಸ್ಕ್ರೋಲ್ ರೀತ್ಯಾ ತಾಳೆ ಇರುತ್ತದೆ. | |
| ಲೆಕ್ಕ ಪರಿಶೋಧನಾ ಕಾಲಕ್ಕೆ ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಅದನ್ನು ಯಾವ ದಿನಾಂಕದ ವರೆಗೆ ಬರೆಯಲಾಗಿದೆ ಎಂಬುದರ ಬಗ್ಗೆ ವಿವರಣೆ ನೀಡುವುದು. ಹಾಗೂ ನಗದು ಪುಸ್ತಕದಲ್ಲಿ ದಾಖಲಿಸಿ ಹಾಜರಪಡಿಸಿದ ಕೈಶಿಲ್ಕದ ಮೊತ್ತ ನಗದು ಪುಸ್ತಕದಲ್ಲಿ ನಮೂದಿಸುವುದು | | ನಗದು ಪುಸ್ತಕವನ್ನು ತಹಲ್‌ವರೆಗೆ ಬರೆಯಲಾಗಿದೆ. | |
| ಸಂಘದ ಉಪನಿಯಮಗಳಲ್ಲಿ ನಗದು ಶಿಲ್ಕು ಜವಾಬ್ದಾರಿ ಹಾಗೂ ಮಿತಿಯನ್ನು ನಿಗದಿಪಡಿಸಿದ್ದಾರೆಯೆ? ಎಷ್ಟು? ಹಾಗೂ ಯಾರ ಅಭಿರಕ್ಷೆಯಲ್ಲಿ? | | ದಿ.31–3–2024ರ ಸಾಲಾಖೈರಿಗೆ ಪ್ರಧಾನ ಕಛೇರಿಯ ನಗದು ಶಿಲ್ಕು ಹಾಗೆಯೇ ಶಾಖೆಯ ನಗದು ಶಿಲ್ಕನ್ನು ಸಾಲಾಖೈರಿಗೆ ಆಡಳಿತ ಮಂಡಳಿ ಸದಸ್ಯರು ಝುಡ್ತಿ ಮಾಡಿ ದೃಢೀಕರಿಸಿರುತ್ತಾರೆ. ಬ್ಯಾಂಕಿನಲ್ಲಿ ಉಳಿಸಿ ಕೊಳ್ಳಬಹುದಾದ ನಗದು ಶಿಲ್ಕಿನ ಮಿತಿಯನ್ನು ಆಡಳಿತ ಮಂಡಳಿ ನಿರ್ಧರಿಸಿದ್ದು, ದಿ.28–06–2022 ರಂದು ಪ್ರಧಾನ ಕಛೇರಿ ಮತ್ತು ಶಾಖೆಯಲ್ಲಿ ಕ್ರಮ ವಾಗಿ ರೂ.35 ಲಕ್ಷ ಮತ್ತು ರೂ. 10 ಲಕ್ಷ ಅಂತಿಮ ಶಿಲ್ಕು ಉಳಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಈ ಮಿತಿಯಲ್ಲಿ ವ್ಯವಹರಿಸಲು ಸೂಚಿಸಿದೆ. ಪ್ರಧಾನ ಕಛೇರಿಯಲ್ಲಿ ದಿ.23–05–2024 ರಂದು ನಗದು ಶಿಲ್ಕು ರೂ. 23,21,846.00 ಗಳನ್ನು ನಗದು ಗುಮಾಸ್ತರಾದ ಶ್ರೀಮತಿ ಲಕ್ಷ್ಮಿ ಆಶೋಕ್ ಮತ್ತು ಸಹಾಯಕ ಲೆಕ್ಕಿಗರಾದ ಶ್ರೀಮತಿ ಸೌಮ್ಯ ಜಿ. ಎನ್,ರವರು ಹಾಜರುಪಡಿಸಿದ್ದು, ಕ್ಯಾಷಿಯರ್ ಸ್ಕ್ರೋಲ್‌ಗೆ ತಾಳೆ ಇರುತ್ತದೆ ಮತ್ತು ಶಾಖೆಯ ನಗದು ಶಿಲ್ಕು ರೂ. 4,88,290.00 ಗಳನ್ನು ದಿ. 24–04–2024 ರಂದು ಸಾಯಂಕಾಲ ವ್ಯವಹಾರಕ್ಕೆ ಮುಂಚೆ ನಗದು ಗುಮಾಸ್ತರಾದ ಶ್ರೀ ಎ.ವಿ. ಜನ್ನು, ಸಹಾಯಕ ಲೆಕ್ಕಿಗರಾದ ಶ್ರೀ ಎಸ್.ಡಿ. ಬಾಲಸುಬ್ರಮಣ್ಯಂರಾಜು ಹಾಗೂ ಶಾಖಾ ವ್ಯವಸ್ಥಾಪಕರವರು ಪರಿಶೀಲನೆಗೆ ಹಾಜರುಪಡಿಸಿದ್ದು ಸ್ಕ್ರೋಲ್ ರೀತ್ಯಾ ತಾಳೆ ಇರುವುದನ್ನು ದೃಢೀಕರಿಸಿದೆ. | |

| | |
|---|---|
| ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರಿಸಿದ್ದಲ್ಲಿ ವಿವರಣೆ ನೀಡಿ. | ಅನಾವಶ್ಯಕವಾಗಿ ನಗದು ಶಿಲ್ಕು ಮುಂದುವರೆದಿರುವುದು ಕಂಡು ಬಂದಿರುವುದಿಲ್ಲ. |
| ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸಲಾಗಿದೆಯೆ? ವಿವರಣೆ ನೀಡಿ. | ಪ್ರಧಾನ ಕಛೇರಿಯಲ್ಲಿ ನಗದು ಶಿಲ್ಕು ರೂ. 35 ಲಕ್ಷ ಹಾಗೂ ಶಾಖೆಯಲ್ಲಿ ರೂ. 10ಲಕ್ಷ ಉಳಿಸಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ಹಾಗೂ ಸಾಗಾಣಿಕೆಯಲ್ಲಿನ ಶಿಲ್ಕು ರೂ.1 ಕೋಟಿಗಳಿಗೆ ವಿಮೆ ಮಾಡಿಸಿದ್ದು, ವಿಮೆ ಚಾಲ್ತಿಯಲ್ಲಿರುತ್ತದೆ. (ದಿ.21-3-2024 ರಿಂದ 20-3-2025) |
| ನಗದು ಶಿಲ್ಕನ್ನು ಕಾಲಕಾಲಕ್ಕೆ ಅದಿಕೃತರು ಪರೀಕ್ಷಿಸಿದ್ದಾರೆಯೆ? | ಪರೀಕ್ಷಿಸಿದ್ದಾರೆ. |

## (22)ಬ್ಯಾಂಕ್ ಖಾತೆಗಳಲ್ಲಿ ಶಿಲ್ಕು

| ಬ್ಯಾಂಕಿನ ಹೆಸರು | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಸಂಘದ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತರ |
|---|---|---|---|---|
| | ಪಟ್ಟಿಯನ್ನು ಲಗತ್ತಿಸಿದೆ. | | | |

| | |
|---|---|
| ಸಂಘವು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆ ಇದೆಯೇ? ವ್ಯತ್ಯಾಸ ಇದ್ದಲ್ಲಿ ಈ ಕುರಿತು ಸಮನ್ವಯ ಪಟ್ಟಿ ತಯಾರಿಸಿ ತಾಳೆ ನೋಡಲಾಗಿದೆಯೇ? (ಸದರಿ ವ್ಯತ್ಯಾಸದ ವರ್ಷವಾರು ವಿವರ ನೀಡಿ ಸಮನ್ವಯ | ದಿ.31-3-2024ಕ್ಕೆ ವಿವಿಧ ಬ್ಯಾಂಕುಗಳಲ್ಲಿ ಒಟ್ಟು 17 ಖಾತೆಗಳಲ್ಲಿ ರೂ.38,68,63,392.68 ಗಳ ಶಿಲ್ಕು ಹೊಂದಿದ್ದು ಪ್ರಸಕ್ತ ಸಾಲಿನಲ್ಲಿ ಯಾವುದೇ ವ್ಯತ್ಯಾಸ ವಿರುವುದಿಲ್ಲ. ಬ್ಯಾಂಕ್ ಸಮನ್ವಯ ತ:ಖ್ತೆಯನ್ನು ವರದಿಗೆ ಲಗತ್ತಿಸಿದೆ. |
| ಪಟ್ಟಿ ಕಡ್ಡಾಯವಾಗಿ ವರದಿಗೆ ಲಗತ್ತಿಸಿ, ಅದರಲ್ಲಿ ಇರುವ ನ್ಯೂನ್ಯತೆಯ ಕುರಿತು ನಿಖರವಾಗಿ ವಿವರಿಸಿ ಪ್ರಸಕ್ತ ಸಾಲಿನ ನ್ಯೂನ್ಯತೆಗಳನ್ನು ಸರಿಪಡಿಸಿರುವ ಬಗ್ಗೆ ಕಡ್ಡಾಯವಾಗಿ ವಿಮರ್ಷಿಸುವುದು.) | |
| ಸಹಕಾರೇತರ ಬ್ಯಾಂಕುಗಳಲ್ಲಿ ವ್ಯವಹಾರ ನಡೆಸಲು ಸಹಕಾರ ಸಂಘಗಳ ಕಾಯಿದೆ ಕಲಂ 58 (ಇ) ಪ್ರಕಾರ ಮಂಜೂರಾತಿ ಪಡೆದಿದೆಯೇ? | ಮಂಜೂರಾತಿಯನ್ನು ಪಡೆದುಕೊಳ್ಳಲಾಗಿದೆ. |
| ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ | ನಿಷ್ಕ್ರಿಯ ಬ್ಯಾಂಕ್ ಖಾತೆಗಳ ವಿವರ ಪಟ್ಟಿ ಲಗತ್ತಿಸಿದೆ. (1) ಕೋಟಕ್ ಮಹೀಂದ್ರ ಬ್ಯಾಂಕ್ ಚಾಲ್ತಿ ಖಾತೆ 1,23,898.88ರಷ್ಟು ಖಾತೆಯಲ್ಲಿ ಇರುತ್ತದೆ. |
| ವರದಿ ಸಾಲಿನಲ್ಲಿ ಸದರಿ ಖಾತೆಗಳ ಮೇಲೆ ಬಂದಿರುವ ಆದಾಯ | ಬಿಡಿಸಿಸಿ ಬ್ಯಾಂಕ್ ಉಳಿತಾಯ ಖಾತೆ ಬಾಬ್ತು ರೂ.3,053.00 ಗಳ ಬಡ್ಡಿ ಜಮಾ ಬಂದಿದ್ದು, ಉಳಿದ ಎಲ್ಲಾ ಬ್ಯಾಂಕ್ ಖಾತೆಗಳು ಚಾಲ್ತಿ ಖಾತೆಗಳಾಗಿರುವುದರಿಂದ ಬಡ್ಡಿ ಜಮಾ ಬರುವುದಿಲ್ಲ. |

**ಸಮಜಾಯಿಷಿ:** ನಿಷ್ಕ್ರಿಯ ಬ್ಯಾಂಕ್ ಖಾತೆಯನ್ನು ಚುಕ್ತಮಾಡಲಾಗುವುದು. ಬಿಡಿಸಿಸಿ ಬ್ಯಾಂಕ್ ಉಳಿತಾಯ ಖಾತೆ ಆಗಿದ್ದು ಬಡ್ಡಿ ಜಮಾ ಬಂದಿರುತ್ತದೆ. ಉಳಿದ ಎಲ್ಲಾ ಬ್ಯಾಂಕ್ ಖಾತೆಗಳು ಚಾಲ್ತಿ ಖಾತೆಗಳಾಗಿರುವುದರಿಂದ ಬಡ್ಡಿ ನೀಡಲಾಗುವುದಿಲ್ಲ.

**(22)ಹೂಡಿಕೆಗಳು**

**ಷಡ್ಯೂಲ್ ಕೆ ಪ್ರಕಾರ ದಿನಾಂಕ 31-03-2024ಕ್ಕೆ ಸಂಘವು ಹೊಂದಿರುವ ಹೂಡಿಕೆಗಳು ರೂ.79,93,00,399.39**

| | | |
|---|---|---|
| | | ವಿವರಗಳು ಈ ಕೆಳಕಂಡಂತೆ ಇರುತ್ತದೆ<br>**ಕ್ರ ಸಂ** \| **ಹೂಡಿಕೆ ಸ್ವರೂಪ** \| **31.3.2024ಕ್ಕೆ ಮೊಬಲಗು**<br>ಪಟ್ಟಿ ಲಗತ್ತಿಸಿದೆ. |
| | 1) ಹೂಡಿಕೆಗಳ ಖರೀದಿ ಮತ್ತು ಮಾರಾಟದ ಬಗ್ಗೆ ಹೊಂದಿರುವ ಪದ್ಧತಿ, ಅಧಿಕಾರ ಪ್ರತ್ಯಾಯೋಜನೆ ಇತ್ಯಾದಿ ಬಗ್ಗೆ ವರದಿಸುವುದು. | ದಿ.31-3-2024ಕ್ಕೆ ರೂ. 39,36,26,638.00 ಗಳ ಕೇಂದ್ರ ಸರ್ಕಾರದ ಭದ್ರತಾ ಪತ್ರಗಳನ್ನು ಪರಿಪಕ್ವತೆ ಮತ್ತು ವಿಕ್ರಯಕ್ಕಾಗಿ ಇಟ್ಟಿರುವ ವರ್ಗದಲ್ಲಿ ಇಟ್ಟಿದ್ದು, ಖರೀದಿ/ಮಾರಾಟ ಸಂಬಂಧ ಕಾರ್ಯಕಾರಿ ಸಮಿತಿಯು ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಇದನ್ನು ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು ಪಡೆಯಲಾಗುತ್ತದೆ. |
| | 2) ಹೂಡಿಕೆಗಳ ಬಗ್ಗೆ ಹತೋಟಿ, ಕಾಲಕಾಲಕ್ಕೆ ಅವುಗಳ ಪರಿಶೀಲನೆ/ ಲೆಕ್ಕಪತ್ರದೊಂದಿಗೆ ಸಮನ್ವಯ ಗೊಳಿಸುವಿಕೆ ಬಗ್ಗೆ ವಿಮರ್ಷೆ | ಹೂಡಿಕೆಗಳ ಹತೋಟಿ, ಪರಿಶೀಲನೆ ಮತ್ತು ಲೆಕ್ಕಪತ್ರ ಗಳೊಂದಿಗೆ ಸಮನ್ವಯ ಮಾಡಿಕೊಳ್ಳುವ ಅಧಿಕಾರವನ್ನು ವ್ಯವಸ್ಥಾಪಕರಿಗೆ ನೀಡಿದ್ದು, ಅದರಂತೆ ನಿರ್ವಹಿಸಲಾಗಿದೆ. ಹಾಗೂ ಸಮನ್ವಯಗೊಳಿಸಲಾಗಿದೆ. ಹೂಡಿಕೆಗಳನ್ನು ಭೌತಿಕ ವಾಗಿ ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಲಾಗಿದೆ. |
| | 3) ಮೌಲ್ಯ ಮಾಪನ ಮಾದರಿ, ಹಿಂದಿನ ಸಾಲಿಗೆ ಹೋಲಿಸಿದಲ್ಲಿ ಮೌಲ್ಯ ಮಾಪನದಲ್ಲಿ ಆಗಿರುವ ಬದಲಾವಣೆ, ಮೌಲ್ಯದಲ್ಲಿ ಕುಸಿತ ಮತ್ತು ಈ ಸಂಬಂಧ ಕಲ್ಪಿಸಿರುವ ಅವಕಾಶಗಳ ಬಗ್ಗೆ ವಿಮರ್ಷೆ | ಮೌಲ್ಯಮಾಪನವು ಫಿಮ್ಡಾ (FIMMADA) ವರದಿಯನ್ನು ಆಧರಿಸಿದೆ. |
| | 4) SGL/BRS ಪದ್ಧತಿ, ಸಾಲಾಂತ್ಯಕ್ಕೆ ಇರವ SGL/BRS ಮೇಲಿನ ಹತೋಟಿ ಹಾಗೂ ನಂತರದಲ್ಲಿ ಅವುಗಳ ತೀರಿಕೆ. | ಸರ್ಕಾರಿ ಭದ್ರತಾ ಪತ್ರಗಳ ಹೂಡಿಕೆಗಳನ್ನು ವಿದ್ಯುನ್ಮಾನ ಲೆಕ್ಕ ಖಾತೆ (ಡಿ.ಮ್ಯಾಟ್) ರೂಪದಲ್ಲಿ (ಸಿ.ಎಸ್.ಬಿ.ಜಿ -ಡಿ.ಎಫ್. ಹೆಚ್.ಸಿ) ಬೆಂಗಳೂರು ಹೆಚ್.ಡಿ.ಎಫ್.ಸಿ. ಎಸ್.ಜಿ.ಎಲ್. ಲೆಕ್ಕದ ಮುಖಾಂತರ ನಿರ್ವಹಿಸಲಾಗುತ್ತಿದೆ. ವರ್ಷಾಂತ್ಯಕ್ಕೆ ಮೇಲ್ಕಂಡ ಸಂಸ್ಥೆಯವರು ನೀಡಿರುವ ದೃಢೀಕರಣಕ್ಕೆ ತಾಳೆ ಇರುತ್ತದೆ. ವರದಿ ಸಾಲಿಗೆ ಹೂಡಿಕೆಗಳ ಮೇಲೆ ಲಾಭ ಬಂದಿರುತ್ತದೆ. |

| | | |
|---|---|---|
| 23. ಎ | **ಮೀಸಲು ನಿಧಿಗಳು ಮತ್ತು ಹೂಡಿಕೆಗಳ ಬಗ್ಗೆ ವ್ಯಾಖ್ಯಾನ:** | |
| | 1) ನಿಧಿಗಳ ಸಮಂಜಸತೆಯ ಮತ್ತು ಅವುಗಳ ಸಮರ್ಪಕ ಬಳಕೆಯ ಬಗ್ಗೆ. | ಆಪದ್ಧನ ನಿಧಿಯು ದಿ.31-3-2024ಕ್ಕೆ ರೂ. 5,55,50,000.00 ಗಳಿದ್ದು, ಅದನ್ನು ಅಪೆಕ್ಸ್ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯಾಗಿ ಇಡಲಾಗಿದೆ. ವರದಿ ಸಾಲಿನಲ್ಲಿ ಯಾವುದೇ ಪಾವತಿ ಆಗಿರುವುದಿಲ್ಲ. |
| | 2) SLR ಹೂಡಿಕೆಗಳನ್ನು AFS, HTM ಮತ್ತು HFT ಗಳೆಂದು ಪ್ರತ್ಯೇಕಿಸಲಾಗಿದೆಯೇ? | ಪ್ರತ್ಯೇಕಿಸಲಾಗಿದೆ. |
| | 3) ರೂ.100 ಕೋಟಿ ಮೀರಿ ಠೇವಣಿ ಹೊಂದಿದ್ದಲ್ಲಿ, ಬ್ಯಾಂಕು ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿದೆಯೇ? | ಬ್ಯಾಂಕ್ ಹೂಡಿಕೆಗಳ ಏರಿಳಿತ ಮೀಸಲು ನಿಧಿಯನ್ನು ನಿರ್ವಹಿಸಿರುತ್ತದೆ. |

| | |
|---|---|
| ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ? | ತಾಳೆಯಾಗಿರುತ್ತದೆ. |
| ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ? | ರಚಿಸಿದೆ. |
| ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೆ? | ಅನುಗುಣವಾಗಿದೆ. |
| ಸದರಿ ಹೂಡಿಕೆಗಳು ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ? | ಜಮಾ ಆಗಿರುತ್ತದೆ. |
| ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ | ಹೂಡಿಕೆಗಳ ನಿರ್ವಹಣೆಗಳು ನಿಯಮಾನು ಸಾರ ನಡೆದಿದ್ದು ಸಮಂಜಸವಾಗಿದೆ. |

**(24) ಸದಸ್ಯರ ಸಾಲ ಮತ್ತು ಮುಂಗಡಗಳು :**

| | | | |
|---|---|---|---|
| | ಎ | **ಸಾಲಗಳ ಮೌಲ್ಯಾಂಕನ (Credit Appraisal)** ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಒಬ್ಬ ಸದಸ್ಯನು ಎಲ್ಲ ರೀತಿಯ ಪಡೆಯ ಬಹುದಾದ ಒಟ್ಟು ಸಾಲದ ಮಿತಿಯ ಬಗ್ಗೆ ಹಾಗೂ ಇಂತಹ ರಿಜಿಸ್ಟರ ಸಂಘದಲ್ಲಿ ಬರೆದಿಟ್ಟಿರುವುದ ಬಗ್ಗೆ ವಿಮರ್ಶೆ. | ಬ್ಯಾಂಕಿನ ಉಪನಿಯಮದ ರೀತ್ಯಾ ಸದಸ್ಯರಿಗೆ ವಿವಿಧ ರೀತಿಯ ಸಾಲಗಳನ್ನು ನೀಡುತ್ತಿದ್ದು, ಸಾಲಗಳ ಮೌಲ್ಯಾಂಕನಕ್ಕಾಗಿ ಉತ್ತಮ ಪದ್ಧತಿಯನ್ನು ಹೊಂದಲಾಗಿದೆ. ಹಾಗೂ ಸಾಲಗಾರರು ಸಾಲ ಪಡೆಯುವ ಅರ್ಹತೆಯನ್ನು ಹೊಂದಿರುವುದನ್ನು ನಿರ್ಧರಿಸುವುದಕ್ಕೆ ಸಾಕಷ್ಟು ಅಂಕಿ ಅಂಶಗಳನ್ನು / ಮಾಹಿತಿಗಳನ್ನು ಹೊಂದ ಲಾಗಿದೆ ಮತ್ತು ಅವುಗಳನ್ನು ಪಾಲಿಸ ಲಾಗುತ್ತಿದೆ. ಒಬ್ಬ ಸದಸ್ಯನು ಎಲ್ಲಾ ರೀತಿಯ ಪಡೆಯಬಹುದಾದ ಸಾಲ ಮಿತಿಯನ್ನು ಉಪನಿಯಮಗಳ ನಿರ್ದೇಶನ ದಂತೆ ಪಾಲಿಸಲಾಗುತ್ತಿದೆ. ಅಡಕ 2 ರಲ್ಲಿ ವಿವರಿಸಲಾಗಿದೆ. |

| | | |
|---|---|---|
| ಬಿ | **ಸಾಲ ಮಂಜೂರಾತಿ/ ವಿತರಣೆ** | |
| | ಅಧಿಕಾರ ಪ್ರತ್ಯಾಯೋಜನೆ/ ಪ್ರಾಧಿಕಾರದ ವಿವಿಧ ಹಂತಗಳು (authority at various levels) ಪ್ರಾಧಿಕಾರದ ಮಿತಿ ಹಾಗೂ ಸಾಲ ಮಂಜೂರಾತಿಯ ನಿಬಂಧನೆಗಳ ಪಾಲನೆಯ ನಂತರ ಸಾಲವನ್ನು ವಿತರಿಸಲಾಗಿದೆಯೇ? | ಠೇವಣಿಗಳ ಮೇಲಿನ ಸಾಲವನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿಯು/ವ್ಯವಸ್ಥಾಪಕರು ಮಂಜೂರು ಮಾಡುತ್ತಾರೆ. ಉಳಿದ ಎಲ್ಲಾ ಸಾಲಗಳನ್ನು ಸಾಲ ಉಪಸಮಿತಿ ನಿರ್ಧಾರ ಮಾಡುತ್ತದೆ. ನಂತರ ಆಡಳಿತ ಮಂಡಳಿಯ ಅನುಮೋದನೆಯನ್ನು ಪಡೆಯಲಾಗುತ್ತಿದೆ. |
| ಸಿ | **ದಾಖಲೀಕರಣ ಸಂಗ್ರಹಣೆ (Documentation)** | |
| | ಸಾಲ ಮಂಜೂರಾತಿ ಆದೇಶಗಳಲ್ಲಿನ ನಿಬಂಧನೆಗಳಂತೆ ದಾಖಲೆಗಳನ್ನು ಪಡೆದಿರುವುದನ್ನು ಖಚಿತಪಡಿಸಿ ಕೊಳ್ಳುವುದು, ದಾಖಲೆಗಳ ಸ್ವರೂಪ, ಈ ಸಂಬಂಧ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ನ್ಯೂನತೆಗಳು ಹಾಗೂ ಇವುಗಳ ನಿವಾರಣೆಗೆ ಸಲಹೆಗಳು. ಜಂಟಿ/ ಸಹಕಾರ ಕೂಟ ಸಾಲಗಳ ದಾಖಲೆಗಳ ಸಂಗ್ರಹಣೆಯ ಪದ್ಧತಿ. (documentation of consortium advances) | ಸದಸ್ಯರಿಗೆ ಎಲ್ಲಾ ರೀತಿಯ ಸಾಲಗಳನ್ನು ನಿಗಧಿಪಡಿಸಿದ ಆಧಾರ ಪತ್ರಗಳನ್ನು ಪರಿಶೀಲಿಸಿ ದೃಢೀಕರಿಸಿಕೊಂಡು, ನಿಯಮಾನುಸಾರ ಸಾಲಗಳನ್ನು ನೀಡಲಾಗುತ್ತಿದ್ದು ಲೆಕ್ಕಪರಿಶೋಧನಾ ವೇಳೆಯಲ್ಲಿ ಪರಿಶೀಲಿಸಲಾಗಿದೆ ಬ್ಯಾಂಕ್ ಸ್ವತಂತ್ರವಾಗಿ ಕಾರ್ಯಕಾರಿ ಮಂಡಳಿ ಆಡಳಿತದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಸಾಲ ನೀಡುವಿಕೆಯಲ್ಲಿ ಸದರಿ ಉಪಸಮಿತಿಗಳ ಅನುಮೋದನೆಯೊಂದಿಗೆ ಸಾಲ ನೀಡಲಾಗುತ್ತಿದೆ . |
| ಡಿ | **ದಾಖಲೆಗಳ ನವೀಕರಣ/ಪುನರ್ ಪರಿಶೀಲನೆ/ ಮುನ್ನೆಚ್ಚರಿಕೆ/ ಮೇಲ್ವಿಚಾರಣೆ:** | |
| 1 | ಸಾಲಗಳ ಬಾಕಿಗಳ ನಿಯತಕಾಲಿಕ ದೃಢೀಕರಣ | ವರ್ಷಾಂತ್ಯಕ್ಕೆ ಲೆಕ್ಕಪರಿಶೋಧನಾ ವೇಳೆಯಲ್ಲಿ 15 ಜನ ವಿವಿಧ ಸಾಲಗಾರರಿಂದ ವೈಯಕ್ತಿಕ ಸಾಲ ಪರಿಶೀಲನಾ ದೃಢೀಕರಣ ಪತ್ರವನ್ನು ಪ್ರತ್ಯೇಕವಾಗಿ ಪಡೆಯಲಾಗಿರುತ್ತದೆ. |
| 2 | ಸಾಲಗಾರರಿಂದ ದಾಸ್ತಾನಿನ ಬಗ್ಗೆ ನಿಯತ ಮಾಹಿತಿ, ಅವರ ಆಸ್ತಿ-ಜವಾಬ್ದಾರಿಗಳ ಬಗ್ಗೆ ಮಾಹಿತಿ ಸ್ವೀಕೃತಿ ಯಾಗುತ್ತಿರುವ ಬಗ್ಗೆ. | ದಾಸ್ತಾನು ಸಾಲ ಯಾವುದೂ ಇರುವುದಿಲ್ಲ. ಆಸ್ತಿ-ಜವಾಬ್ದಾರಿ ಪಟ್ಟಿ, ಲಾಭ-ನಷ್ಟ ತ:ಖ್ತೆಗಳನ್ನು ನಿಯತಕಾಲಿಕವಾಗಿ ಪಡೆಯಲಾಗುತ್ತಿಲ್ಲ. |
| 3 | ರೂ.10 ಲಕ್ಷಗಳಿಗಿಂತ ಹೆಚ್ಚಿನ ಸಾಲ ಪಡೆದ ಸಾಲಗಾರರಿಂದ ಪರಿಶೋಧನೆಯಾದ ಲೆಕ್ಕಗಳನ್ನು (Audited Accounts) ಪಡೆದಿರುವ ಬಗ್ಗೆ. | ಆಡಿಟೆಡ್ ದಾಖಲೆಗಳನ್ನು ಅವರಿಂದ ಪಡೆಯಲಾಗಿದೆ. |
| 4 | ಈ ಮೇಲಿನ ಮಾಹಿತಿಗಳನ್ನು ಪಡೆಯುವ ಬಗ್ಗೆ ಅನುಸರಿಸಿರುವ ಪದ್ಧತಿ ಹಾಗೂ ಇದರ ಹಿಂಬಾಲಿಕೆ (Follow-up) ಮತ್ತು ಸಂರಕ್ಷಣೆ ಬಗ್ಗೆ. | ಮೇಲ್ಕಂಡವುಗಳ ಬಗ್ಗೆ ವ್ಯವಸ್ಥೆಯನ್ನು ಬ್ಯಾಂಕಿನಲ್ಲಿ ಉತ್ತಮಗೊಳಿಸಲು ಸೂಚಿಸಿದೆ. |
| 5 | ದಾಸ್ತಾನು, ಉಪಕರಣಗಳು, ಯಂತ್ರೋಪಕರಣ ಹಾಗೂ ಇತರೆ ಭದ್ರತೆಗಳ ಕಾಲಕಾಲದ ಭೌತಿಕ ಪರಿಶೀಲನೆ ಮತ್ತು ತನಿಖಾ ಪದ್ಧತಿಯ ಬಗ್ಗೆ. | ಸಾಲಗಳಿಗೆ ಆಧಾರ ಮಾಡಿದ ವಾಹನಗಳ ಬಗ್ಗೆ ಕಾಲಕಾಲಕ್ಕೆ ನಿಯಮಿತವಾಗಿ ಪರಿಶೀಲಿಸುವ ಪದ್ಧತಿ ನಡೆಯುತ್ತಿದೆ. |

| | | |
|---|---|---|
| 6 | ತನಿಖಾ ವರದಿಗಳು ಹಾಗೂ ಅವುಗಳ ಪಾಲನೆ ಬಗ್ಗೆ | 2023–24ನೇ ಸಾಲಿನಲ್ಲಿ ಆರ್.ಬಿ.ಐ. ವರದಿ ಪರಿಶೀಲನೆಗೆ ಹಾಜರುಪಡಿಸಿದ್ದು, ಅನು ಪಾಲನಾ ವರದಿಯನ್ನು 14.12.2023 ರಂದು ಸಲ್ಲಿಸಲಾಗಿದೆ. |
| 7 | ರಿಸರ್ವ್ ಬ್ಯಾಂಕ್‌ನ ಮಾರ್ಗ ಸೂಚಿಗಳನ್ವಯ ಸಾಲಗಳ ಸ್ವಾಸ್ಥ್ಯದ ಸಂಹಿತೆಯ ನಿಗದಿಪಡಿಸುವಿಕೆಯ ಬಗ್ಗೆ (Allotment Health Code of RBI) | ಈ ವ್ಯವಸ್ಥೆ ಚಾಲ್ತಿಯಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. |
| 8 | ಹೆಚ್ಚಿಸಿದ ಸಾಲದ ಮಿತಿಗಳ ವಿಸ್ತರಣೆಯನ್ನೊಳ ಗೊಂಡಂತೆ ಸಾಲಗಳ ವಿಮರ್ಶೆ, ಸಾಲದ ಸ್ವಾಸ್ಥ್ಯದ ಸಂಹಿತೆಯ ವರ್ಗೀಕರಣ ಇತ್ಯಾದಿ. | ಇರುವುದಿಲ್ಲ. |
| 9 | ಸೌಲಭ್ಯಗಳ ನವೀಕರಣ | ಇರುವುದಿಲ್ಲ. |
| 10 | ಕೈಗಾರಿಕೆಗಳನ್ವಯ, ಸಾಲದ ಅವಧಿಯನ್ವಯ ಸಾಲದ ಪರಿಪಕ್ವತೆಯನ್ವಯ ಸಾಲಗಳ ಸಮಗ್ರ ಮೇಲ್ವಿಚಾರಣೆ ಬಗ್ಗೆ. | ಸಮಗ್ರ ಮೇಲ್ವಿಚಾರಣೆ ಕಾಲಕಾಲಕ್ಕೆ ನಡೆಯುತ್ತಿದೆ. |

| | | | |
|---|---|---|---|
| | ಇ | **<u>ಕರಡು ಮತ್ತು ಸಂಶಯಾಸ್ಪದ ಸಾಲಗಳು:</u>** | |
| | 1 | ಕರಡು ಮತ್ತು ಸಂಶಯಾಸ್ಪದ ಸಾಲಗಳ ಮಾಹಿತಿಗಳನ್ನು ಕಲೆ ಹಾಕುವಲ್ಲಿ ಅಳವಡಿಸಲಾದ ಪರಿಣಾಮಕಾರಿ ಪದ್ಧತಿ ಮತ್ತು ಅವಕಾಶ ಕಲ್ಪಿಸುವಲ್ಲಿನ ಕೊರತೆಯ ಬಗ್ಗೆ: | ನಿಯಮಾನುಸಾರ ಅವಕಾಶ ಕಲ್ಪಿಸಲಾಗಿದೆ. |
| | 2 | ಕರಡು ಮತ್ತು ಸಂಶಯಾಸ್ಪದ ಸಾಲಗಳ ಗುರುತಿಸುವಿಕೆ, ಪ್ರಮಾಣ ಹಾಗೂ ಅವಶ್ಯಕ ಪ್ರಮಾಣದ ಅವಕಾಶ ಕಲ್ಪಿಸುವಿಕೆ | ಕರಡು ಮತ್ತು ಅನುಮಾನಾಸ್ಪದ ಸಾಲಗಳನ್ನು ಸರಿಯಾಗಿ ಗುರುತಿಸಿ ಅವಕಾಶ ಕಲ್ಪಿಸಲಾಗಿದೆ. |
| | 3 | ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಹಾಗೂ ಅದರ ಪಾಲನೆ ಬಗ್ಗೆ. | ಕರಡು ಸಾಲದ ಮೇಲಿನ ಬಡ್ಡಿಯನ್ನು ಸಾಲಕ್ಕೆ ಸೇರಿಸುವ ಕ್ರಮವನ್ನು ಕೈಬಿಡುವ ಕ್ರಮವಿದೆ. ಹಾಗೂ ಅದು ಪಾಲನೆ ಆಗುತ್ತಿದೆ. |
| | 4 | ಭದ್ರತೆಗಳ ವಸೂಲಾಗಬಲ್ಲ ಮೌಲ್ಯಗಳನ್ನು ತಿಳಿದು ಕೊಳ್ಳುವುದು, ಜಾಮೀನುದಾರರಿಂದ ವಸೂಲಾಗತಕ್ಕ ಸಾಧ್ಯತೆಗಳು ಪುನ:ಸೃಷ್ಟೀಕರಣದ(Rehabilitation) ಕಾರ್ಯಕ್ರಮದ ಫಲಪ್ರದತೆಯ ಮೌಲ್ಯಮಾಪನ DICGC/ECGC ಯನ್ನೊಳಗೊಂಡಂತೆ. | ಯಾವುದೇ ಪ್ರಕರಣಗಳು ಇರುವುದಿಲ್ಲ. |
| | 5 | ಉಚಿತ ಪ್ರಾಧಿಕಾರದಡಿ ಮಾಡುವ ಮನ್ನಾ/ ಕಲ್ಪಿಸಲಾದ ಅವಕಾಶಗಳು | ಯಾವುದೇ ಪ್ರಕರಣಗಳು ಇರುವುದಿಲ್ಲ. |
| | 6 | ಸಾಲ ವಸೂಲಾತಿಯ ಕಾರ್ಯವಿಧಾನ, ದಾವಾ ಹಾಗೂ ಡಿಕ್ರಿ ಪ್ರಕರಣಗಳನ್ನೊಳಗೊಂಡಂತೆ. | ಸಾಲ ವಸೂಲಾತಿ ಕಾರ್ಯವಿಧಾನ ಕಾನೂನಿನಂತೆ ನಿರ್ವಹಿಸಲಾಗುತ್ತಿದೆ. |

| | | | |
|---|---|---|---|
| | ಎಫ್ | **ದೊಡ್ಡ ಪ್ರಮಾಣ ಸಾಲ/ ಮುಂಗಡಗಳು:** ಈ ಸಾಲಗಳಲ್ಲಿ ಆಡಳಿತ ಮಂಡಳಿಯ ಗಮನ ಸೆಳೆಯ ಬಹುದಾದ ಮಹತ್ವದ, ಪ್ರತಿಕೂಲ ಸ್ವರೂಪದ ಪರಿಣಾಮಗಳ ಬಗ್ಗೆ ವಿಮರ್ಶೆ. | ಅಂತಹ ಪ್ರಕರಣ ಯಾವುದೂ ಇರುವುದಿಲ್ಲ. |
| | ಜಿ | **ಸದಸ್ಯರ ಸಾಲ ಮತ್ತು ಮುಂಗಡಗಳು** ಬ್ಯಾಂಕಿನ ಉಪ ನಿಯಮಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲ, ಸಾಲಗಳ ಮಿತಿ, ಸಾಲಗಳ ಅವಧಿ ಬಗ್ಗೆ ವಿಮರ್ಶೆ. | ಕ್ರ ಸಂ / ಸಾದ ಸ್ವರೂಪ / ಉಪ ನಿಯಮ / ಸಾಲದ ಗರಿಷ್ಠ ಮಿತಿ<br>ಆರ್.ಬಿ.ಐ. ನಿರ್ದೇಶನದ ಪ್ರಕಾರ ಗರಿಷ್ಠ ಸಾಲದ ಮಿತಿಯನ್ನು ನಿರ್ಧರಿಸಲಾಗುತ್ತದೆ. |
| | 2 | ವರದಿ ಸಾಲಿನಲ್ಲಿ ಆದ ಪ್ರತಿಯೊಂದು ಸಾಲದ ವ್ಯವಹಾರಗಳ ಬಗ್ಗೆ ಅಂಕಿ ಅಂಶಗಳ ವಿವರ ನೀಡುವುದು. | ಪಟ್ಟಿಯನ್ನು ಲಗತ್ತಿಸಿದೆ. (ಅನುಬಂಧ) |

| ಸಾಲಗಳ ಸ್ವರೂಪ: | ಆರಂಭದ ಬಾಕಿ | ಪ್ರಸಕ್ತ ಸಾಲಿನಲ್ಲಿ ಹಂಚಿದ ಸಾಲ | ಪ್ರಸಕ್ತ ಸಾಲಿನಲ್ಲಿ ವಸೂಲಿಸಿದ ಸಾಲ | ವರ್ಷಾಂತ್ಯಕ್ಕೆ ಬಾಕಿ | ಯಾದಿಯ ಮೊತ್ತ | ಅಂತರ |
|---|---|---|---|---|---|---|
| ಜಾಮೀನು ಸಾಲ | | | | | | |
| ಹೈಪೋಥಿಕೇಶನ ಸಾಲ | | | | | | |
| ಮಾರ್ಟಗೇಜ್ ಸಾಲ | | | | | | |
| ಠೇವಣಿ ಆಧಾರ ಸಾಲ | | ಪಟ್ಟಿಯನ್ನು ಲಗತ್ತಿಸಿದೆ | | | | |
| ನಗದು ಪತ್ತಿನ ಸಾಲ | | | | | | |
| ಚಿನ್ನಾಭರಣ ಆಧಾರ ಸಾಲ | | | | | | |
| **ಒಟ್ಟು ರೂ** | | | | | | |

| | | | | |
|---|---|---|---|---|
| | 3 | ವರ್ಷಾಂತ್ಯಕ್ಕೆ ಬಾಕಿ ಇದ್ದ ಸಾಲಗಳನ್ನು ಹಿಂದಿನ ಸಾಲಿನ ಅವಧಿಗೆ ಹೋಲಿಸಿ ಹೆಚ್ಚು / ಕಡಿಮೆ ಆದ ಬಗ್ಗೆ ವಿಮರ್ಶೆ. | **2022-2023**<br>ರೂ.1,00,05,13,235.51<br>ಶೇ.5.37 ಕಡಿಮೆ | **2023-2024**<br>ರೂ.1,02,55,86,623.63<br>ಶೇ.2.44 ಹೆಚ್ಚು |
| | 4 | ಆಡಳಿತ ಮಂಡಳಿಯವರು ಪಡೆದಿರುವ ಸಾಲ ಸುಸ್ತಿ / ಚಾಲ್ತಿಯಲ್ಲಿರುವ ಬಗ್ಗೆ. | ಪಟ್ಟಿಯನ್ನು ಲಗತ್ತಿಸಿದೆ. | |
| | | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಕ್ರಮ ಕೈಗೊಳ್ಳಲಾಗಿದೆ. | |

| | | |
|---|---|---|
| 5 | ಸಾಲದ ಕುಳುವಾರು ತ:ಖ್ತೆಗಳು ಆಸ್ತಿ ಜವಾಬ್ದಾರಿ ತ:ಖ್ತೆಗೆ ತಾಳೆ ಇರುವ ಬಗ್ಗೆ.<br>ಕ್ರ.ಸಂ \| ಸಾಲದ ಸ್ವರೂಪ \| ವರ್ಷಾಂತ್ಯದ ಬಾಕಿ \| ಯಾದಿಯ ಮೊತ್ತ \| ಅಂತರ | ಸಾಲದ ಕುಳುವಾರು ತ:ಖ್ತೆಗಳು ಆಸ್ತಿ – ಜವಾಬ್ದಾರಿ ತ:ಖ್ತೆಗೆ ತಾಳೆ ಇದ್ದು ಕುಳುವಾರು ಪಟ್ಟಿ ಲಗತ್ತಿಸಿದೆ. |
| 6 | ಮುದ್ದತ್ತು ಮೀರಿದ ಮತ್ತು ಮುದ್ದತ್ತು ಮೀರುವ ಅವಧಿ ಪೂರ್ವದಲ್ಲಿಯೇ ಸಾಲಗಳನ್ನು ನವೀಕರಿಸ ಲಾಗುತ್ತಿದೆಯೇ? ಈ ರೀತಿ ನವೀಕರಿಸುವುದಕ್ಕೆ ಬೈಲಾದಲ್ಲಿ ಅವಕಾಶ ವಿರುವುದೋ? | ಅಂತಹ ಪ್ರಕರಣಗಳು ಇರುವುದಿಲ್ಲ. |
| 7 | ವರದಿ ಸಾಲಿನಲ್ಲಿ ಒಟ್ಟು ನವೀಕರಿಸಿದ ಸಾಲದ ಪ್ರಕರಣಗಳು ಮತ್ತು ಮೊತ್ತ. | ಅನ್ವಯಿಸುವುದಿಲ್ಲ. |
| 8 | ಹಿಂದಿನ ಸಾಲದ ಬಾಕಿ ಮತ್ತು ಬಡ್ಡಿಯನ್ನು ಜಮಾ ಹಿಡಿದ ಅಷ್ಟೇ ಮೊತ್ತಕ್ಕೆ ಹೊಸ ಸಾಲ ಎಂದು ಖರ್ಚು ಹಾಕಿರುವ ಪ್ರಕರಣಗಳಿರುತ್ತಿವೆಯೇ ವಿವರಿಸಿ. | ಅಂತಹ ಪ್ರಕರಣಗಳು ಇರುವುದಿಲ್ಲ. |
| 9 | ಹಳೇ ಸಾಲದ ಬಾಕಿಗಿಂತ ಹೆಚ್ಚುವರಿ ಸಾಲ ಮಂಜೂರಿ ಮಾಡಿ ಹಳೇ ಸಾಲದ ಬಾಕಿ ಜಮೆ ಪಡೆದಿರುವ ಪ್ರಕರಣಗಳಿದ್ದಲ್ಲಿ ವಿಮರ್ಶಿಸಿ. | ಅಂತಹ ಪ್ರಕರಣಗಳು ಇರುವುದಿಲ್ಲ. |
| 10 | ಬಂಗಾರ ಅಡುವಿನ ಸಾಲ ನೀಡಿದಲ್ಲಿ ಸಂಸ್ಥೆಯಲ್ಲಿಯ ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಿಸಿರುವ ಮೊತ್ತ. | ಅಡವಿನ ಬಂಗಾರದ ಆಭರಣದ ಬಗ್ಗೆ ಭದ್ರತೆ ಹಾಗೂ ವಿಮೆ ಮಾಡಲಾಗಿದೆ. |
| 11 | ಆಧಾರ ಮತ್ತು ಆಧಾರ ರಹಿತ ಸಾಲಗಳ ಪ್ರಮಾಣವನ್ನು ವಿಶ್ಲೇಷಿಸುವುದು.<br>ದಿ.31–03–2024ಕ್ಕೆ ಒಟ್ಟು ರೂ.1,02,55,86,623.63ಸಾಲಗಳಿದ್ದು ಇದರಲ್ಲಿ ರೂ.1,00,67,58,715.11ಗಳ ಆಧಾರ ಸಾಲ ಹಾಗೂ 1,88,27,908.52 ರೂ.ಗಳ ಆಧಾರ ರಹಿತ ಸಾಲಗಳನ್ನು ನೀಡಲಾಗಿದೆ. ಇದು ಶೇ.98.16 ಹಾಗೂ ಶೇ.1.84 ಗಳಾಗಿರುತ್ತದೆ. | |
| 12 | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘ ಸಂಸ್ಥೆಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಾಲಾತಿಗಳಲ್ಲಿರುವ ನ್ಯೂನ್ಯತೇಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಯಾವುದೇ ಗುರುತರ ನ್ಯೂನ್ಯತೆಗಳು ಕಂಡುಬಂದಿಲ್ಲ. |
| 13 | ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಉಲ್ಲೇಖಿಸುವುದು. | ಪರಿಶೀಲಿಸಿದ್ದು ತಾಳೆ ಇರುತ್ತದೆ. |
| 14 | ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು. | ಒಟ್ಟು ಸದಸ್ಯರ ಸಂಖ್ಯೆಗೆ ಬ್ಯಾಂಕಿನ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡವಾರು ಸಂಖ್ಯೆಯ ಶೇ.11.45 |
| 15 | ರೂ.20,000ಕ್ಕಿಂತ ಹೆಚ್ಚಿನ ಸಾಲದ ಮೊತ್ತಗಳನ್ನು ನಗದು ಪಾವತಿಸಿದ್ದಲ್ಲಿ ಉದಾಹರಣೆಯೊಂದಿಗೆ ವಿವರಿಸುವುದು. | ಅಂತಹ ಪ್ರಕರಣಗಳು ಇರುವುದಿಲ್ಲ. |

| | | | |
|---|---|---|---|
| | 16 | ಬ್ಯಾಂಕಿನಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಶಿಸುವುದು. | ವಿವರಗಳು ವರದಿಗೆ ಲಗತ್ತಿಸಿದೆ. |
| | 17 | ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಬಗ್ಗೆ ವಿವರಿಸುವುದು. | ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮ ದಂತೆ ಕರಡು ಮತ್ತು ಸಂಶಯಾತ್ಮಕ ಸಾಲಗಳ ಬಗ್ಗೆ ವರ್ಗೀಕರಿಸಲಾಗಿದೆ . ಹಾಗೂ ನಿಯಮಾನುಸಾರ ಇವುಗಳ ಬಾಬ್ತು ಆಸ್ತಿ ಜವಾಬ್ದಾರಿಯಲ್ಲಿ ಕಾಯ್ದಿರಿಸಿದೆ. |
| | 18 | ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿ ಇರುವುದೋ? | ಸಂಶಯಾತ್ಮಕ ಮತ್ತು ಮುಳುಗುವ ಸಾಲದ ಮೊತ್ತದ ಅನುಗುಣವಾಗಿ ಸಂಶಯಾತ್ಮಕ ಮತ್ತು ಮುಳುಗುವ ಸಾಲದ ನಿಧಿಯನ್ನು ಕ್ರೂಢೀಕರಿಸಿಕೊಳ್ಳಲಾಗಿದೆ. |
| | 19 | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳ ಅರ್ಜಿಗಳನ್ನು ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. ಅದರಂತೆ ಸಂಘ ಸಂಸ್ಥೆ ಗಳಿಗೆ ನೀಡಿರುವ ಸಾಲಗಳ ಕುರಿತು ಪಡೆದಿರುವ ದಾಖಾಲಾತಿಗಳಲ್ಲಿರುವ ನ್ಯೂನ್ಯತೇಗಳ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಯಾವುದೂ ಇರುವುದಿಲ್ಲ. |
| | 20 | ಲೆಕ್ಕ ಪರಿಶೋಧನಾ ಸೂಚನೆ (Audit Instruction No 1) ಸಂಖ್ಯೆ ಸಿಎಡಿ/ಎಎಫ್‌ಆರ್-1/ಎ.1,81-82 ದಿನಾಂಕ: 04-07-1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕ ಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದ ಬಗ್ಗೆ ವಿಮರ್ಷಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು. | ಸಾಲಗಾರರ ಪಟ್ಟಿಯನ್ನು ಲಗತ್ತಿಸಿದೆ. |
| **25** | 1 | **ಸುಸ್ತಿ ಸಾಲಗಳ ವಿವರ** ಸುಸ್ತಿ ಸಾಲದ ಮೊತ್ತ | ವಿವರ ಪಟ್ಟಿಯನ್ನು ವರದಿಗೆ ಲಗತ್ತಿಸಿದೆ. |
| | 2 | ಡಿ.ಸಿ.ಬಿ. ರಿಜಿಸ್ಟರ್ ಇಟ್ಟ ಬಗ್ಗೆ ಒಟ್ಟು ಸಾಲಕ್ಕೆ ಸುತ್ತಿ ಸಾಲದ ಶೇಕಡ | ಡಿ.ಸಿ.ಬಿ. ರಿಜಿಸ್ಟರ್‌ನ್ನು ಗಣಕೀಕೃತಗೊಳಿಸಿ ನಿರ್ವಹಿಸಿದೆ. |
| | 3 | ವರ್ಷಾವಾರು, ಸಾಲಾವಾರು ಸುಸ್ತಿ ಸಾಲದ ವಿವರ | |

| ಕ್ರ | ಅವಧಿ | ಸ್ಥಿರಾಸ್ತಿ ಸಾಲ | ಮಧ್ಯ ಮಾವಧಿ ಸಾಲ | ವಾಹನ ಸಾಲ | ಗೃಹ ಜ್ಯೋತಿ ಸಾಲ | ಒತ್ತೆ ಸಾಲ | ಮೀರೆಳೆತ ಸಾಲ (ಓ.ಡಿ) |
|---|---|---|---|---|---|---|---|
| 1 | ಒಂದು ವರ್ಷದೊಳಗೆ | | | | | | |
| 2 | 1 ರಿಂದ 2 ವರ್ಷದೊಳಗೆ | | | | | | |
| 3 | 2 ರಿಂದ 3 ವರ್ಷದೊಳಗೆ | | ವಿವರದ ಪಟ್ಟಿ ಲಗತ್ತಿಸಿದೆ. | | | | |
| 4 | 3 ರಿಂದ 4 ವರ್ಷದೊಳಗೆ | | | | | | |
| 5 | 4 ರಿಂದ 5 ವರ್ಷದೊಳಗೆ | | | | | | |
| 6 | 5 ರಿಂದ 6 ವರ್ಷದೊಳಗೆ | | | | | | |
| 7 | 6 ವರ್ಷ ಮೇಲ್ಪಟ್ಟ | | | | | | |
| | **ಒಟ್ಟು ರೂ.** | | | | | | |

| | | |
|---|---|---|
| 4 | ಸುಸ್ತಿ ಸಾಲದ ಪೈಕಿ ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ. | ಸಾಲದ ಸಂಖ್ಯೆ 102<br>ರೂ.11,48,13,424.00 |
| 5 | ಸಾಲ ಸುಸ್ತಿಯಾಗಿರುವ ಆಡಳಿತ ಮಂಡಳಿ ಸದಸ್ಯನು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ಕಲಂ 29 ಸಿ(ಎ) ರನ್ವಯ ಆಡಳಿತ ಸದಸ್ಯರೆಂದು ಮುಂದುವರೆಯಲು ಅನರ್ಹರಾಗಿರುವ ಕಾರಣ ಇಂತಹ ಸದಸ್ಯರ ವಿರುದ್ಧ ಕ್ರಮ ಕೈಗೊಳ್ಳುವಂತೆ ಇಲಾಖಾ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವರದಿಯಲ್ಲಿ ಸೂಚಿಸಲಾಗಿದೆಯೇ? | ಆಡಳಿತ ಮಂಡಳಿ ಸದಸ್ಯರ ಸಾಲ ಸುಸ್ತಿ ಇರುವುದಿಲ್ಲ. |
| 6 | ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು | ಯಾವುದೂ ಇರುವುದಿಲ್ಲ. |
| 7 (1) | ಎನ್.ಪಿ.ಎ ಬಗ್ಗೆ ವಿಮರ್ಶೆ (ನಿಗದಿಪಡಿಸಿದ ನಮೂನೆಯಲ್ಲಿ ಎನ್.ಪಿ.ಎ ತ:ಖ್ತೆಯನ್ನು ದೃಢೀಕರಿಸಿ ಲಗತ್ತಿಸುವುದು) | ಆರ್.ಬಿ.ಐ. ಸೂಚನೆ ಪ್ರಕಾರ ಎನ್.ಪಿ.ಎ. ಬಗ್ಗೆ ವಿಮರ್ಶಿಸಲಾಗಿದೆ. ಜೊತೆಗೆ ಪಟ್ಟಿಯನ್ನು ಲಗತ್ತಿಸಿದೆ. |
| (2) | ದಿ.31–3–2024ಕ್ಕೆ ಇರುವ ಎಲ್ಲಾ ಸಾಲಗಳ ರಿಸರ್ವ್ ಬ್ಯಾಂಕಿನ (IRAC) ಸುತ್ತೋಲೆಯಂತೆ ವರ್ಗೀಕರಿಸಲಾಗಿದೆಯೇ? | ಹೌದು |
| (3) | ಈ ಮೇಲಿನಂತೆ ವರ್ಗೀಕರಿಸಲಾಗಿರುವ ಅನುತ್ಪಾದಕ ಆಸ್ತಿಗಳಿಗೆ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯವಿರುವ ಅವಕಾಶಗಳನ್ನು ಶತಪ್ರತಿಶತ ರಷ್ಟು ಕಲ್ಪಿಸಲಾಗಿದೆಯೇ? | ಹೌದು |
| (4) | ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳ ಪ್ರಕಾರ ಅವಶ್ಯ ವಿರುವ ಅವಕಾಶವನ್ನು ಕಲ್ಪಿಸುವಲ್ಲಿ ಏನಾದರೂ ಕೊರತೆ ಇದೆಯೇ? ಇದ್ದಲ್ಲಿ ರಕ್ಕಮುಗಳನ್ನು ಕಡ್ಡಾಯವಾಗಿ ನಮೂದಿಸುವುದು. | ಕೊರತೆ ಇಲ್ಲ. |

| | | | |
|---|---|---|---|
| | (5) | ಕೊರತೆ ಇರುವ ರಕ್ಕಮಿನ ಅವಕಾಶ ಕಲ್ಪಿಸಲು ಬ್ಯಾಂಕಿನ ಆಡಳಿತ ಮಂಡಳಿಯವರು ನಿರಾಕರಿಸಿದಲ್ಲಿ ಈ ಕುರಿತು ವರದಿ ಪುಟ (4) ರಲ್ಲಿ ಸೂಚಿಸಿದಂತೆ ಅರ್ಹತಾತ್ಮಕ ಅಭಿಪ್ರಾಯ ನೀಡಲಾಗಿದೆಯೇ? | ಅಂತಹ ಪ್ರಕರಣ ಇರುವುದಿಲ್ಲ. |
| | (6) | ಕಡಿಮೆ ಅವಕಾಶ ಕಲ್ಪಿಸಿರುವದರಿಂದ ಬ್ಯಾಂಕಿನ ಪ್ರಸಕ್ತ ಸಾಲಿನ ನಿವ್ವಳ ಲಾಭದ ಮೇಲೆ ಬೀರುವ ಪರಿಣಾಮ ಹಾಗೂ ಸದರಿ ನಿವ್ವಳ ಲಾಭ ಕ.ಸ. ಸಂಘಗಳ ನಿಯಮ 22ರ ವ್ಯತಿರಿಕ್ತವಾಗಿದ್ದರಿಂದ ಪ್ರಮಾಣೀಕರಿಸದೇ ಈ ಕುರಿತು ವಿವರವಾಗಿ ವಿಮರ್ಶಿಸುವುದು. | ಅಂತಹ ಪ್ರಕರಣ ಇರುವುದಿಲ್ಲ. |
| | 8 | ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಸುಸ್ತಿ ಇದ್ದಲ್ಲಿ, ಕೆಳಕಂಡಂತೆ ವಿವರಗಳನ್ನು ನೀಡುವುದು. | ಮಾಜಿ ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳ ಬಗ್ಗೆ ಪ್ರತ್ಯೇಕ ಪಟ್ಟಿ ಲಗತ್ತಿಸಿದೆ. ವಿವರದ ಪಟ್ಟಿಲಗತ್ತಿಸಿದೆ. |

| ಕ್ರ. ಸಂ. | ನಿರ್ದೇಶಕರ ಹೆಸರು | ಬಾಕಿ ಸಾಲದ ಮೊತ್ತ (ಅಸಲು) | ಸುಸ್ತಿ ಸಾಲದ ಬಗ್ಗೆ | | ಯಾವ ದಿನಾಂಕದಿಂದ ಸುಸ್ತಿಯಾಗಿದೆ | ಷರಾ |
|---|---|---|---|---|---|---|
| | | | ಅಸಲು | ಬಡ್ಡಿ | | |
| | | ವಿವರ ಪಟ್ಟಿಯನ್ನು ಲಗತ್ತಿಸಿದೆ. | | | | |

| | | | |
|---|---|---|---|
| | 9 | ಆದ್ಯತಾ ವಲಯದ ಬಾಕಿ ಸಾಲದ ಪ್ರಮಾಣದ ಬಗ್ಗೆ ವಿವರಣೆ | ದಿ.31-3-2024ಕ್ಕೆ ರೂ.76,41,06,000.00 ಆದ್ಯತಾ ವಲಯದ ಸಾಲ ನೀಡಿದ್ದು, ಸಾಲಾಖೈರಿಗೆ ರೂ.61,96,07,000.00 ಗಳು ಬರಬೇಕಾಗಿದ್ದು, ಈ ಸಾಲಗಳ ಪೈಕಿ ರೂ. 5,23,66,000.00 ಗಳು ಸುಸ್ತಿಯಾಗಿರುತ್ತದೆ |
| | 10 | ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳಲ್ಲಿ ಸಾಲಾಖೈರಿಗೆ ಬರಬೇಕಾದ ಬಾಕಿ ಮೊತ್ತದ ಪ್ರಮಾಣದ ಬಗ್ಗೆ. | ರೂ.25,84,16,000-00 ಗಳನ್ನು ನೀಡಿದ್ದು ಬರಬೇಕಾಗಿರುತ್ತದೆ. |
| | 11 | ಸಾಲಾಖೈರಿಗೆ ಆದ್ಯತಾ ವಲಯದ ಪೈಕಿ ದುರ್ಬಲ ವರ್ಗದವರಿಗೆ ನೀಡಿರುವ ಸಾಲಗಳ ಶೇಕಡಾವಾರು ಪ್ರಮಾಣ | ಒಟ್ಟು ಸಾಲದಲ್ಲಿ ಶೇ.41.71% |

**ಸಾಲಗಳಲ್ಲಿ ಗಮನಿಸಲಾದ ನ್ಯೂನತೆಗಳು:**

[ಸಾಲ ನೀಡಿಕೆಯಲ್ಲಿ ಗಮನಿಸಲಾದ ನ್ಯೂನ್ಯತೆ, ಉಪನಿಯಮಕ್ಕೆ ವಿರುದ್ದವಾಗಿ ನೀಡಲಾಗಿರುವ ಸಾಲ, ಜೋಡಣೆ ಷೇರು ಪಡೆಯದೇ ಇರುವ ಬಗ್ಗೆ, ಬಡ್ಡಿ ಆಕರಣೆ ಸರಿಯಿಲ್ಲದ ಬಗ್ಗೆ ಪೂರ್ಣ ವಿಮರ್ಷೆ ನೀಡುವುದು. **ಅಂತಹ ಪ್ರಕರಣಗಳು ಇರುವುದಿಲ್ಲ**.

## (26) ಸಂಘದ ಸ್ಥಿರಾಸ್ತಿ-ಚರಾಸ್ತಿಗಳ ಪರಿಶೀಲನೆ

| ಎ | | ಸ್ಥಿರಾಸ್ತಿ | ನಿವೇಶನ | ವಿವರ | ವಿಸ್ತೀರ್ಣ | ಮೊತ್ತ ರೂ. |
|---|---|---|---|---|---|---|
| | 1 | **ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು** | ಕಟ್ಟಡ | ನಂ.6, ಹಾಸ್ಪಿಟಲ್ ರಸ್ತೆ, ಬೆಂಗಳೂರು-53. | | ನಿವೇಶನ ರೂ. 6,93,93,625-00 ಕಟ್ಟಡ ರೂ. 38,45,760.43 |

| | | | |
|---|---|---|---|
| | 1 | ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ದಾಖಲಾತಿಗಳು ಹಾಗೂ 'ಕಡತ' ಉತಾರೆ ಪರಿಶಿಲಿಸಿದ ಬಗ್ಗೆ ವಿಮರ್ಷೆ | ಪರಿಶೀಲಿಸಲಾಗಿದೆ. |
| | 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಬರೆದಿಡಲಾಗಿದೆ. |
| | 3 | ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು. |
| | 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಮಾಡಲಾಗಿದೆ. |
| | 5 | ಸ್ಥಿರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ತೆಗೆದಿರಿಸಿದೆ. |
| | 6 | ಗೋಡಾನುಗಳಿದ್ದಲ್ಲಿ ಅವುಗಳ ಉಪಯುಕ್ತತೆ ಬಗ್ಗೆ ವಿಮರ್ಶೆ | ಗೋಡೌನುಗಳು ಇರುವುದಿಲ್ಲ. |
| | 7 | ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ, ಅವುಗಳ ಮೇಲೆ ಸರಿಯಾಗಿ ಬಾಡಿಗೆ ಸ್ವೀಕೃತಿ ಯಾಗುತ್ತಿದೆಯೇ? ಕಾಲಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆಯೇ? | ಕಟ್ಟಡಗಳನ್ನು ಬಾಡಿಗೆ ನೀಡಿಲ್ಲ. |
| | 8 | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಅದು ನಿಯಮಾನುಸಾರ ಮಾಡಲಾಗಿದೆಯೇ? ಉಲ್ಲಂಘನೆಗಳಿದ್ದಲ್ಲಿ ವಿವರಿಸುವುದು. | ಯಾವುದೂ ಇಲ್ಲ. |
| | 9 | ವರದಿ ಸಾಲಿನಲ್ಲಿ ವಿಲೇಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಷೆ. | ಯಾವುದೂ ಇಲ್ಲ. |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲದವರೆಗೂ ಪಾವತಿಸಲಾಗಿದೆಯೇ? | ಪಾವತಿಸಲಾಗಿದೆ. |
| ಬಿ | | **ಚರಾಸ್ತಿ** | |
| | 1 | ಸಂಘವು ಹೊಂದಿರುವ ಚರಾಸ್ತಿ ವಿವರಗಳು | ನಂ.6, ಹಾಸ್ಪಿಟಲ್ ರಸ್ತೆ, ಬೆಂಗಳೂರು. |
| | 2 | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ರಿಜಿಸ್ಟರ್ ಬರೆದಿಡಲಾಗಿದೆ. |
| | 3 | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| | 4 | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ಹೌದು |
| | 5 | ಚರಾಸ್ತಿಗಳ ಮೇಲೆ ನಿಬಂದಕರ ಸುತ್ತೋಲೆಯಂತೆ ಅಥವಾ ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಷೆ. | ಹೌದು<br>ಆದಾಯ ಕರ ಕಾಯ್ದೆಯಂತೆ ತೆಗೆದಿರುವ ಸವಕಳಿಯನ್ನು ತೆಗೆಯಲಾಗಿದೆ. |
